UNIVERSAL LIBRARY

OU_202306

UNIVERSAL LIBRARY

ಮನೋ[illegible] [illegible] [illegible]ಗಳ್.

[illegible]

# ವೈಕುಂಠ ಮುತ್ತಿಗೆ

(ಪೌರಾಣಿಕ ನಾಟಕ)

ನಾಟಕಕಾರರು

ಅಚ್ಯುತ ಕೃಷ್ಣರಾವ ಹೊಯಿಲಗೋಳ

೧೯೪೯

(ಬೆಲೆ ೧-೮-೦)

ಪ್ರಕಾಶಕರು

ಅ. ಕೃ. ಹೊಯಿಲಗೋಳ

ಶ್ರೀ ಗುರುರಾಜ ಗ್ರಂಥಮಾಲೆ

ವಕೀಲಚಾಳ    ಗದಗ

ಮುದ್ರಕರು
ಗಳಗನಾಥ ಮುದ್ರಣಾಲಯ
ಧಾರವಾಡ

ಮೊದಲನೆಯ ಮುದ್ರಣ ೧೯೪೯

---

[ಈ ಪುಸ್ತಕದ ಎಲ್ಲ ಒಡೆತನವು ಗ್ರಂಥಕರ್ತರಿಗೆ ಸೇರಿದೆ]

ಮಾರಾಟಗಾರರು

**ಗಳಗನಾಥ ಸುರಸ ಗ್ರಂಥಮಾಲೆ,**

**ಧಾರವಾಡ**

# ಮುನ್ನುಡಿ

ಸ್ವಾರ್ಥಪರ ಐಹಿಕ ಸುಖಮಾರ್ಗವನ್ನಷ್ಟೇ ತೋರಿಸಿಕೊಡುವ ಪಾಶ್ಚಿಮಾತ್ಯ ಶಿಕ್ಷಣದ ಪರಿಣಾಮದಿಂದ ಭಾರತದ ಬಾಲ-ಬಾಲಿಕೆಯರ ಉಚ್ಚ ಸಂಸ್ಕಾರವು ದಿನದಿನಕ್ಕೆ ಮಣ್ಣುಗೂಡುತ್ತ ನಡೆದಿರುವದು ಮುಂದರಿಯಬಾರದೆಂದೇ ಭಾರತದ ಬಾಲಭಕ್ತನಾದ ಪ್ರಲ್ಹಾದನ ಚರಿತ್ರೆಯನ್ನು ಮೊದಲಿನ ಚರಿತ್ರೆಗೆ ಕುಂದುಬಾರದಹಾಗೆ ಈಗಿನ ತತ್ವಕ್ಕನುಸರಿಸಿ ನಾಟಕದ ರೂಪದಲ್ಲಿ ರಚಿಸಿದ್ದೇನೆ.

ಪ್ರಲ್ಹಾದನ ಚರಿತ್ರೆಯೇನೂ ಹೊಸದಲ್ಲ. ಭಾರತೀಯರಿಗೆ ಪ್ರಲ್ಹಾದರಾಜರ ಪರಿಚಯ ಮಾಡಿಕೊಡಹೋಗುವದೆಂದರೆ ಹಗಲಿನಲ್ಲಿ ಇವನೇ ಸೂರ್ಯನು; ಎಂದು ಆಕಾಶದಕಡೆಗೆ ಕೈಮಾಡಿ ತೋರಿಸುವ ಮೂಢನ ಕೃತಿಯ ಹಾಗೆಯೇ ಸರಿ. ಈ ಬಾಲಭಕ್ತನು ತನ್ನ ತನು ಮನ ಧನಗಳನ್ನಷ್ಟೇ ಅಲ್ಲ, ತನ್ನ ಹೃದಯ ಪ್ರಾಣಪುಷ್ಪಗಳೆರಡನ್ನೂ ತನ್ನ ಆರಾಧ್ಯ ದೇವನಾದ ಶ್ರೀಮನ್ನಾರಾಯಣನ ಪವಿತ್ರ ಪಾದಗಳಿಗೆ ಮುಡುಪಾಗಿಟ್ಟು, ಆ ಮಹಾಮಹಿಮನ ಗುಣಗಾನ, ಧ್ಯಾನ ಭಜನೆಗಳಲ್ಲಿ ತಲ್ಲೀನನಾಗಿ, ತನ್ನ ತಂದೆಯಾದ ಹಿರಣ್ಯಕಶಿಪುವು ಕೊಡುತ್ತಿರುವ ಕಠಿಣ ಯಾತನೆಗಳನ್ನೆಲ್ಲ ಬಹು ಶಾಂತತೆಯಿಂದ ಸಹಿಸುತ್ತ, ಲೋಕಕಂಟಕ ಹಿಂಸಾಮಯ ಸಮ್ರಾಟಶಕ್ತಿಯನ್ನು ಅಹಿಂಸಾಮಯ ಶಾಂತಿಶಕ್ತಿಯಿಂದಲೇ ಗೆದ್ದು ಮೆರೆದ ವಿಶ್ವದ ಪ್ರಥಮ ಮಹಾತ್ಮನೇ ಆಗಿರುವನು. ದೇವರನ್ನು ನಂಬಿದವನಿಗೆ ಸಾವಿಲ್ಲ, ದೇವರು ಎಲ್ಲಿನೋಡಿದಲ್ಲಿ ಇರುವನು; ಭಕ್ತಿಯ ಬೆಳಕಿನಲ್ಲಿ ಮಾತ್ರ ಕಾಣುವನು; ಎಂಬುದನ್ನು ತನ್ನ ನಿರ್ಮಲ ಭಕ್ತಿಯ ಪ್ರಭಾವದಿಂದ ಜಗತ್ತಿನ ನಿದರ್ಶನಕ್ಕೆ ತಂದುಕೊಟ್ಟ ಭಕ್ತಾಗ್ರೇಸರ ಚಕ್ರವರ್ತಿಯೂ ಕೂಡ ಆಗಿದ್ದಾನೆ; ಎಂಬುದನ್ನು ಈ ನಾಟಕದಲ್ಲಿ

ವರ್ಣಿಸಿದೆ.

ಈ ನಾಟಕವು ಓದುಗರಲ್ಲಿ ದೇವರವಿಷಯದ ಭಕ್ತಿಯನ್ನು ಹುಟ್ಟಿಸಲಿ, ಭಾರತದ ಧರ್ಮಕ್ಕೆ ಮೊದಲಿನ ಕಳೆಯೇರಲಿ, ಮಾನವರು ದೇವಭಕ್ತರಾಗಿ ಧರ್ಮಿಷ್ಠರಾಗಿ ಮುಕ್ತಿಸುಖ ಸವಿಯಲಿ ಎಂದು ಈನಾಟಕದ ನಾಯಿಕನಿಗಾಗಿಯೇ ಅವತಾರತಾಳಿ, ಕಂಬಒಡೆದು ಬಂದಆರಾಧ್ಯ ದೇವನಾದ ಶ್ರೀಲಕ್ಷ್ಮೀನರಸಿಂಹದೇವರ ಪವಿತ್ರ ಪಾದಪದ್ಮಗಳಿಗೆ ತಿರುತಿರುಗಿ ಅನೇಕಸಲ ನಮಿಸಿ ಬೇಡಿಕೊಳ್ಳುತ್ತೇನೆ.

ಈ ಕಲಿಯುಗದಲ್ಲಿ ಈನಾಟಕದ ಎರಡನೆಯ ಅವತಾರವಾದ ಶ್ರೀಗುರುರಾಯರ ವೃಂದಾವನ ಸ್ಥಾಪನದ ಪರಮ ಮಂಗಲಕಾರ್ಯವು ಮೇಣೇಧಾಳದಲ್ಲಿ ಜರುಗುತ್ತಿರುವಾಗ, ಆದೇಊರಲ್ಲಿಯ ನಟರಿಂದ ಈ ನಾಟಕವನ್ನು ರಂಗಭೂಮಿಯಮೇಲೆ ಯಶಸ್ವಿಯಾಗುವಹಾಗೆ ತರುವದಕ್ಕೆ ಮುಖ್ಯಕಾರಣರಾದ ದಿವಂಗತ ಶ್ರೀಮಂತ ರಾಜಾ ಸ್ವಾಮಿರಾವ ವೆಂಕಟರಾವ ದೇಸಾಯಿಯವರಿಗೂ, ಅಲ್ಲಿಯ ನಟವರ್ಗದವರಿಗೂ, ಇಷ್ಟುದಿನ ಕತ್ತಲೆಯಲ್ಲಿದ್ದ ಈ ನಾಟಕವನ್ನು ಬೆಳಕಿಗೆತರಲು ಕಾರಣರಾದ ಉದಾರಹೃದಯದ ವರ್ಗಣಿದಾರರಿಗೂ ಕೊನೆಯಲ್ಲಿ ಈ ನನ್ನ ನಾಟಕವನ್ನು ಬಹು ಶ್ರಮಬಟ್ಟು ಸ್ವಲ್ಪೇದಿವಸಗಳಲ್ಲಿ ಬಹು ಅಂದವಾಗಿ ಅಚ್ಚುಹಾಕಿಕೊಟ್ಟ ರಾ. ರಾ. ಶಂಕರಭಟ್ಟ ಜೋಶಿಯವರಿಗೂ ಅವರ ಕುಟುಂಬದವರಿಗೂ ನಾನು ಬಹು ಋಣಿಯಾಗಿದ್ದೇನೆ. ಪರಮಪೂಜ್ಯ ಗುರುಗಳ ಆಜ್ಞೆಯಂತೆ—ಬರಿಯ ಬಾಯಿಮಾತಿನಿಂದಲ್ಲ—ನುಡಿಯಂತೆ ನಡೆದು ಕನ್ನಡನಾಡಿನ ಮೂಲೆಮೂಲೆಯಲ್ಲಿ ಕನ್ನಡದ ಪ್ರಸಿದ್ಧ ಬಂಗಾಲದ ಬಂಕಿಮಚಂದ್ರರೇ ಎಂದು ಪ್ರಸಿದ್ಧಿಯನ್ನು ಪಡೆದ ದಿ. ಶ್ರೀ ಗಳಗನಾಥರವರ ಗಳಗನಾಥ ಮುದ್ರಣಾಲಯದಲ್ಲಿ ನನ್ನ ಗ್ರಂಥವು ಅಚ್ಚಾದದ್ದಕ್ಕಾಗಿ ನನಗತಿ ಅಭಿಮಾನವೆನಿಸುತ್ತದೆ.


ಈ ನಾಟಕವನ್ನು ಬರೆಯಲು ಮೂಲಕಾರಣರಾದ ಶ್ರೀಗುರುರಾಯರ ಚರಣದಾಸ ಭೀಮರಾವ ಹೂಗಾರ, ಈನಾಟಕದಲ್ಲಿಯ ಪದಗಳ ಧಾಟಿ

ಯನ್ನು ಕೊಟ್ಟ ಶ್ರೀ ವಿಠ್ಠಲಸಾಕಬಾಡಿ ಹಾಗೂ ನನ್ನ ಗ್ರಂಥಮಾಲೆಯ ಮುಖಪುಟದಮೇಲೆ ಹಾಕುವ ಬ್ಲಾಕಿಗಾಗಿ ಓಂಕಾರದಲ್ಲಿಶ್ರೀ ಗುರುರಾಯರ ವೃಂದಾವನದ ಫೋಟೋ ಕೈಯಿಂದ ತೆಗೆದುಕೊಟ್ಟ ನನ್ನ ಮಗ ಚಿ|| ಬಿ. ಎ. ಹುಯಿಲಗೋಳ ಇವರೆಲ್ಲರ ಋಣಭಾರವನ್ನಿಳಿಸುವದು ನನ್ನಿಂದ ಸಾಧ್ಯವೇ ಇಲ್ಲ.

ಸಾಧ್ಯವೇ ಆಗದ ಕಾರ್ಯಮಾಡುವ ಹೊಣೆಯ ಭಾರವನ್ನು ದೇವರಿಗೆ ಒಪ್ಪಿಸಿ, ಆ ದೇವನು ಎಲ್ಲರನ್ನು ಧರ್ಮಾತ್ಮರನ್ನಾಗಿ ತಮ್ಮ ಭಕ್ತರನ್ನಾಗಿ ಮಾಡಿಕೊಂಡು ಅವರೆಲ್ಲರು ಬಹುಕಾಲ ಸುಖದಲ್ಲಿಬಾಳುವಹಾಗೆ ಮಾಡಲಿ ಎಂದು ಆ ಕರುಣಾಶಾಲಿಯ ಪೂಜ್ಯಪಾದಗಳಲ್ಲಿ ಬಾರಿಬಾರಿಗೆ ನಮಿಸಿ ಬೇಡಿ ಕೊಳ್ಳುವದೇ ನನ್ನ ಕೊನೆಯ ಹಿರಿದಾದ ಹಂಬಲವು.

ಕನ್ನಡದ ಅಡಿಯಾಳು

ಅಚ್ಯುತ ಕೃಷ್ಣರಾದ ಹುಯಿಲಗೋಳ



### ಬಾಲಭಕ್ತನವಿಷಯವಾಗಿ

## ದೇವನ ವಾಕ್ಯವು

ಯದಾ ದೇವೇಷು ಗೋಷು ವಿಪ್ರೇಷು ಸಾಧುಷು|

ಧರ್ಮೇಮಯಿಚ ವಿದ್ವೇಷಃ ಸ ವಾ ಆಶುವಿನಶ್ಯತಿ||

ನಿರ್ವೈರಾಯ ಪ್ರಶಾಂತಾಯ ಸ್ವಸುತಾಯ ಮಹಾತ್ಮನೆ|

ಪ್ರಲ್ಹಾದಾಯ ಯದಾದ್ರುಹ್ಯೇತ್ ಹನಿಷ್ಯೇಪಿ ವರೋರ್ಜಿತಮ್||

**ಶ್ರೀಭಾಗವತ ಸಪ್ತಮಸ್ಕಂಧ** ಶ್ಲೋಕ ೩೩

ಪ್ರಲ್ಹಾದಶ್ಚಾಸ್ಮಿ ದೈತ್ಯಾನಾಂ ಶ್ರೀಗೀತೆ ೧೦ನೆಯ ಅಧ್ಯಾಯ

ಗದುಗಿನ ಕಿಲ್ಲೆಯಲ್ಲಿರುವ

ಶ್ರೀ ಲಕ್ಷ್ಮೀನಾರಾಯಣದೇವರ

ಪರಮ ಪೂಜ್ಯ ಅಡಿದಾವರೆಗಳಿಗೆ

ಈ ನಾಟಕವೆಂಬ ಪ್ರಥಮ ಪುಷ್ಪವನ್ನು ಅರ್ಪಣ ಮಾಡಿದ್ದೇನೆ.

ಈ ನಾಟಕದಲ್ಲಿಯ

# ಮುಖ್ಯ ಪಾತ್ರಗಳು

| | | |
|---|---|---|
| ೧ | ಬ್ರಮ್ಹ | |
| ೨ | ಹಿರಣ್ಯಕಶಿಪು | ಉಪನಾಯಕ |
| ೩ | ಕಯಾಧು | ನಾಯಕಿ |
| ೪ | ಪ್ರಲ್ಹಾದ | ನಾಯಕ |
| ೫ | ನಾರದ | ದೇವಋಷಿ |
| ೬ | ಅಕ್ರಾಳ | ದೂತರು |
| ೭ | ವಿಕ್ರಾಳ | |
| ೮ | ರಂಭಾ | ವೇಶ್ಯಾ |
| ೯ | ಮೇಘನಾದ | ಸರದಾರರು |
| ೧೦ | ಸಿಂಹನಾದ | |
| ೧೧ | ಮಂಜುಘೋಷಾ | ದಾಸಿಯು |
| ೧೨ | ಭೂದೇವಿ | |
| ೧೩ | ಶ್ರೀನರಸಿಂಹ | |
| ೧೪ | ತಿರುಮೂಲಿ | ಪ್ರಲ್ಹಾದನ ಗೆಳೆಯರು |
| ೧೫ | ಹುಡುಗರು | |

ಹರಿಃ ಓಂ

|| ಶ್ರೀ ಗುರುರಾಜ ಪ್ರಸನ್ನ ||

|| ನಾಹಂ ಕರ್ತಾ ಹರಿ: ಕರ್ತಾ ತತ್ಪೂಜಾ ಕರ್ಮ ಚಾಖಿಲಂ ||

# ವೈಕುಂಠಕ್ಕೆ ಮುತ್ತಿಗೆ

ಅಥವಾ

## ವಿಶ್ವದ ಪ್ರಥಮ ಮಹಾತ್ಮಾ (ನಾಟಕವು)

## ೧ನೆಯ ಅಂಕ

### ನಾಂದಿಯು

೧ ಪದ ರಾಗ ಭೂಪ ತ್ರಿತಾಳ

ಶ್ರೀಹರಿ ನರಹರಿ ಪಾಲಿಪುದು ನರರ |
ಮಹಿಧರ ಸ್ಮರಿಪೆ ಸುದರ್ಶನಧಾರಿ || ಪ ||
ಅನಂತ ಲೀಲಾಲೋಲ ಸಿರಿವರಾ |
ದನುಜಾಂತಕ ಭವನಿವಾರಿ ವಂದಿಪೆ ಪ್ರಭುವರ || ೧ ||
ಅನಂತ ಮಾಯಾಜಾಲ ವೆಸೆಯುತ |
ಜನವೃಂದವನಳಿಸಿ ನಗಿಸಿ ಕುಣಿಸುವ ನಟವರ || ೨ ||
ದನುಜನುದರವನೀ ಶೀಳಿ ಕರುಣದಿ |
ದನುಜಾತನ ಪೊರೆ ಮುದದಿ ನುತಿಪೆವುನರಹರಿ || ೩ ||

(ನಾಂದಿಯನ್ನು ಹಾಡಿದ ಮೂವರು ತರುಣಿಯರು ಹೂವಿನಮಳೆಗರೆದು ಹೋಗುವರು.)

# ೧ನೆಯ ಪ್ರವೇಶ

**ಸ್ಥಳ:**—ತಪೋಭೂಮಿಯು.

ಪಾತ್ರಗಳು—ಬ್ರಹ್ಮ, ನಾರದ, ಪ್ರಲ್ಹಾದ, ಕಯಾಧು, ಹಿರಣ್ಯ ಕಶಿಪು, ಅಕ್ರಾಳ, ವಿಕ್ರಾಳ.

**ಬರುವರೀತಿ:**—( ಹಿರಣ್ಯಕಶಿಪುವು ಹುತ್ತಿನಲ್ಲಿ ಕುಳಿತು—"ಪಿತಾಮಹ ಪಾಹಿಮಾಂ ಚತುರ್ಮುಖ ಪಾಹಿಮಾಂ" ಎಂದುಎನ್ನುತ್ತಿರುವನು. ದೈತ್ಯರಾಜನ ತಪೋಜ್ವಾಲೆಯು ಕಾಡನ್ನು ಸುಡುತ್ತಿರುವದು ಮುಳಿಗಸೆದು ಅಗ್ನಿಯು ಶಾಂತವಾದಮೇಲೆ ಬಹ್ಮನು ತನ್ನ ಕಮಂಡಲದಲ್ಲಿಯ ನೀರನ್ನು ದೈತ್ಯರಾಜನಮೇಲೆ ಚಿಮ್ಮಡಿಸಿದೊಡನೆ ಆ ದೈತ್ಯನು ಸರ್ವಾಂಗಸುಂದರನಾಗಿ ತನ್ನ ಆಯುಧಸಹಿತ ಪ್ರಕಟನಾಗುವನು.)

೨ ಶ್ಲೋಕ

ನಮ ಆದ್ಯಾಯ ಬೀಜಾಯ ಜ್ಞಾನ ವಿಜ್ಞಾನ ಮೂರ್ತಯೆ|
ಪ್ರಾಣೇಂದ್ರಿಯ ಮನೋಬುದ್ಧಿರ್ವಿಕಾರೈರ್ವ್ಯಕ್ತಿಮೀಯುಷೆ || ೧ ||
ತ್ವಮೀಶಿಷೆ ಜಗತಸ್ತರಥುಷಶ್ಚ ಪ್ರಾಣೇನ ಮುಖ್ಯೇನ ಪತಿಃಪ್ರಜಾನಾಮ್ |
ಚಿತ್ತಸ್ಯ ಚಿತ್ತೇರ್ಮನ ಇಂದ್ರಿಯಾಣಾಂ ಪತಿರ್ಮಹಾನ್ಭೂತ ಗುಣಾಶ
ಯೇಶಃ || ೨ ||

**ಬಹ್ಮ:**—ಹಿರಣ್ಯಕಶಿಪು.

**ಹಿರಣ್ಯ:**—ದೇವಾ.

**ಬ್ರಹ್ಮ**—ನಿನ್ನ ತಪಃಪ್ರಭಾವಕ್ಕೆ ಮೆಚ್ಚಿ ಬಂದಿದ್ದೇನೆ. ನಿನಗಾವ ಪದ ಬೇಕಾಗಿದೆ?

**ಹಿರಣ್ಯ**—ಅಮರ ಪದ ಅಮರ ಪದ.

**ಬ್ರಹ್ಮ**—ಅಮರಪದವೆ!! ಅದೆಂಥ ಅಮರಪದ ದೈತ್ಯೇಂದ್ರಾ.

**ಹಿರಣ್ಯ**—ದೇವಾ, ಹರಿಹರ ಬ್ರಮ್ಹರಿಂದ ದೇವದಾನವ ಮಾನವರಿಂದ ಪಶುಪಕ್ಷಿ ಕ್ರಿಮಿಕೀಟಕಾದಿಗಳಿಂದ ಇಷ್ಟೇ ಅಲ್ಲ. ಹೊರಗಾಗಲಿ ಒಳಗಾಗಲಿ ಭೂಮಿಯಲ್ಲಾಗಲಿ ಆಕಾಶದಿಂದಾಗಲಿ ನೀರಿನಿಂದಾಗಲಿ ಶಸ್ತ್ರದಿಂದಾಗಲಿ ಅಸ್ತ್ರ

ದಿಂದಾಗಲಿ ಹಗಲಾಗಲಿ ರಾತ್ರಿಯುಲ್ಲಾಗಲಿ ನನಗೆ ಮರಣವು ಬಾರದ ಹಾಗೆ ವರ ಕೊಡಬೇಕೆಂದು ಬೇಡಿಕೊಳ್ಳುವೆನು

**ಬ್ರಹ್ಮ:**—ತಥಾಸ್ತು. (ಮರೆಯಾಗುವನು)

**ಹಿರಣ್ಯ:**—(ಸ್ವಗತ) ಧನ್ಯನಾದೆ ಮಾನ್ಯನಾದೆ ಕಾಲನ ಕಾಲನಾದೆ. ಅಮರರ ಅಮರನಾದೆ. ದೇವನ ದೇವನಾದೆ. ಎಲ್ಲಿಯ ದೇವ! ನಾನೇ ದೇವ; ನನಗೆ ಅಮರಪದಕೊಟ್ಟವನು ದೇವನಲ್ಲ. ನನ್ನ ತಪಃಪ್ರಭಾವ ದಿಂದಲೇ ಹುಟ್ಟಿದ ನಾಲ್ಕುಮುಖದ ಒಂದು ವಿಚಿತ್ರ ಪ್ರಾಣಿಯು. ಇನ್ನೇಕೆ ವಿಲಂಬ, ನಮ್ಮ ವರ್ಣದವರ ವಿಜಯಧ್ವಜ ಮೆರೆಯಿಸುವದಕ್ಕೆ ದಿಗ್ವಿಜಯ ಕ್ಕಾಗಿ ಹೊರಡುವೆನು. ನನ್ನೆದುರು ನಿಂತು ಯುದ್ಧ ಮಾಡುವವರು ಈ ಲೊಕದಲ್ಲಿ ಏಕೆ? ಯಾವಲೊಕದಲ್ಲಿಯೂ ಇಲ್ಲ. ನಾನೀಗ ಮೊದಲಿನ ಹಿರಣ್ಯಕಶಿಪುವು ಅಲ್ಲ. ನನ್ನ ಅಮೋಘ ತಪಃಪ್ರಭಾವದ ಬಲದಿಂದ ನನ್ನ ರೂಪವೇ ಬದಲಾಗಿ ಹೋಗಿದೆ. ನಾನು ಜಗದ್ವಿಖ್ಯಾತ ಜಗದೇಕವೀರ ಅಜೇಯಅಜರಾಮರ ದಿಗ್ವಜಯಿ ಪ್ರಭುವು ಸುವರ್ಣಾಂಗಿ ವಜ್ರಾಂಗಿ ಆಗಿರುವೆನು. ಈ ನನ್ನ ವಜ್ರಮುಷ್ಟಿಯ ಒಂದೇ ಒಂದು ಪ್ರಹರಕ್ಕೆ ಸರ್ವವಿಶ್ವದ ನಾಶವಾಗುವದು. ನಾನು ವಿಶ್ವಶಕ್ತಿ ಸಾಮ್ರಾಟ ದೇವದೇವ. ಎಲ್ಲಿನೋಡಿದಲ್ಲಿ ನಾನೇ ನಾನು, ಹಂದಿಯಾಗಿ ಬಂಧುವನ್ನು ಕೊಂದ ಪುಂಡ ಹರಿಯನ್ನು ಇದ್ದಲ್ಲಿಂದ ಎಳತಂದು ಅವನ ಹೊಟ್ಟೆಯನ್ನು ಹರಿಯದೇ ಅವನ ರಕ್ತಪ್ರಾಶನ ಮಾಡದೇ ನನ್ನ ಬಂಧುವಿನ ನೊಂದ ಹೃದಯಕ್ಕೆ ಅಖಂಡ ಶಾಂತಿಯು ದೊರೆಯುವ ಆಶೆಯೇ ಇಲ್ಲ. ಇನ್ನೇಕೆ ವಿಲಂಬ? ಈ ನನ್ನ ವೀರಪ್ರತಿಜ್ಞೆಯನ್ನು ಸಾಂಗಗೊಳಿಸುವದಕ್ಕಾಗಿ ವೈಕುಂಠಕ್ಕೆ ಮುತ್ತಿಗೆ ಹಾಕುವೆನು, ವೈಕುಂಠಕ್ಕೆ ಮುತ್ತಿಗೆ.

**ಕಯಾಧು:**—(ಪ್ರವೇಶಿಸಿ) ನಾಥಾ, ನಾಥಾ, ಸ್ವಲ್ಪ ನಿಲ್ಲಿ. (ಅಡ್ಡ ಗಟ್ಟುವಳು)

**ಹಿರಣ್ಯ:** - ಹಾದಿಯನ್ನು ಬಿಡು ಕುಟಿಲೇ.

**ಕಯಾಧು.** - ಯುದ್ಧಕ್ಕೆ ಹೋಗಬೇಡಿರಿ.

**ಹಿರಣ್ಯ:**—ನನ್ನ ಮಂಗಲಕಾರ್ಯಕ್ಕೆ ವಿಘ್ನಮಾಡಬಂದ ನಿನ್ನ ಚಂಡನ್ನೇ ಚಂಡಾಡುವೆನು. (ಖಡ್ಗಪ್ರಹಾರಮಾಡಲು ಹೋದಾಗ)

**ಕಯಾಧು** :—ಶಾಂತರಾಗಿರಿ, ಮಹಾರಾಜ ಶಾಂತರಾಗಿರಿ.

**ಹಿರಣ್ಯ**:—ನಾನು ಶಾಂತನಾಗಬೇಕಾದರೆ ಹರಿಯ ಕರುಳು ನನ್ನ ಕೊರಳಿಗೆ ಹಾರವಾಗಬೇಕು. ಅವನ ಮಾಂಸವು ನನಗೆ ಆಹಾರವಾಗಬೇಕು. ಅವನ ರಕ್ತವು ನಾನು ಕುಡಿಯುವ ನೀರಾಗಬೇಕು. ನನ್ನ ಬಂಧುವನ್ನು ಕೊಂದ ಹರಿಯನ್ನು ನಾನು ಕೊಲ್ಲಬೇಕಾದರೆ, ನಾನು ಆ ಹರಿಯ ವೈಕುಂಠಕ್ಕೆ ಮುತ್ತಿಗೆ ಹಾಕಲಿಕ್ಕೇ ಬೇಕು. ನನ್ನ ವೀರ ಮಂಗಲಕಾರ್ಯಕ್ಕೆ ಪ್ರತಿಬಂಧ ಮಾಡಬೇಡ. ಸರಿ ಹಿಂದಕ್ಕೆ, ನೀಚಾತ್ಮಳೇ.

**ನಾರದ**—( ಪ್ರವೇಶಮಾಡಿ )ಇವಳು ಯಾರೆಂದು ತಿಳಿದಿರುವೆ?

**ಹಿರಣ್ಯ**—ನನ್ನ ವೀರ ಮಂಗಲ ಕಾರ್ಯಕ್ಕೆ ವಿಘ್ನಮಾಡಲು ಬಂದ ಅಮಂಗಲೆಯು.

**ನಾರದ**—ಅಲ್ಲ, ಮಂಗಲಾಂಗಿಯು. ಅಮರಪದ ದೊರಕಿಸಿದ ನಿನಗೆ ಮಾಲೆ ಹಾಕಿ ಸನ್ಮಾನ ಮಾಡಲು ಬಂದ ಅರ್ಧಾಂಗಿಯು.

**ಹಿರಣ್ಯ**—ತಂಬೂರಿದಾಸನ ಬೆನ್ನುಹತ್ತಿ ಬರಲಿಕ್ಕೆ ನನ್ನವಳು ಹುಚ್ಚಳಲ್ಲ.

**ಕಯಾಧು**—ಅವರು ತಂಬೂರಿದಾಸರಲ್ಲ. ದೇವ-ದಾನವರಿಬ್ಬರಿಗೂ ಪ್ರಿಯರಾದ ಪೂಜ್ಯರಾದ ದೇವಋಷಿಗಳು; ದೇವ-ದಾನವರ ಗುರುಗಳು.

**ಹಿರಣ್ಯ**—ಹೀಗೋ !! ( ನೋಡಿ ) ಮಹಾತ್ಮರೇ, ತಿಳಿಯದೇ ಮಾಡಿದ ಈ ದಾಸನ ಅಪರಾಧ ಕ್ಷಮಿಸಿರಿ. ಭಗವನ್, ಇವಳು ತಮ್ಮ ಕಡೆಗೆ ಬರಲೇನು ಕಾರಣ?

**ನಾರದ**—ನೀನು ತಪಸ್ಸಿಗಾಗಿ ಕಾಡಿಗೆ ಹೋದ ಸಂಧಿಯನ್ನು ಸಾಧಿಸಿ ಬಂದ ದೇವೇಂದ್ರನು ತನಗೆ ಶ್ರೀಹರಿಯ ಬೆಂಬಲವಿದೆ ಎಂಬ ಗರ್ವದಿಂದ ನಿನ್ನ ಹೆಂಡತಿಯನ್ನು ಶೆರೆಹಿಡಿದು ಸ್ವರ್ಗಕ್ಕೆ ಎಳೆದುಕೊಂಡು ಹೋಗುತ್ತಿದ್ದನು.

**ಹಿರಣ್ಯ**—ಹಾ !! ಇಷ್ಟಕ್ಕೆ ಸಾಕುಮಾಡಿ. ಇನ್ನುಮುಂದೆ ಕೇಳೆನು. ಇಲ್ಲಿಂದಲೇ ಸ್ವರ್ಗಕ್ಕೆ ಹಾರಿ ನನ್ನ ಪ್ರಿಯತಮೆಗೆ ನಿಷ್ಕಾರಣ ತಾಪಕೊಟ್ಟ, ದೇವೇಂದ್ರನನ್ನು ಅಲ್ಲಿಂದಲೇ ಭೂಮಿಗೆ ಒಗೆದು ಸ್ವರ್ಗದ ಸಂಪತ್ತನ್ನು ಸೂರೆಗೊಳ್ಳುವೆನು. ಸ್ವರ್ಗದ ಸುಂದರ ನಗರವನ್ನು ಬೆಂಕಿಯು

ಬಾಯಿಗೆ ಕೊಡುವೆನು. ಸ್ವರ್ಗಕ್ಕೆ ಹಾರಲಿ?

**ನಾರದ**—ಹಾರುವಿಯಂತೆ! ನಾನು ಹೇಳುವದನ್ನಾದರೂ ಕೇಳು.

**ಹಿರಣ್ಯ**—ತಾವು ಹೇಳುವದಾದರೂ ಏನು! ಹೇಳಿ.

**ನಾರದ**—ರಕ್ತ ಹರಿಸಬೇಡ.

**ಹಿರಣ್ಯ**—ರಕ್ತ ಹರಿಯದೆ ಜೀವಿಗಳು ಬದುಕುವದಿಲ್ಲ. ರಕ್ತ ಹರಿಯದೆ ಹಿಂಸೆಯ ನಾಶವಾಗಿ ಜಗತ್ತಿಗೆ ಶಾಂತಿಯು ದೊರೆಯುವದಿಲ್ಲ. ರಕ್ತ ಪಾತಕ್ಕಾಗಿ ಜನ್ಮತಾಳಿದ ಜಗದೇಕವೀರನು ವೈರಿಗೆ ಬೆದರಿ ಸುಮ್ಮನಿರಲಿಕ್ಕೆ ಕೈಲಾಗದ ರಣಹೇಡಿಯಲ್ಲ. ನರರ ಬೇಟೆ, ಸುರರ ಬೇಟೆ, ದೇವರ ಬೇಟೆ ಆಡುವ ರಣಸಿಂಹನು ಎಲ್ಲಿ ನೋಡಿದಲ್ಲಿ ರಕ್ತದ ನದಿಗಳನ್ನು ಹರಿಸುವನು. ಹೆಣಗಳ ಬಣವಿಗಳನ್ನೊಟ್ಟುವನು, ಸರ್ವಲೋಕಗಳಲ್ಲಿಯ ಸರ್ವಸಂಪತ್ತುಗಳನ್ನೆಲ್ಲ ತನ್ನ ಭಾಂಡಾಗಾರದಲ್ಲಿಟ್ಟು ಅನಂತಕಾಲ ಸುರಸುಂದರಿಯರೊಡನೆ ವಿಲಾಸ ಸುಖಗಳಲ್ಲಿ ರಾಜ-ರಾಜನಂತೆ ದೇವ-ದೇವನಂತೆ ಆನಂದಬಡುವೆನು ಆನಂದ.

ನಾರದ—ಹೀಗೆ ಮಾಡುವದರಿಂದ ಆನಂದವಾಗದು.

ಹಿರಣ್ಯ—ಅದೇಕೆ ಹೇಳಿ?

ನಾರದ—ದೈತ್ಯ ಸಾಮ್ರಾಟಾ, ಶಕ್ತಿಯಿದೆ ಸಂಪತ್ತಿದೆ ಎಂಬ ಸೊಕ್ಕಿನಿಂದ ಸೊಕ್ಕಿದ ಸಾಮ್ರಾಟನು ತನ್ನ ವರ್ಣದವರ ಹಾಗು ತನ್ನ ಹೊಟ್ಟೆಗಾಗಿ ಬಟ್ಟೆಗಾಗಿ ಸಾಕಷ್ಟು ಸಂಪತ್ತು ಇರಲು, ಅನ್ಯರ ರಾಜ್ಯ ಲಕ್ಷ್ಮಿಯ ಹರಣಮಾಡುವ ಮಹತ್ವಾಕಾಂಕ್ಷೆಗೆ ಬಲೆಬಿದ್ದು ಪರರಾಜ್ಯದಲ್ಲಿ ರಕ್ತಹರಿಸುವಲ್ಲಿ ಹೆಣಗಳ ಬಣವಿಗಳನ್ನೊಟ್ಟುವಲ್ಲಿ ಆನಂದಬಡುವವನು ಲೋಕರಕ್ಷಕ ರಾಜನಲ್ಲ. ಲೋಕಭಕ್ಷಕ ರಾಕ್ಷಸನು. ಆ ಅಧಮಾಧಮನಿಗೆ ಕಲ್ಯಾಣವಾಗುವದಿಲ್ಲ. ಅನಾಥರಾದ ಬಾಲಬಾಲಿಕೆಯರು, ಪತಿವ್ರತೆಯರು, ತರುಣ-ತರುಣಿಯರು, ನಿರಪರಾಧಿಗಳು ದುಃಖದಿಂದ ಸುರಿಸುತ್ತಿರುವ ಕಣ್ಣೀರುಗಳ ಹೊಳೆಗಳಲ್ಲಿ ಅವರ ಸರ್ವಸಂಪತ್ತುಗಳು ಹರಿದು ಹೋಗುವವು. ಆ ದೀನರ ಕ್ರೋಧಾಗ್ನಿಯಲ್ಲಿ ಅವರ ವಂಶವೃಕ್ಷವು ಸುಟ್ಟು ಭಸ್ಮವಾಗಿ ಹೋಗುವದು. ಹೆಚ್ಚಿಗೇನು ಹೇಳಲಿ, ನಾನು ಬಲಾಢ್ಯನು; ನನಗಿದಿರಾರು ಎಂಬ ಸೊಕ್ಕಿನಿಂದ ನಿನ್ನಂಥ ಅನೇಕ ವೀರರಾಜರು ವೀರ ಸಾಮ್ರಾಟರು ತಮ್ಮ ತಮ್ಮ ಯುದ್ಧ

ಸಾಮಗ್ರಿಗಳಿಂದ ತಾವೇ ಹಾಳಾಗಿ ಮಣ್ಣುಗೂಡಿ ಹೋಗಿರುವರು ಮಣ್ಣುಗೂಡಿ.

ಹಿರಣ್ಯ—ಆದದ್ದಾಗಲಿ. ನಾನೇನು ತಮ್ಮ ಮಾತು ಕೇಳುವದಿಲ್ಲ.

ನಾರದ—ನೀನು ಹೋಗುವದಾದರೂ ಎಲ್ಲಿಗೆ?

ಹಿರಣ್ಯ—ಹಂದಿಯಾಗಿ ಬಂದು ನನ್ನ ಬಂಧುವಿನ ಕರುಳುಬಗೆದ ಹರಿಯ ಕರುಳುಬಗೆಯಲಿಕ್ಕೆ ಆ ಅಧಮನ ರಕ್ತದಿಂದಲೇ ನನ್ನ ಬಂಧುವಿಗೆ ತಿಲತರ್ಪಣ ಬಿಡಲಿಕ್ಕೆ ವೈಕುಂಠಕ್ಕೆ ಹೋಗುವೆನು.

**ನಾರದ:**—ನಿನ್ನನ್ನು ವೈಕುಂಠಕ್ಕೆ ಕಳಿಸಲಿಕ್ಕೆ, ನಿನಗೆ ತಿಲತರ್ಪಣ ಬಿಡಿಸಲಿಕ್ಕೆ ನಾನೀಗ ಬಂದದ್ದು.

**ಹಿರಣ್ಯ:**—ನಾರದರೇ! ನಾನು ತಿಲತರ್ಪಣ ಬಿಡಿಸಿಕೊಳ್ಳುವವನಲ್ಲ ತಿಲತರ್ಪಣ ಬಿಡತಕ್ಕವನು.

**ನಾರದ:**—ಹಾಗೇ ಮಾಡು; ಬೇಡವೆನ್ನುವವರಾರು! ದಾನವೇಂದ್ರಾ, ನನ್ನ ಮನಸ್ಸಿನಲ್ಲಿಯೂ ನೀನು ಆ ಪುಂಡ ಹರಿಯ ರಕ್ತದಿಂದ ನಿನ್ನ ಬಂಧುವಿಗೆ ತಿಲತರ್ಪಣಕೊಡುವ ಮಹಾ ಮಂಗಲ ಸಮಾರಂಭವನ್ನು ಕಣ್ಣುಗಳು ದಣಿಯುವವರೆಗೆ ನೋಡಿ ಹಿರಿಹಿರಿ ಹಿಗ್ಗಬೇಕೆಂದಿದೆ.

**ಹಿರಣ್ಯ:**—ಹೀಗಿದ್ದು ನನ್ನ ವೈರಿಯ ವರ್ಣನೆಯನ್ನೇಕೆ ಮಾಡಿದಿರಿ?

**ನಾರದ:**—ವೈರಿಯ ಹೆಸರನ್ನು ಕೇಳಿ ನೀನು ಸಿಟ್ಟಿಗೆದ್ದು, ಅದೇ ಸಿಟ್ಟಿನ ಭರದಲ್ಲಿ ನೀನು ಮೈಮರೆತು ಬಿಟ್ಟ ಕಾರ್ಯವನ್ನು ಮನಮುಟ್ಟಿ ಮಾಡಬೇಕೆಂಬ ಸದ್ಭಾವನೆಯಿಂದಲೇ ನಿನ್ನ ವೈರಿಯ ವರ್ಣನೆಯನ್ನು ನಿನ್ನಮುಂದೆ ಮಾಡಿದೆನು.

**ಹಿರಣ್ಯ:**—ಹೀಗೋ!! ಸಂತೋಷ ಪರಮ ಸಂತೋಷ.

**ನಾರದ:**—ನಾನಾದರೂ ಈ ಸಂತೋಷದ ಭರದಲ್ಲಿ ನಿನಗೊಂದು ಆನಂದದ ಸುದ್ದಿ.

**ಹಿರಣ್ಯ:**—ಆನಂದದ ಸುದ್ದಿಯೇ! ಅದಾವದು ಬೇಗ ಹೇಳಿ.

**ನಾರದ:**—ನಿನಗೆ ಪುತ್ರರತ್ನದ ಲಾಭವಾಗಿದೆ.

**ಹಿರಣ್ಯ:**—ಎಲ್ಲಿದ್ದಾನೆ ಆ ನನ್ನ ಮೋಹದ ಮಗು.

**ನಾರದ:**—ಅದೋ! ಅಲ್ಲಿ ಹರಿಯೊಡನೆ ಆಡುತ್ತಿದ್ದಾನೆ.

**ಹಿರಣ್ಯ:**—ಏನು! ನನ್ನವೈರಿ ಆ ಭ್ರಷ್ಟ ಹರಿಯೊಡನೆ ನನ್ನ ಮಗನು ಆಡುತ್ತಿರುವನೇ?

**ನಾರದ:**—ಹಾಗಲ್ಲ. ಹರಿಯೆಂದರೆ ನಿನ್ನ ಮಗನು ಸಿಂಹನೊಡನೆ ಆಡುತ್ತಿದ್ದಾನೆ; ಅದೋ! ಅತ್ತ ಕಡೆಗೆ ನೋಡಿ.

**ಹಿರಣ್ಯ:**—ಇದರಲ್ಲಿ ಆಶ್ಚರ್ಯವೇನು? ಸಿಂಹದಮರಿಯು ಸಿಂಹದೊಡನೆ ಆಡುತ್ತಲಿದೆ.

೩ ಕಂದ ರಾಗ ಶಂಕರಾಭರಣ

ಮೃಗರಾಜನ ಕೂಡಾಡುವಾ |
ಮಗನನೆ ಗೆಲ್ವರನು ಕಾಣೆ ಧರೆಯೊಳಗಿನ್ನಾ ||
ನಗೆಯಿಂದ ರಾಜಿಸುವಾ ಮುಖ |
ಮಿಗಿಲಿಹುದಾ ಮಾರನೋಡಿ ತಾ ಅಡಗಿಹನೈ || ೧ ||

ಬಾ, ಎನ್ನ ಮೋಹದ ಕಂದಾ. (ಪ್ರಲ್ಹಾದನು ಬರಲು ಅವನನ್ನು ಅಪ್ಪಿ ಮುದ್ದಿಸಿ) ನಾರದರೇ, ಮತ್ತೆ ವಿಶೇಷವೇನು?

**ನಾರದ:**—ಮಾತೃಮುಖಿಯಾದ ಈ ಬಾಲಕನು ಜಗದ್ವಂದ್ಯ ಸಮ್ರಾಟನಾಗುವನು. ಇವನ ಕೀರ್ತಿಗಾನವು ಆಚಂದ್ರಾರ್ಕ ಜಗತ್ತಿನಲ್ಲಿ ಕೇಳಬರುವದು.

**ಹಿರಣ್ಯ:**—ಪರಮ ಸಂತೋಷ; ಈ ಕಂದಮ್ಮನ ಹೆಸರೇನು?

**ನಾರದ:**—ಪ್ರಲ್ಹಾದ.

**ಹಿರಣ್ಯ:**—ರೂಪಕ್ಕೆ ತಕ್ಕಂತೆ ಬಹು ಮುದ್ದಾದ ಹೆಸರು. ಪ್ರಲ್ಹಾದ ಅಲ್ಹಾದ ಪರಮ ಅಲ್ಹಾದ.

**ನಾರದ:**—(ಕಯಾಧುವಿಗೆ) ದೇವಿಯವರೇ; ಪತಿದೇವರಿಗೆ ನಮಸ್ಕಾರಮಾಡಿ. ಪ್ರಲ್ಹಾದಾ! ನೀನು ನಿನ್ನ ಜನಕನಿಗೆ ನಮಸ್ಕಾರಮಾಡು (ಉಭಯತರು ನಮಸ್ಕಾರಮಾಡುವರು)

**ಹಿರಣ್ಯ:**—(ಹೆಂಡತಿಗೆ) ವೀರವಸೂಭವ. (ಎಂದು ಆಶೀರ್ವಾದ ಮಾಡುವನು. ಮಗನು ನಮಸ್ಕಾರಮಾಡಲು) ಕುಲದೀಪಕನಾಗು. ಚಿರಂಜೀವಿಯಾಗು ಚಿನ್ನಾ, ಬಹು ಆನಂದದಿಂದ ಬಾಳು (ಆಶೀರ್ವದಿಸಿ) ನಾರದರೇ ನನ್ನ ಮಗುವು ಬಹು ಸುಂದರನಾಗಿದ್ದಾನೆ.

ನಾರದ:—ಸುಂದರನಿಷ್ಟೇ ಅಲ್ಲ, ಈ ನಿನ್ನ ಮಗು ಪ್ರಲ್ಹಾದನು ಸಕಲ ಕಲಾಪೂರ್ಣನಾಗಿರುವನು.

ಹಿರಣ್ಯ:—ಮತ್ತಿಷ್ಟು ಸಂತೋಷ; ಮಗೂ ನಿನಗೆಲ್ಲ ಶಾಸ್ತ್ರದ ಜ್ಞಾನ ವಿರುವದಷ್ಟೇ?

ಪ್ರಲ್ಹಾದ:—ಜನಕಾ, ಈ ಗುರುಗಳ ಪಾದಾನುಗ್ರಹದಿಂದ ಅಲ್ಪ ಸ್ವಲ್ಪ ಮಾತ್ರ ಜ್ಞಾನವಿದೆ.

ಹಿರಣ್ಯ:—ಹಾಗಾದರೆ, ಈ ಜಗತ್ತಿನಲ್ಲಿ ಯಾರು ಪೂಜ್ಯರು? ಯಾರು ಶ್ರೇಷ್ಠರು? ಹೇಳು.

ಪ್ರಲ್ಹಾದ:—ಆ ಶ್ರೇಷ್ಠ ಪುರುಷನಿಗೇನೇ.

೪ ಪದ ಧಾಟಿ (ಮಂಗಲ ಪಾಡುವೆ)

ನರಪತಿಗೆ ಸುರನಾಥಗೆ|
ಧರಾಪತಿಗೆ ತಾರಕಗೆ|| ವಂದನ ಮಾಡುವೆ || ಪ ||
ನೀಡುತಾ ಮನಶಾಂತಿ-ನಿರುತಾ |
ಕೇಡುಗಳ ತಾ ಪರಿಹರಿಸುತಲಿ ||
ಪಾಡುವ ಶರಣರ ಬಹುತೋಷಿಸುತಾ |
ಈಡೇರಿಸುತ ಬಯಕೆ ಸಲಹುವ || ೧ ||
ಪದುಮನಾಭನು ಸರಸಿಜವದನಾ |
ಮುದಕೊಡುವಾ ಪೀತಾಂಬರಧಾರೀ ||
ಸದಮಲ ಚರಿತರ ಹೃದಯದಿ ಸುಳಿವಾ |
ಬುಧನು ವಿಮಲಚರಿತ ಸುರನುತ || ೨ ||
ಆಶೆಯನಳಿದೀ ಭವವನೇ ನೀಗುವಾ |
ಶ್ರೀಶ ಕಿಂಕರರಾ ಪ್ರಿಯ ಜನಕಾ ||
ಶೇಷನ ಹಾಸಿಗೆ ಮಾಡಿದ ಪಾವಕಾ |
ಈಶಾ ಸುರನುತಾ ನಿರುತಾ ಶ್ರೀ ಹರಿಗೆ || ೩ ||

ಹಿರಣ್ಯ—ಶ್ರೀಹರಿ! ಏನು! ಶ್ರೀ ಹರಿಯೇ.

ಪ್ರಲ್ಹಾದ—ಹೌದು. ಶ್ರೀ ಹರಿಯೇ ಶ್ರೇಷ್ಠನು ಶ್ರೀ ಹರಿಯೇ ಪೂಜ್ಯನು.

ಹಿರಣ್ಯ—ಹುಚ್ಚನಿರುವೆ ಹುಚ್ಚನು. (ನಗುವನು)

ಪ್ರಲ್ಹಾದ—ನನ್ನ ಮಾತಿಗೇಕೆ ನಕ್ಕೆ ತಾತಾ.

ಹಿರಣ್ಯ—ಹುಚ್ಚುಚ್ಚು ಮಾತನಾಡಿದೆಯೆಂದು.

ಪ್ರಲ್ಹಾದ—ಸತ್ಯವಾದದ್ದನ್ನು ಹೇಳುವವರು ಹುಚ್ಚರೇನು?

ಹಿರಣ್ಯ—ಹುಚ್ಚನೆಂದೇ; ಹರಿಯು ಪೂಜ್ಯನು, ಹರಿಯು ಶ್ರೇಷ್ಠನು, ಎಂದು ಸುಳ್ಳುಹೇಳುತ್ತಿರುವೆ.

ಪ್ರಲ್ಹಾದ—ಸುಳ್ಳಲ್ಲ, ನಾನು ಸತ್ಯವಾದದ್ದನ್ನೇ ಹೇಳುತ್ತಿರುವೆನು.

ಹಿರಣ್ಯ—ಸತ್ಯವಿರಲಿ ಅಸತ್ಯವಿರಲಿ, ಹರಿಯಂತೂ ನಮ್ಮ ವೈರಿಯು, ನಮ್ಮ ಕುಲನಾಶಕನು.

ಪ್ರಲ್ಹಾದ—ಅಲ್ಲ, ಹಾಗಲ್ಲ. ತಾತಾ, ನನ್ನ ಶ್ರೀ ಹರಿಯೇ ನಮ್ಮ ಕುಲದ ಹಿತಚಿಂತಕನು, ನಮ್ಮ ಕುಲದ ರಕ್ಷಕನು.

ಹಿರಣ್ಯ—ಪ್ರಲ್ಹಾದಾ, ನೀನಿನ್ನೂ ಚಿಕ್ಕ ಮಗುವು. ಸಕಲಕಲಾ ಕೋವಿದರಿಗೂ, ನನ್ನಂಥ ವಿಚಿತ್ರ ಬುದ್ಧಿಯ ರಾಜಕಾರಣಪಟುವಿಗೂ ಹರಿಯ ನೆಲೆಯು ತಿಳಿಯುವಹಾಗೆಯೇ ಇಲ್ಲ. ಆತನು ಕಪಟನಾಟಕ ಸೂತ್ರಧಾರನು. ಎಲವೋ, ಆ ಹರಿಯು ನಮ್ಮ ಕುಲದ ಹಿತಚಿಂತಕನಾಗಿದ್ದರೆ, ನನ್ನ ಬೆನ್ನಿಗೆ ಬಿದ್ದ ಬಂಧುವಿನ ವಧಮಾಡುತ್ತಿದ್ದನೇ? ಪ್ರತ್ಯಕ್ಷ ನಿನ್ನ ಕಕ್ಕನ ರಕ್ತದ ಓಕಳಿ ಯಾಡಿದ ದುಷ್ಟಾತ್ಮನಿಗೆ, ನಮ್ಮ ಕುಲಕುಠಾರನಿಗೆ, ನಮ್ಮ ಕುಲದ ಹಿತಚಿಂತ ಕನು, ನಮ್ಮ ಕುಲದ ರಕ್ಷಕನು ಎಂದು ಹೇಳುವದು ನ್ಯಾಯವೇ ?

ಪ್ರಲ್ಹಾದ—ನ್ಯಾಯವಾದದ್ದನ್ನೇ ಹೇಳಿದ್ದೇನೆ.

ಕಯಾಧು—ಹೀಗೆ ವಾದಿಸಬೇಡ ಮಗೂ.

ಪ್ರಲ್ಹಾದ—ಸತ್ಯವಾದದ್ದನ್ನು ವಾದಿಸಿ, ಬೋಧಿಸುವದು ಅನ್ಯಾಯವೇ?

ಕಯಾಧು—ನಿನ್ನ ಅಭಿಪ್ರಾಯವಾದರೂ ಏನಿದೆ ಹೇಳು.

ಪ್ರಲ್ಹಾದ—ಪ್ರಜಾರಕ್ಷಕ ಭೂದೇವಿಯನ್ನು ನಿಷ್ಕಾರಣ ಹರಣ ಮಾಡಿ, ಪ್ರಜರಿಗೆ ಬಹು ಪರಿಪರಿಯಾಗಿ ತಾಪಕೊಟ್ಟ ಪಾಪಾತ್ಮನ ವಧಮಾಡಿ, ಜಗ ತ್ತಿಗೆ ಕಲ್ಯಾಣಮಾಡುವದು, ರಾಜರರಾಜ ದೇವರದೇವನಾದ ಶ್ರೀ ಹರಿಯ ಧರ್ಮವೇ ಆಗಿದೆಯಲ್ಲ.

ಹಿರಣ್ಯ—ನಿನಗೆ ಹೀಗೆ ದುರುಪದೇಶ ಮಾಡಿದ ಗುರುವಾದರೂ

ಯಾರು?

ಪ್ರಲ್ಹಾದ—ಈ ಮಹಾತ್ಮರೇ ನನ್ನ ಗುರುಗಳು.

ಹಿರಣ್ಯ—ಇವರು ನಮ್ಮ ಗುರುಗಳಲ್ಲ. ದೇವಋಷಿಗಳು ದೇವಗುರುಗಳು, ಎಂದೇ ಇವರು ನಿನಗೆ ತಾರಕನ ಹೆಸರನ್ನು ಹೇಳದೆ, ಮಾರಕನ ಹೆಸರನ್ನೇ ಹೇಳಿರುವರು. ನಾರದರೇ, ತಾವು ನನ್ನ ಹಿತಚಿಂತಕರಲ್ಲವೇ?

ನಾರದ—ಹೌದು. ಸರ್ವವಿಧದಿಂದಲೂ ನಿನಗೆ ಹಿತವಾಗಬೇಕೆಂದು, ನಿನಗೆ ಮಾರಕನೂ ತಾರಕನೂ ಆದ ಶ್ರೀಹರಿಯ ಧ್ಯಾನಮಾಡಲು, ನಿನ್ನ ಮಗುವಿಗೆ ಹೇಳಿದ್ದೇನೆ. ದೈತ್ಯೇಂದ್ರಾ, ನಿನಗೆ ಬೇಕಾದದ್ದನ್ನು ನಿಜವಾದದ್ದನ್ನು ಹೇಳಿದರೆ, ನೀನು ಇಷ್ಟೊಂದು ವಿಪರೀತ ಭಾವಿಸುವದೇಕೆ?

ಹಿರಣ್ಯ—ತಾವು ಹೇಳುತ್ತಿರುವದು ನಿಜವೇ.

ನಾರದ—ನಿಜವು. ನಾನೆಂದೂ ಸುಳ್ಳಾಡತಕ್ಕವನಲ್ಲ, ಶ್ರೀ ಹರಿಯೇ ನಿನಗೆ ಮಾರಕನೂ ತಾರಕನೂ ಆಗಿರುವನು.

ಪ್ರಲ್ಹಾದ—ಸತ್ಯವಾದದ್ದನ್ನೇ ಹೇಳಿದ್ದಾರೆ.

ಹಿರಣ್ಯ—ಸಾಕು, ಸಾಕು. ಇಷ್ಟಕ್ಕೆ ಸಾಕುಮಾಡಿ. ಮಧ್ಯದಲ್ಲಿ ನೀನು ಮಾತಾಡಬೇಡ. ಈ ಗುರುಗಳ ದುರುಪದೇಶದಿಂದಲೇ ನಿನ್ನ ತಲೆಯು ಕೆಟ್ಟು ಹಾಳಾಗಿಹೋಗಿದೆ ಅಕ್ರಾಳಾ, ವಿಕ್ರಾಳಾ (ಅವರೀರ್ವರು ಬಂದು ನಮಸ್ಕಾರ ಮಾಡಿದ ಮೇಲೆ) ಈ ನಮ್ಮ ಯುವರಾಜನನ್ನು ನಮ್ಮ ಕುಲಗುರುಗಳಾದ ಶಂಡಾಮರ್ಕರ ಕಡೆಗೆ ಕರೆದುಕೊಂಡು ಹೋಗಿ, ಇವನಿಗೆ ನಮ್ಮ ದೈತ್ಯಕುಲಕ್ಕೆ ತಕ್ಕ ಶಿಕ್ಷಣಕೊಡಬೇಕೆಂದು, ಅವರಲ್ಲಿ ನನ್ನ ಪರವಾಗಿ ವಿಜ್ಞಾಪನೆ ಮಾಡಿಕೊಳ್ಳಿ.

ಅಕ್ರಾಳ–ವಿಕ್ರಾಳ—ಆಜ್ಞಾ ಮಹನ್ ( ಎಂದು ನಮಿಸಿ ಯುವರಾಜನೊಡನೆ ಹೋಗುವರು)

ನಾರದ—(ಸ್ವಗತ ನಗುತ್ತ) ಬೆಂಕಿಯು ಚೆನ್ನಾಗಿ ಹೊತ್ತಿತು.(ಪ್ರಕಟ) ನಾನಿನ್ನು ಹೋಗಬಹುದೋ?

ಹಿರಣ್ಯ—ಹೋಗಿರಿ; ಅಗತ್ಯವಾಗಿ ಹೋಗಿರಿ. (ನಾರದರು ನಾರಾಯಣ ನಾರಾಯಣ ದುರಿತನಿವಾರಣ ಭವಭಯ ನಿವಾರಣ ನಾರಾಯಣ ಎಂದು ವೀಣೆಯ ನಾದದೊಡನೆ ಅನ್ನುತ್ತ ಹೋದಮೇಲೆ ಕಯಾಧುವಿಗೆ)

ಪ್ರಿಯೆ, ರಾಣೀವಾಸದ ಕಡೆಗೆ ನಡೆ.

ಕಯಾಧು—ತಾವು ಬರುವದಿಲ್ಲವೆ?

ಹಿರಣ್ಯ—ಇಲ್ಲ. ಈಗ ವಿಲಾಸದ ಕಾಲವಲ್ಲ. ಸ್ವಾತಂತ್ರ್ಯಯುಗದ ಕಾಲ, ದ್ವಿಗ್ವಿಜಯದ ಕಾಲ. ಹಿರಿದಾದ ವೈರಿಯು ವೈಕುಂಠದಲ್ಲಿ ಜೀವಂತ ನಿರುವಾಗ ವಿಲಾಸಸುಖ ಬಯಸುವದೆಂದರೆ, ಹೆಗ್ಗಣವನ್ನು ಒಳಗೆ ಹೊಗಿಸಿ, ಮನೆಯ ಗೋಡೆಯನ್ನು ಕಟ್ಟಿದಂತೆಯೇ ಸರಿ. ನನಾಜ್ಞೆಯಂತೆ, ಈಗ ನೀನು ಹೋಗಲೇ ಬೇಕು, ಹೋಗು. ( ಕಯಾಧುವು ಹೋದಮೇಲೆ ) ನನ್ನ ಪ್ರಿಯತಮೆಯು ಹೋದಳು, ನಿಶ್ಚಿಂತೆಯಾಯಿತು. ಎಲ್ಲಿ ನೋಡಿದಲ್ಲಿ ನಮ್ಮ ವರ್ಣದವರ ರಾಜಧ್ವಜವು ಮೆರೆಯುವ ಹಾಗೆ ಅಚಾಟ ಸಾಹಸಮಾಡಲು ದಿಗ್ವಿಜಯಕ್ಕಾಗಿ ಹೊರಡುವೆನು. ದಿಗ್ವಿಜಯಕ್ಕಾಗಿ ಯಾವ ಕಡೆಗೆ ಹೋಗಲಿ? ಮತ್ತೆಲ್ಲಿ, ವೈಕುಂಠಕ್ಕೆ ಮುತ್ತಿಗೆ ಹಾಕಿ, ನನ್ನ ವೈರಿಯಾದ ಹರಿಯ ಕರಳು ಬಗೆಯುವೆನು. ಈಗ ಬೇಡ, ನಾನಿಲ್ಲದಾಗ ನನ್ನ ಪ್ರಿಯಳಿಗೆ ಅಪಮಾನ ಮಾಡಿದ ಆ ನೀಚ ದೇವೇಂದ್ರನ ಮಾನಖಂಡನ ಮೊದಲು ಮಾಡಿ, ಆ ಅಧಮಾಧಮನೆದುರಿನಲ್ಲಿಯೇ ಆತನ ಪಟ್ಟದರಸಿಯಾದ ಶಚಿದೇವಿಯ ಪಾತೀವ್ರತ್ಯ ಭಂಗಮಾಡಿ, ಆನಂದಬಡಲು ಇಲ್ಲಿಂದಲೇ ಸ್ವರ್ಗಕೆ ಹಾರುವೆನು, ಸ್ವರ್ಗಕ್ಕೆ.

೫ ನೇಪದ ರಾಗ ಅಡಾಣ ತ್ರಿತಾಳ.

ರಣರಾಜ ನಿರುವೆ ನಿರುತಾ |
ರಣಲೀಲಾಜಾಲ ಪಸರಿಸುತಾ |
ಕುಣಿವೆ ಅರಿಶಿರವ ತೂರಿ ತೂರಿ || ಪ ||
ಯಮನ ಸದೃಶನಿಹ ಕಾಲಾ ಜಗದಿ |
ಶ್ಯಾಮಾಂಗನನೆ ಗೆಲಿವ ಕುಲಾಗ್ರಣಿ |
ಸಮರದಿ ಹಗೆಗಳ ರಕುತವ ಕುಡಿವಾ || ೧ ||

# ೨ನೆಯ ಪ್ರವೇಶ.

ಸ್ಥಳ—ಹಿರಣ್ಯ ಕಶಿಪುವಿನ ರಾಜಧಾನಿಯ ಕಡೆಗೆ ಹೋಗುವ ಹಾದಿಯು.

ಪಾತ್ರಗಳು—ಮೇಘನಾದ, ಸಿಂಹನಾದ, ರಂಭಾ, ನಾರದ

ಬರುವರೀತಿ—(ರಾಕ್ಷಸವೀರರೀರ್ವರು ರಂಭೆಯೊಡನೆ ಬರುವರು.)

ಮೇಘನಾದ—ಕುಣಿ ನಡೆಯೇ, ಕುಣಿ ನಡಿ. ರಂಭೇ, ಬೇಗ ನಡೆ.

ಸಿಂಹನಾದ—ತಾಪಕೊಡಬೇಡವೋ ನನ್ನವಳಿಗೆ.

ಮೇಘನಾದ—ನನ್ನವಳು, ನಿನ್ನವಳು ಹೇಗೆ ಆಗುವಳೋ? ನನ್ನ ಮುಂದೆ ಕುಣಿಯಬಾರೇ, ನನ್ನ ಗಿಳಿಯೇ! ಮಾರನರಗಿಳಿಯೇ!

ರಂಭಾ—ನಿನ್ನ ಮುಂದೆ ಕುಣಿಯುವದಿಲ್ಲವೋ ಟೊಣಪಾ

ಸಿಂಹನಾದ—ಹಾಗಾದರೆ ನನ್ನ ಮುಂದೆ ಕುಣಿ.

ರಂಭಾ—ನಾನು ನಿಮ್ಮ ಮುಂದೆ ಕುಣಿಯತಕ್ಕವಳೇ ಅಲ್ಲ.

ಮೇಘನಾದ—ಹಾಗಾದರೆ ನಮ್ಮ ಹಿರಣ್ಯಕಶಿಪು ಮಹಾರಾಜರೆದುರಿಗೆ ಕುಣಿ ನಡೆ, ಬೇಗ ನಡೆ.

ರಂಭಾ—ನಾನು ಈ ಲೋಕದವರೆದುರಿಗೆ ಕುಣಿಯತಕ್ಕವಳೇ ಅಲ್ಲ.

ಮೇಘನಾದ—ಯಾರ ಎದುರಿಗೆ ಕುಣಿಯತಕ್ಕವಳು?

ರಂಭಾ—ಸ್ವರ್ಗಸ್ಥರಾದವರೆದುರಿಗೆ ಕುಣಿಯತಕ್ಕವಳು. ನನ್ನ ಕುಣಿತನೋಡುವ ಇಚ್ಛೆಯಿದ್ದವರು ಸ್ವರ್ಗಕ್ಕೆ ಬನ್ನಿ.

ಸಿಂಹನಾದ—ಆ ಹಾಳು ಸ್ವರ್ಗದಲ್ಲಿ ಏನಿದೆಯೇ, ಹಾಳು ಹುಡಿ. ನಮ್ಮ ಹಿರಣ್ಯಕಶಿಪು ಮಹಾರಾಜರು ಸ್ವರ್ಗದ ರಾಜರನ್ನೂ ಸರ್ವಲೋಕಗಳನ್ನೂ ಗೆದ್ದು, ಅಲ್ಲಿಯ ಸರ್ವಸಂಪತ್ತನ್ನೆಲ್ಲ ನಮ್ಮ ರಾಜಧಾನಿಗೆ ತಂದಿದ್ದಾರೆ.

ಮೇಘನಾದ—ಸ್ವರ್ಗದ ರಾಜರಾರು?

ಸಿಂಹನಾದ—ನಮ್ಮ ಸಾಮ್ರಾಟರೇ ಸ್ವರ್ಗದ ರಾಜರು, ಸರ್ವವಿಶ್ವದ ರಾಜರು. ಎಲ್ಲಿ ನೋಡಿದಲ್ಲಿ ನಮ್ಮ ವರ್ಣದವರ ವಿಜಯಧ್ವಜವೇ ಮೆರೆಯುತ್ತಿರುವದು.

ಮೇಘನಾದ—ಸತ್ಯವಾದ ಮಾತು ಸುಂದರೀ, ಸರ್ವದೇಶದವರು ನಮ್ಮ ದಾಸರು. ನಮ್ಮ ದಾಶ್ಯಕ್ಕಾಗಿ "ನಮ್ಮ ವಿಲಾಸಕ್ಕಾಗಿ ಸರ್ವದೇಶಗಳಲ್ಲಿಯು ಸುಂದರ ಸ್ತ್ರೀಯರ ಹಾಗು ಸುಂದರ ವಸ್ತುಗಳ ನಿರ್ಮಾಣ. [ ನಗುವನು ]

ಸಿಂಹನಾಹ—ರಾಜರೆಂದರೆ, ನಮ್ಮ ರಾಜರೇ ರಾಜರು. ಉಳಿದ ದೇಶಗಳಲ್ಲಿಯು ರಾಜರು, ನಮ್ಮ ವರ್ಣದವರು ಹಾಯ್ದು ಹೋಗುವ ರಾಜಬೀದಿಗಳಲ್ಲಿಯು ಕಸ-ಕಡ್ಡಿಗಳನ್ನು ಕೂಡಿಸಿ ಬಳಿದೊಗೆದು, ಆ ಬೀದಿಗಳನ್ನು ಸ್ವಚ್ಛ ಮಾಡುವ ಕಸಬರಿಗೆಯು ರಾಜರು. ಸಾರಾಂಶವೇನಂದರೆ, ನಮ್ಮ ವರ್ಣದವರಿಗೆ ಹೊನ್ನು-ಹೆಣ್ಣು-ಮಣ್ಣುಗಳ ಮೇಲೆ ಅಧಿಕಾರ; ಉಳಿದ ವರ್ಣದವರಿಗೆ ಕಸಬರಿಗೆಗಳ ಮೇಲೆಯೇ ಅಧಿಕಾರ.

ರಂಭಾ—ನಿಮ್ಮ ಹಾಗು ನಿಮ್ಮವರ ಕೈಗಳಲ್ಲಿ ಕಸಬರಿಗೆಗಳನ್ನು ಕೊಟ್ಟು ನಿಮ್ಮವರಿಂದಲೇ ಕಸಗೂಡಿಸಲು ಹಚ್ಚುವ ಮಹಾತ್ಮನು ಹುಟ್ಟಿ ಬಂದಿದ್ದಾನೆ.

ಮೇಘನಾದ—ಹಾಗೆ ಆಗುವ ಹಾಗೆಯೇ ಇಲ್ಲ. ಆ ಹಾಳು ವಿಷಯು ವಿರಲಿ. ರಂಭೇ, ಜಗದಂಬೇ, ನೀನು ನನ್ನ ಮುಂದೆ ಕುಣಿಯುವಾಗ ಯಾವರಾಗ ಮಾಡುವೆ?

ಸಿಂಹನಾದ—ಪಾವಟಣಗಿ ರಾಗ-ಮಾಡೇ, ಹಿಗೆಯೇ ಹ! ಹ! ಹ! ಎನ್ನುತ್ತ ಆಕಾಶದ ಕಡೆಗೆ ಏರುತ್ತ ಹೋಗುವ ರಾಗ.

ಮೇಘನಾದ—ಸಾಕು ಬಿಡು ಮಹಾರಾಯಾ! ನಿನ್ನ ಗಾರ್ಧಭರಾಗ.

ಸಿಂಹನಾದ—ಗಾರ್ದಭರಾಗಕ್ಕಿಂತ ನನ್ನ ರಾಗ ಹೆಚ್ಚಿನದು. ನಾನು ಹಾಡಿದೊಡನೆ ಸಾವಿರಾರು ಗಾರ್ದಭರಾಜರು ನನ್ನ ಸ್ವರಕ್ಕೆ ಸ್ವರ ಹಚ್ಚಿ ಹಾಡಲು ಓಡಿಬಂದು ನನ್ನ ಸುತ್ತು-ಮುತ್ತು ನಿಲ್ಲುವರು. [ ಕತ್ತೆಯುಹಾಗೆ ಕೂಗಿ ನಗುತ್ತ ] ರಾಗ ಮಾಡಲೇ?

ಮೇಘನಾದ—ನಿನ್ನ ಕುಣಿತದ ವಿಷಯು ರಾಗದವಿಷಯು ಸಾಕಯ್ಯಾ, ರಂಭೇ, ನೀನು ಹಾವ-ಭಾವ ಮಾಡುತ್ತ ಒಂದು ಹಾಡನ್ನು ಹಾಡೇ.

ರಂಭೆ—೬ ಪದ [ ಧಾಟಿ—ರುಮ ಝುಮ ಬರಸೇ ಬಾದಲವಾ ]

ಕುಲು ಕುಲು ನಗುತಾ ಮೋಹಿಸುತಾ |

ಗೆಲ್ವ ಸುಭಾವಮಾ ಭಾವಮಾ ||೧||

ಕಲಾಯುಕ್ತ ಧಾಮಾ ಭಾಮಾ |
ವಿಲಾಸಿಯೆ ಭಾಮಾ || ಪ ||
ಪಾಡಿ ಪಾಡಿ ಮಾಡುವೆ ಘಿಲ್ ಘಿಲ್ ನಾದವಾ ನಾದವಾ |
ಆಡುತೆನಾಂ ಲೋಕ ಗೆಲ್ವೆನಾಂ ನೋಡುತಾ ನೋಡುತಾ |
ಹೂಡುವೆ ಬಾಣಾ ಪೂಬಾಣಾ | ಓಡುವ ಮಾರಾ ವೀರಾ |
ಬಿಡುತಿರಲ್ ನಾಬಾಣಾ | ನುಡಿಸುತೆ ವೀಣಾ || ೧ ||

ಮೇಘನಾದ—[ ರಂಭೆಯು ಹಾಡುವಾಗ ಅವಳ ಕಡೆಗೆ ನೋಡುತ್ತ ಭಲೆ, ಭಲೆ ಎನ್ನುತ್ತ ಹಾಡುಮುಗಿದಮೇಲೆ ರಂಭೆಯು ಹುಬ್ಬು ಹಾರಿಸಲು] ಮಿತ್ರಾ, ಈ ಕೋಮಲೆಯು ಹುಬ್ಬು ಹಾರಿಸುವ ಹೊಳಪು ಹುಬ್ಬಿ ಮಳೆಯ ಕೋಲ್ಮಿಂಚು ಇದ್ದಹಾಗೆ ಇದೆ.

ಸಿಂಹನಾದ—ಹೌದು ಹೌದು ನಿನಗೇನು ಬೇಕಯ್ಯಾ?

ಮೆಘನಾದ—ನನಗೆ, ನನಗೆ. ( ನಾಚುವನು )

ಸಿಂಹನಾದ—ನಾಚಬೇಡ ನಿನಗೇನು ಬೇಕು ಹೇಳು.

ಮೇಘನಾದ—ಈ ಬಂಗಾರದ ಗಿಳಿ.

ಸಿಂಹನಾದ—ಮೇಘನಾದ, ಈ ಗಿಳಿ ನನ್ನದಯ್ಯಾ ನನ್ನದಯ್ಯಾ: [ ಕೆಲಕಾಲ ಕಲಹಮಾಡುವರು ]

ಮೇಘನಾದ— ಮಿತ್ರಾ, ಪ್ರಿಯಮಿತ್ರಾ!

ಸಿಂಹನಾದ—ಯಾಕಪ್ಪಾ ನಮ್ಮಪ್ಪಾ !

ಮೇಘನಾದ—ನನ್ನದಯ್ಯಾ, ನನ್ನದಯ್ಯಾ: ಎಂದು ಕಲಹಮಾಡಬೇಡ.

ಸಿಂಹನಾದ— ಇವಳನ್ನು ನನಗೆ !ಕೊಟ್ಟುಬಿಡು. ಎಂದರೆ ಕಲಹದ ಬೀಜವೇ ಸುಟ್ಟುಹೋಗುವದು.

ಮೇಘನಾದ—ನಾನು ಹೇಳಿದಂತೆ ಕೇಳಿದರೆ, ಇಬ್ಬರಿಗೂ ಸುಖವಾಗುವದು. ಬಹು ಬಲವಾದ ಹಂಚಿಕೆ.

ಸಿಂಹನಾದ—ಆ ಹಂಚಿಕೆಯಾದರೂ ಯಾವದು ಹೇಳು?

ಮೇಘನಾದ—ಸ್ವರ್ಗದಲ್ಲಿ ಸಿಕ್ಕ ಸಾಮಾನುಗಳನ್ನು ಹಂಚಿಕೊಂಡಂತೆ ಇವಳನ್ನು ಸರಿಯಾಗಿ ಹಂಚಿಕೊಂಡರಾಯಿತು . ಬಹು ಮೇಲಾದ

ಹಂಚಿಕೆಯು.

ಸಿಂಹನಾದ--ಆ ಮೇಲಾವಹಂಚಿಕೆಯಾದರೂಯಾವದದೆಹೇಳುಬೇಗ.

ಮೇಘನಾದ--ಯುದ್ಧಭೂಮಿಯಲ್ಲಿ ಸಿಕ್ಕಿದ್ದ ಸ್ವರ್ಗದ ಸಾಮಾನುಗಳನ್ನು ಹಂಚಿಕೊಂಡಂತೆ ಇವಳನ್ನು ಸರಿಯಾಗಿ ಹಂಚಿಕೊಂಡರೆ ನನಗೂ ಸುಖ ನಿನಗೂ ಸುಖ.

ಸಿಂಹನಾದ--ಒಬ್ಬಳನ್ನು ಇಬ್ಬರು ಹಂಚಿಕೊಳ್ಳುವದು ಹೇಗೆ?

ಮೇಘನಾದ--ಈ ಖಡ್ಗದ ಸಹಾಯದಿಂದ ಒಬ್ಬಳನ್ನು ಇಬ್ಬರನ್ನಾಗಿ ಮಾಡುವ.

ಸಿಂಹನಾದ—ಹೀಗೆ ಮಾಡಬೇಡವಯ್ಯಾ, ಸ್ವರ್ಗದ ಯುದ್ಧದಲ್ಲಿ ಸಿಕ್ಕ ಮುತ್ತು-ರತ್ನಗಳೆಲ್ಲವನ್ನೂ ನಿನ್ನ ಪಾದಕ್ಕೆ ಅರ್ಪಿಸುವೆನು. ಈ ಸ್ತ್ರೀರತ್ನವನ್ನು ಮಾತ್ರ ನನಗೆ ಕೊಟ್ಟುಬಿಡು.

ಮೇಘನಾದ—ಹಾಗೆಲ್ಲಾ ಆಗುವ ಹಾಗಿಲ್ಲ. ನಾವು ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಣ್ಣತಮ್ಮಂದಿರು ಕಲಸರಟಿಯಲ್ಲಿ ಎರಡುಹೋಳು ಮಾಡಿ ಹಂಚಿಕೊಂಡಂತೆ ಜರದ ಪೀತಾಂಬರವನ್ನು ಉದ್ದಕ್ಕೆ ಹರಿದು ಎರಡು ಭಾಗಮಾಡಿ ಹಂಚಿಕೊಂಡಂತೆ ಇವಳನ್ನಾದರೂ ಈ ಖಡ್ಗದಿಂದ ಶೀಳಿ ಸರಿಪಾಲು ಮಾಡಿಕೊಳ್ಳುವದು ಸರಿಯಲ್ಲವೆ?

ಸಿಂಹನಾದ—ಹೀಗೆ ಮಾಡಿದರೆ ಅವಳಪ್ರಾಣವು ಹೊಗಲಿಕ್ಕಿಲ್ಲವೆ? ಮನೆ ಹೋಗಲಿ, ಹೊಲಹೋಗಲಿ, ಸಂಪತ್ತುಹಾಳಾಗಿಹೋಗಲಿ, ಸರ್ವಸ್ವವೂ ಮಣ್ಣುಗೂಡಿಹೋಗಲಿ, ಪ್ರಾಣಹೋದರೆ ಸಿಕ್ಕೀತು. ಅಣ್ಣತಮ್ಮಂದಿರು ಸರಿಪಾಲುಮಾಡಿಕೊಳ್ಳಲಿಲ್ಲವೆಂಬ ಕಲಂಕವು ಮಾತ್ರ ನಮ್ಮಹೆಸರಿಗೆ ಬರಕೂಡದು. ಖಡ್ಗದಿಂದ ಇವಳನ್ನು ಉದ್ದಕ್ಕೆ ಶೀಳಿಯೇ ಬಿಡುವೆ.

ರಂಭಾ—ನಾನು ಹೇಳಿದಹಾಗೆ ಕೇಳುವಿರಾ?

ಮೇಘನಾದ—ಅವಳು ಹೇಳಿದಹಾಗೆ ನಾವು ಕೇಳಲೇ ಬೇಕು.

ಸಿಂಹನಾದ—ಅದೇಕೆ ಕೇಳಬೇಕು?

ಮೇಘನಾದ—ಅದೇಕೆ ಕೇಳಬೇಕೆಂದರೆ, ಹಡದಾಕಿ ಮಂಗಮುಂಡೆ, ಕೈಹಿಡಿದಾಕಿ ತುಳಜಾಭವಾನಿ ಮಾದೇವಿ.

ಸಿಂಹನಾದ—ಸತ್ಯವಾದ ಮಾತು. ಮಾದೇವಿ ಸಿಟ್ಟಿಗೆದ್ದು ಹೋದರೆ,

ನಾವು ಸುಡುಗಾಡವನ್ನೇ ಸೇರಬೇಕಾಗುವದು.

ರಂಭಾ—ನಾನು ಹೇಳಿದಹಾಗೆ ಕೇಳುವಿರೋ, ಹೀಗೆಯೇ ಕಲಹವಮಾಡುತ್ತ ನಿಲ್ಲುವಿರೋ?

ಮೇಘನಾದ—ನಾನಂತೂ ಕೇಳುವೆನು. ಪ್ರಿಯೇ, ನಿನ್ನನ್ನು ಡುಬ್ಬದ ಮೇಲೆ ಕುಳ್ಳಿರಿಸಿಕೊಂಡು ಊರೊಳಗೆಲ್ಲ ಮೆರೆದು ಬರುವೆನು.

ಸಿಂಹನಾದ— ಈ ಬಹಾದ್ದರನು ನಿನ್ನ ಪಾದರಕ್ಷೆಯಾಗಲು ಸಹ ಸಿದ್ಧನಿರುವನು. ನಿನ್ನ ಅಭಿಪ್ರಾಯವೇನು?

ರಂಭಾ—ನೀವೀರ್ವರೂ ನನ್ನ ಹಾಗೆ ಶೀರೆ ಉಟ್ಟುಕೊಂಡು ರಾಗಮಾಡುತ್ತ ಕುಣಿಯಬೇಕು.

ಮೇಘನಾದ—ನೀನು ನನ್ನ ಹೆಂಡತಿಯಾಗಲೊಪ್ಪಿದರೆಮಾತ್ರ ನಾನು ಕುಣಿಯುವೆನು.

ಸಿಂಹನಾದ—ಏನೇ, ನನ್ನ ಹೆಂಡತಿಯು ಆಗುವಿಯೋ ಇಲ್ಲವೋ ಮೊದಲು ಹೇಳು.

ಮೇಘನಾದ—ಒಬ್ಬಳೇ ಒಬ್ಬಳು, ಇಬ್ಬರಿಗೂ ಹೆಂಡತಿಯಾಗುವದು ಹೇಗೆ?

ರಂಭಾ —ಆ ವಿಷಯವನ್ನು ನಾನು ಹೇಳತಕ್ಕವಳು.

ಮೇಘನಾದ-ಸಿಂಹನಾದ—ಹೇಳು ಹೇಳು. ನೀನೇ ಆ ವಿಷಯವನ್ನು ಹೇಳು.

ರಂಭಾ—ಮೇಘನಾದಾ, ೧೫ದಿನ ನಿನ್ನಹೆಂಡತಿಯು. ಸಿಂಹನಾದಾ, ೧೫ದಿನ ನಿನ್ನ ಹೆಂಡತಿಯು ಆಗುವೆನು. ಎಂದರೆ ನಿಮ್ಮೀರ್ವರ ಮನಸ್ಸಿಗಾನಂದವಾಗಿ ನನ್ನ ಪ್ರಾಣವೂ ಉಳಿಯುವದು. ಹೇಗಿದೆ ನನ್ನ ಹಂಚಿಕೆಯು?

ಮೇಘನಾದ– ಒಳ್ಳೇ ಹಂಚಿಕೆಯು. ನಿನ್ನ ತಲೆಯೇತಲೆ ಈ ನಮ್ಮ ಗುಡ್ಡದಂಥ ತಲೆಗಳಿಗೆ ಈ ಹಂಚಿಕೆಯೇ ಹೊಳೆಯಲಿಲ್ಲ.

ಸಿಂಹನಾದ—ಹೊಳೆಯದೆ ಏನು; ಇವಳ ಹಂಚಿಕೆಗಿಂತ ಹೆಚ್ಚಿನಯೋಗ್ಯತೆಯ ಹಂಚಿಕೆಯು ನನಗೆ ಹೊಳೆದಿದೆ.

ಮೇಘನಾದ—ಅದಾವದಯ್ಯಾ?

ಸಿಂಹನಾದ—ಇವಳನ್ನು ನಮ್ಮ ಮಹಾರಾಜರಿಗೆ ಒಪ್ಪಿಸಿ ಮಂತ್ರಿಪದ

ದೊರಕಿಸುವ, ಮಂತ್ರಿಗಳಾದ ಮೇಲೆ ದೇಶದ ಧೊರೆಗಳಾಗುವ. ಆಮೇಲೇನು ದೇಶದೊಳಗಿನ ಹೆಣ್ಣೇ ನಮ್ಮವಾಗುವವು. ಮೇಘನಾದಾ, ಅನುಮಾನಿಸಬೇಡ. ಹೆಣ್ಣಿಗೊಲಿಯದವರಾರೂ ಇಲ್ಲ. ಇವಳಂತೂ ತ್ರಿಭುವನ ಸುಂದರಿಯು ಪ್ರಾಯದವಳು.

ಮೇಘನಾದ— ಇವಳು ನವುಗೆ ಒಲೆಯುಬೇಕಲ್ಲ.

ರಂಭಾ—ನಾನು ಹೇಳಿದಹಾಗೆ ಕೇಳುವದಾದರೆ ಒಲಿಯುವೆನು.

ಮೇಘನಾದ-ಸಿಂಹನಾದ—ಕೇಳುವೆವು-

ರಂಭಾ—ಈ ಗಂಟಿನಲ್ಲಿಯ ಶೀರೆಗಳನ್ನುಟ್ಟುಕೊಂಡು, ನನ್ನೆದುರಿಗೆ ರಾಗಮಾಡುತ್ತ ಕುಣಿಯಿರಿ.

ಮೇಘನಾದ—ಗಂಡಾಗಿಹುಟ್ಟಿ, ಗಂಡಾಗಿಬೆಳೆದು ನಾನು ಶೀರೆಯನ್ನು ಹೇಗೆ ಉಟ್ಟುಕೊಳ್ಳಲಿ?

ಸಿಂಹನಾದ— ಹಿಡಿದಕಾರ್ಯ ಸಾಧಿಸಲಿಕ್ಕೆ ಹಾಗೆ ಮಾಡಲೇಬೇಕು.

ಮೇಘನಾದ--ಸರಿಯಾದಮಾತು. ನಿನ್ನಮಾತಿಗೆ ಒಪ್ಪಿದೆ.

ಸಿಂಹನಾದ—ಅನುಮಾನವೇಕೆ , ಶೀರೆಗಳನ್ನುಟ್ಟು ಶೃಂಗಾರರಾಗಿ ಕುಣಿಯುವಾ. (ಶೀರೆಗಳನ್ನು ಉಡುವದಾದ ಮೇಲೆ)

ಮೇಘನಾದ—ನೀನು ಹಾಡು, ನಾವು ಕುಣಿಯುವೆವು. ನಮ್ಮ ಹಾಡನ್ನು ಕೇಳಿ ಲಂಬಕರ್ಣರು ಬರುವರು.

ರಂಭಾ—ನಾನು ಹಾಡುವೆನು. ನೀವು ಕುಣಿಯಿರಿ.

**೭ ಪದ ( ಧಾಟಿ ಮಿಲಕೆ ಬೀಛಡ ಗಯಿ )**

ನಗುತೆ ಗೆಲೆಯುವಳೀ | ಜಗವಾಮಾಯಾವೀ ||ಪ||
ಈವುದು ತೋಷಾ, ಮನೋಹರ ವಿಲಾಸಾ|
ದಿವ್ಯಾಂಗದಾ ವಿಕಾಶಾ |
ದೇವಾನಲಿಹುಲಿವಾ ನೋಡಿ | ಸ್ತ್ರೀವೇಷಾ || ೧ ||

(ಹಾಡುವದಾದ ಮೇಲೆ ಭಲೆ ಭಲೆ ಎನ್ನುತ್ತ ಹೋಗುವಳು)

ನಾರದ—( ವೀಣೆಯ ನಾದದೊಡನೆ ) ನಾರಾಯಣ ನಾರಾಯಣ (ಎನ್ನುತ್ತ ಬರುವನು)

ಸಿಂಹನಾದ—ಪ್ರಿಯೇ, ನಾನು ಹೇಗೆ ಕುಣಿದೆನು?

ಮೇಘನಾದ—ಪ್ರಾಣಪ್ರಿಯಳೇ, ನಾನು ಹೇಗೆ ಕುಣಿದೆನು?

ನಾರದ—ಏನಿದು ಹುಚ್ಚುಚ್ಚಾರ, ಸರಿಯಿರಿ ಹಿಂದಕ್ಕೆ

ಮೇಘನಾದ—ಹೀಗೆ ಬೆದರಿಸಬೇಡೆ. ಕಾಲಿಗೆಬಿದ್ದು ಹೇಳಿಕೊಳ್ಳುವೆನು. ನನಗೊಂದು ಸೊಗಸಾದ ಚುಂಬನ ಕೊಡೇ?

ನಾರದ—ಮೂರ್ಖರಿರಾ, ಸರಿಯಿರಿ ಹಿಂದಕ್ಕೆ. ನಾನು ಯಾರೆಂದು ತಿಳಿದಿರುವಿರಿ?

ಸಿಂಹನಾದ—ನಾರಿ.

ಮೇಘನಾದ—ವಾರನಾರಿ.

ನಾರದ—ನಾರಿಯೂ ಅಲ್ಲ. ವಾರನಾರಿಯೂ ಅಲ್ಲ.

ಮೇಘನಾದ-ಸಿಂಹನಾದ—ನಾರಿಯೂ ಅಲ್ಲ; ವಾರನಾರಿಯೂ ಅಲ್ಲ; ಹಾಗಾದರೆ ನೀನಾರು?

ನಾರದ—ನಾರದ.

ಮೇಘನಾದ—ನಾರಿಯು ನಾರದನಾದರೆ ಒಳಿತಾಯಿತು, ನೀನೂ ನಮ್ಮಹಾಗೆ ಹೆಣ್ಣುವೇಷತಾಳಿ, ನಮ್ಮೊಡನೆ ಕುಣಿಯುತ್ತ ರಾಗಮಾಡು.

ನಾರದ—ಕುಣಿಯಲು ಹಾಡಲು ನಾನು ಹೆಣ್ಣಲ್ಲ.

ಸಿಂಹನಾದ—ಈಗ ಗಂಡು ಹೆಣ್ಣಾಗುವ ಕಾಲ. ಅನುಮಾನಮಾಡದೆ ಹೆಣ್ಣಾಗಿರಿ.

ನಾರದ—ಬೇಡ ಮಹಾರಾಯಾ, ಒಮ್ಮೆ ಹೆಣ್ಣಾಗಿ ಅರವತ್ತು ಮಕ್ಕಳನ್ನು ಹಡೆದು ಸಾಕು ಸಾಕಾಗಿ ಹೋಗಿದೆ.

ಮೇಘನಾದ—ಮತ್ತೊಮ್ಮೆ ಹೆಣ್ಣಾಗಿ ನೂರುಮಕ್ಕಳನ್ನು ಹಡೆಯಿರಿ.

ಸಿಂಹನಾದ—ಇನ್ನೂರು ಮಕ್ಕಳನ್ನಾದರೂ ಹಡೆಯಬಹುದು.

ನಾರದ—ಹೆಣ್ಣಾಗುವದೂ ಬೇಡ. ಹಡೆಯುವದೂ ಬೇಡ.

ಮೇಘನಾದ—ನೀವು ಹೆಣ್ಣಾಗಲಿಕ್ಕೇ ಬೇಕು.

ನಾರದ—ಆಗದಿದ್ದರೆ?

ಮೇಘನಾದ—ವ್ಯರ್ಥ ಪ್ರಾಣಕೊಡುವ ಪ್ರಸಂಗ ಬಂದೀತು? ಸೇನಾಖಾತೆಯವರು ನಾವು. ಯಮನ ದರ್ಪಕ್ಕಿಂತ, ದೇವರ ದರ್ಪಕ್ಕಿಂತ ನಮ್ಮ

ದರ್ಪ ಹೆಚ್ಚಿನದು.

ಸಿಂಹನಾದ—ಅದರಲ್ಲಿ ಅನುಮಾನವೇ ಇಲ್ಲ. ನಮ್ಮ ದರ್ಪಕ್ಕೆ ಬೆದರಿ ಪ್ರಾಯದ ಗಂಡುಮಗುವು ತಾನು ಹೆಣ್ಣುಕೂಸನ್ನು ಹಡೆದೆನೆಂದು ನ್ಯಾಯಸಭೆಯಲ್ಲಿ ಹೇಳಿತು.

ಮೇಘನಾದ—ಡೊಣ್ಣೆಯನ್ನು ಕಂಡರೆ ಎಲ್ಲರೂ ಬಾಯ ಬಾಯ ಬಿಡುತ್ತಾರೆ. ಹೆಣ್ಣಾಗಿರಿ ಎಂದರೆ, ನೀವು ನಮ್ಮ ಹೆಂಡತಿಯಾಗಿ ಬಹು ಸುಖಬಡುವಿರಿ.

ನಾರದ—ಆ ವಿಷಯವಿರಲಿ. ಸೇನಾಖಾತೆಯವರೇ, ನಮ್ಮ ಸುರರಾಜನು ಎಲ್ಲಿ ಇದ್ದಾನೆ?

ಸಿಂಹನಾದ—ಎಲ್ಲಿಯ ಸುರರಾಜ, ಕಪಿರಾಜ; ಸುಧೆಯ ಕುಡಿಯುವ ಸುರರಾಜ್ಯವು ಎಂದೋ ಹಾಳಾಗಿಹೋಗಿ, ಎಲ್ಲಿ ನೋಡಿದಲ್ಲಿ ಶರೆಕುಡಿಯುವ ಅಸುರರ ರಾಜ್ಯವೇ ರಾಜ್ಯ. ನಮ್ಮ ಸುಂದರ ರಾಜ್ಯದಲ್ಲಿಯ ರಾಜಧಾನಿಯಲ್ಲಿ, ವಿಲಾಸಪ್ರಿಯ ರಾಜಪುತ್ರರಿಗೆ ಹೆಸರಾದ ಕುಡಕರಿಗೆ ಮಾತ್ರ ಪ್ರವೇಶವದೆ ಪ್ರವೇಶ.

ಮೇಘನಾದ—ಚಂಡಿಕೆಯವರಿಗೆ, ಗಡ್ಡದವರಿಗೆ ಅಲ್ಲಿ ಪ್ರವೇಶವೇ ಇಲ್ಲ.

ಸಿಂಹನಾದ—ಬಳಿಯವರಿಗೆ ಬರಲು ಪ್ರತಿಬಂಧವೇ ಇಲ್ಲ ನೋಡಿ.

ನಾರದ—(ನಗುತ್ತ) ಹೀಗೋ, (ಸ್ವಗತ) ಹೇಳಿ ಕೇಳಿ ಕುಡುಕರ ರಾಜ್ಯ. ಇಲ್ಲಿಯ ಅಧಿಕಾರಿಗಳು ಅಧಿಕಾರ ಮದದಿಂದ, ಸಂಪತ್ತಿನ ಮದದಿಂದ, ಕಣ್ಣಿದ್ದು ಕುರುಡರಾಗಿದ್ದಾರೆ; ಬುದ್ಧಿಯಿದ್ದು ಪಶುಗಳಾಗಿದ್ದಾರೆ. ಆಳುವವನು ರಾಜಪಶುವು ಆಗಿದ್ದಾನೆ. ಇಲ್ಲಿಗೆ ರಾಜಧರ್ಮದುಪದೇಶ ಮಾಡಲು ಬರುವವರೇ ಮೂರ್ಖರು. ಈ ನೀಚರಿಗೆ ಉಪದೇಶಮಾಡುವದು ಬೋರ್ಗಲ್ಲ್‌ಮೇಲೆ ನೀರೆರದಂತೆ. ಹಂಚಿಕೆಯಿಂದಲೇ ಇಲ್ಲಿಂದ ಪಾರಾಗಿ ಹೋಗುವದು ಲೇಸು.

ಸಿಂಹನಾದ—ಏ ತಂಬೂರಿದಾಸಾ. ಹೆಣ್ಣಾಗುವಿಯೋ, ನಿನ್ನನ್ನು ತಲೆ ಒಡೆದು, ಕೊಂದು ಹಾಕಲೊ?

ನಾರದ— ನಿಮ್ಮ ತಲೆಯು ಯಾರಿಗಾಗಿ ಕೆಟ್ಟದೆ.

ಸಿಂಹನಾದ—ನಮ್ಮನ್ನು ಮೋಸಮಾಡಿ ಓಡಿಹೋದ ಹೆಣ್ಣಿಗಾಗಿ.

ನಾರದ—ಆ ಹೆಣ್ಣೇ ಅಲ್ಲಿದೆ ನೋಡಿ.

ಮೇಘನಾದ—(ನೋಡಿ) ಹೌದು. ಸಿಂಹನಾದಾ, ಪ್ರಿಯತಮೆಯು ಸಿಕ್ಕಳು. ಅದೋ ಅಲ್ಲಿ ಇದ್ದಾಳೆ. ನಮ್ಮ ಕಡೆಗೇನೇ ಓರೆಗಣ್ಣಿನಿಂದ ನೋಡುತ್ತ ಕುಲು ಕುಲು ನಗುತ್ತಾಳೆ.

ಸಿಂಹನಾದ—ಅತ್ತಕಡೆಗೇನೆ ಹೋಗುವ ನಡೆ. (ಈರ್ವರು ಹೋಗುವರು.)

ನಾರದ—ಅತ್ತೇ ಹಾಳಾಗಿ ಹೋಗಿರಿ. ಹೋದರು. ಒಳಿತಾಯಿತು. ನಾನೂ ನನ್ನ ಆರಾಧ್ಯ ದೇವರ ಸ್ಮರಣಮಾಡುತ್ತ ಹೋಗುವೆನು.

೮ ಪದ ರಾಗ ಪೀಲು ತ್ರಿತಾಳ.

ಕಮಲೇಶಾಲೀಲಾಲೋಲಾ| ಶಾಮಾ ಪಾಲಿಪ ವಿಶ್ವಪಾಲಾ||
ರಾಮಾ ನಲಿವಾ ವಿಶ್ವಾಭಿರಾಮಾ| ನಮಿಸುವೆನಾ ಶ್ರೀ ಲೋಲಾ ||ಪ||
ಪಾಡುವೆನಾಮಾ ವಿನೀತನಾಗುತೆ| ನೋಡುತೆ ದೈತ್ಯವಿಲಾಸಾ||
ಬಡುವರೆ ತೋಷಾ ಮೋಹೀನಿ ವೇಷಾ | ಮಾಡುದೈತ್ಯನಾಶಾ ಶ್ರೀಶಾ ||೧||

# ೩ನೆಯ ಪ್ರವೇಶ.

ಸ್ಥಳ—ಕಯಾಧು ದೇವಿಯವರ ಮಂದಿರವು.

ಪಾತ್ರಗಳು—**ಕಯಾಧು, ಪ್ರಲ್ಹಾದ, ಹಿರಣ್ಯಕಶಿಪು, ಅಕ್ರಾಳ, ವಿಕ್ರಾಳ.**

ಬರುವ ರೀತಿಯು—[ ಪ್ರಲ್ಹಾದನು ವಜ್ರಮಂಟಪದಲ್ಲಿ ವಿರಾಜಿಸುತ್ತಿದ್ದ ಶ್ರೀಲಕ್ಷ್ಮೀನಾರಾಯಣನ ವಿಗ್ರಹದ ಮುಂದೆ ಭಜನ ಮಾಡುತ್ತ ಕುಣಿಯುತ್ತಿರುವನು. ]

## ೯ ಪದ ರಾಗ ಭೀಮಪಲಾಸ ತಾಳ ಏಕಾ್ಕ

ದೇವಾ ಭಜಿಪೆ ಸತತ |
ಪಾವನತರ ಪದಯುಗವ ||
ಭಾವದಲ್ಲಿ ನಲಿವ ಮೂರ್ತಿ |
ಅವನೀಧರಾ ರಮಾನಾಥ || ಪ ||
ವಿನೀತ ದಾಸನಾ ನೀನಾಗಿ ರಕ್ಷಿಸ ಬಾ |
ಗುಣಪೂರ್ಣ ನಾರಾಯಣ ಮೊರೆ ಕೇಳಿ || ೧ ||
ಓನ್ನಮೋ ನಾರಾಯಣಾಯ ಪಾಹಿಮಾಂ ನಾರಾಯಣ. ನಾರಾಯಣ.

ಕಯಾಧು—ಮಗೂ, ಇದನ್ನೇನು ನಡಿಸಿರುವೆ?

ಪ್ರಲ್ಹಾದ—ನಮ್ಮ ದೇವರ ಭಜನಮಾಡುತ್ತಿರುವೆನಮ್ಮಾ.

ಕಯಾಧು—ದಾನವಾರಿಯು ದಾನವರ ದೇವರಾಗುವದೆಂದಾದರೂ ಶಕ್ಯವಿದೆಯೇ?

ಪ್ರಲ್ಹಾದ—ಈ ದೇವರು ದಾನವಾರಿಯೂ ಅಲ್ಲ, ಮಾನವಾರಿಯೂ ಅಲ್ಲ. ಭಕ್ತರು ಯಾವಕುಲದವರೇ ಇರಲಿ, ಯಾವ ಯೋನಿಯಲ್ಲಿಯೇ ಹುಟ್ಟಿರಲಿ, ಅವರ ಆಳಿನ ಆಳು, ಎಂದು ಹೇಳಿಕೊಳ್ಳುವ ಬಹು ಕರುಣಾಶಾಲಿಯು ನನ್ನ ನಾರಾಯಣನು. ಭಕ್ತಪ್ರಾಣನು. ವಿಶ್ವರಕ್ಷಕನು. ಸಂಸಾರದಲ್ಲಿ ವೈಮರೆತು ತನ್ನ ನಾಮಸ್ಮರಣ ಮಾಡುವವರ ತಪ್ಪುಗಳನ್ನು ಕೂಡ ಕ್ಷಮಿಸಿ ಅವರನ್ನು ಉದ್ಧಾರಮಾಡುವ ಪರಮ ದಯಾಳುವು ಕೂಡ ಆಗಿದ್ದಾನೆ.

ಕಯಾಧು—ಈ ವಿಷಯವಿರಲಿ. ದೈತ್ಯಕುಲ-ಲಲಾಮನಾದ ನೀನು ದೈತ್ಯದ್ವೇಷಿಯನ್ನೇಕೆ ಪೂಜಿಸುವೆ?

ಪ್ರಲ್ಹಾದ—ಎಲ್ಲರಲ್ಲಿಯೂ ಇರುವ ನನ್ನ ದೇವನಿಗೆ ಯಾರಮೇಲೆಯೂ ದ್ವೇಷವಿಲ್ಲ. ನಂಬಿದ ಪಶುವು ಎಂದರೆ, ಮೊಸಳೆಯ ಬಾಯಿಯಲ್ಲಿ ಸಿಕ್ಕು ನರಳುತ್ತಿದ್ದ ಗಜರಾಜನು ನಾರಾಯಣ ನಾರಾಯಣ ಎಂದು ಬಹು ಆರ್ತಸ್ವರದಿಂದ ಕೂಗಿ ಕರೆಯಲು, ನನ್ನ ನಾರಾಯಣನು ಓಡಿಹೋಗಿ,

ಚಕ್ರದಿಂದ ಮೊಸಳಿಯನ್ನು ಶೀಳಿಹಾಕಿ ಅವನನ್ನು ಕಾಯ್ದನಮ್ಮಾ, ಹಿಂಸಾ ಮಯ ಹಿಂಸಾಪ್ರಿಯ ರಾಕ್ಷಸಕುಲದ ಉದ್ಧಾರಕ್ಕಾಗಿಯೇ ನಾನೀ ದೇವರನ್ನು ಪೂಜಿಸುತ್ತಿರುವೆ.

ಕಯಾಧು—ನೀನು ಹೇಳುವದೆಲ್ಲವೂ ನಿಜ. ಆದರೆ?

ಪ್ರಲ್ಹಾದ—ಆದರೆ ಏಕೆ?

ಕಯಾಧು—ನಮ್ಮದು ದಾನವ ಕುಲ. ದಾನವರು ತಮ್ಮ ವೈರಿಯ ಧ್ಯಾನಮಾಡುವ ನಿನ್ನನ್ನು ಜೀವಂತ ಇಡುವದು ಶಕ್ಯವೇ ಇಲ್ಲ. ಮೇಲಾಗಿ ವಿಲಕ್ಷಣ ಶಸ್ತ್ರಧಾರಿಗಳೂ, ಅಮೋಘ ಬಲಶಾಲಿಗಳೂ, ವೈಭವಸಂಪನ್ನ ಸಾಮ್ರಾಟರ ಸಾಮ್ರಾಟರೂ ಆದ ದೈತ್ಯರ ಬಲ ಬಗ್ಗುಬಡೆಯುವಷ್ಟು ಬಲವು ದೇವಾನ್ ದೇವತೆಗಳಲ್ಲಿ, ಹರಿ-ಹರ-ಬ್ರಹ್ಮರಲ್ಲಿ ಇಲ್ಲದಿರುವಾಗ ನೀ ನೆಂತು ಅವರನ್ನು ಯುದ್ಧದಲ್ಲಿ ಗೆಲ್ಲುವೆ?

ಪ್ರಲ್ಹಾದ—ನನಗೆ ಈ ದೇವನ ಬೆಂಬಲವಿರುವಾಗ, ನನ್ನನ್ನು ಕೆಣಕಿ ಯಾರೂ ಬದುಕಲಾರರು.

ಕಯಾಧು—ಹುಚ್ಚುಚ್ಚು ಮಾತನಾಡಬೇಡ.

ಪ್ರಲ್ಹಾದ—ಹುಚ್ಚುಚ್ಚು ಮಾತಲ್ಲಮ್ಮಾ. ನಿನ್ನ ಮನಸ್ಸಿನಲ್ಲಿ ನಿನ್ನ ಮಗನು ಕುಲದೀಪಕನಾಗಬೇಕೆಂದಿದೆಯೋ, ಕುಲನಾಶಕನಾಗಬೇಕೆಂದಿ ದೆಯೋ ಮೊದಲು ಹೇಳು.

ಕಯಾಧು—ಕುಲದೀಪಕನಾಗಬೇಕೆಂದು.

ಪ್ರಲ್ಹಾದ—ಬಹು ಮುದ್ದಾದ ಮಾತು. ಇನ್ನೊಮ್ಮೆ ಹೇಳಮ್ಮಾ ನಾನೇನಾಗಬೇಕು?

ಕಯಾಧು—ಕುಲದೀಪಕನಾಗಬೇಕು, ಕುಲದೀಪಕನು.

ಪ್ರಲ್ಹಾದ—ಹಾಗಾದರೆ, ನೀನೂ ಈ ದೇವನನ್ನು ಪೂಜಿಸು.

ಹಿರಣ್ಯ—( ಪ್ರವೇಶಮಾಡಿ ) ಯಾವ ದೇವನನ್ನೋ ಅಧಮಾಧಮಾ?

ಪ್ರಲ್ಹಾದ—ದೇವಾಧಿದೇವನಾದ ಶ್ರೀಮನ್ನಾರಾಯಣನನ್ನು.

ಹಿರಣ್ಯ—ದೇವನಲ್ಲ, ಆತ ಮಹಾಭೂತ.

ಪ್ರಲ್ಹಾದ—ನನ್ನ ದೇವನು ಸಾಮಾನ್ಯ ಭೂತನಲ್ಲ. ಆಕಾಶ,ವಾಯು, ಅಗ್ನಿ, ಜಲ, ಭೂಮಿ ಎಂಬ ಪಂಚ ಮಹಾ ಭೂತಗಳನ್ನು ಸೂತ್ರಗೊಂಬೆ

ಗಳಂತೆ ಕುಣಿಸುವ ಮಹಾಭೂತನಾಗಿದ್ದಾನೆ, ಮಹಾಭೂತ.

ಹಿರಣ್ಯ—ಸುಳ್ಳು ಸುಳ್ಳು, ನೀನು ಖಂಡಿತವಾಗಿಯೂ ಸುಳ್ಳುಹೇಳು ತ್ತಿರುವೆ. ಅವನೆಲ್ಲಿಯ ಮಹಾಭೂತನೋ! ಸರ್ವಮಹಾಭೂತಗಳ ಮಹಾ ಭೂತನು ನಾನೇ, ನನ್ನ ಒಂದೇ ಒಂದು ಸಿಂಹನಾದದ ಗುಡಿಗಿಗೆ, ತ್ರಿಮೂ ರ್ತಿಗಳು ಭಯಭೀತರಾಗಿ ಗದಗದ ನಡುಗುವರು. ಮೂರುಲೋಕಗಳು ಉರುಳಿ ಬೀಳುವವು. ವೀರರ ಪ್ರಾಣಗಳು ಕುಳಿತ ಕುಳಿತಲ್ಲಿಯೇ ಹಾರಿಹೋ ಗುವವು. ಭೂಲೋಕ ಒಂದನ್ನೇ ಏಕೆ, ಮೂರು ಲೋಕಗಳನ್ನು ಒಂದು ಕೈಯಿಂದಲೇ ಎತ್ತಿ, ಅವನ್ನು ಸಮುದ್ರದಲ್ಲಿ ಮುಣುಗಿಸಿಬಿಡುವ ಅಮೋಘ ಅತುಲ ಶಕ್ತಿಯು ನನ್ನ ಬಾಹುವಿನಲ್ಲಿರುವಾಗ, ನೀನು ನನ್ನೆದುರಿಗೆ ನಿಂತು ಹೀಗೆ ನಿರ್ಭಯದಿಂದ ಉತ್ತರ ಕೊಡುವದೆಂದರೆ, ಅದು ನನ್ನ ಸಿಂಹಾಸನದ ಅಪಮಾನ, ನನ್ನ ಅಪಮಾನ, ನನ್ನ ದೇವತ್ವದ ಅಪಮಾನ ಅಲ್ಲವೊ! ಅಧಮಾಧಮಾ, ದೈತ್ಯ ಕುಲಕಲಂಕಾ, ಪ್ರತ್ಯಕ್ಷ ನಿನ್ನ ಕಕ್ಕನ ರಕ್ತದ ಮಡುವಿನಲ್ಲಿ ಎರೆದುಕೊಂಡು ಆತನ ಶಿರ ಚಂಡಾಡಿದವನ ಚಂಡನ್ನು ಚಂಡಾ ಡದೆ, ರಣಹೇಡಿಯಂತೆ, ಕೈಲಾಗದ ಹೆಂಗಸಿನಂತೆ, ನೀನು ಆತನನ್ನು ಪೂಜಿಸುವದು ನನ್ನ ನಿನ್ನ ವಿಮಲ ಕೀರ್ತಿಗೆ ಭಯಂಕರವಾದ ಅಪಮಾನ ಈ ಅಪಮಾನವನ್ನು ಸಹಿಸುವದು ನನ್ನಿಂದಮಾತ್ರ ಸರ್ವಥಾ ಆಗದು ಭ್ರಮಿಷ್ಟಾ, ನಮ್ಮ ಕುಲುಗುರುಗಳಾದ ಶಂಡಾಮರ್ಕರು ನಿನಗೆ ಇದೇತರವ ಶಿಕ್ಷಣ ಕೊಟ್ಟರೋ?

ಪ್ರಲ್ಹಾದ— ಅವರೇಕೆ ಕೊಡಬೇಕು, ತಾತಾ! ಸತ್ಯಸ್ವರೂಪಿಯೂ, ಪ್ರೇಮಮಯನೂ ಆದ ಪರಮಾತ್ಮನನ್ನು ಪೂಜಿಸುವದು ಜನ್ಮಕ್ಕೆಬಂದ ಪ್ರತಿಯೊಬ್ಬನ ಪವಿತ್ರ ಕರ್ತವ್ಯವೇ ಆಗಿದೆ.

ಹಿರಣ್ಯ—ದಾನವಾರಿಯ ಧ್ಯಾನ ಬಿಡುವೆಯೋ, ನಿನಗೆ ನಿನ್ನ ಪಾಪಕ್ಕೆ ತಕ್ಕ ಕಠೋರ ಶಿಕ್ಷೆಯನ್ನು ಕೊಡಲೋ?

ಪ್ರಲ್ಹಾದ—ಕಠೋರ ಶಿಕ್ಷೆಯೇಕೆ? ಪ್ರಾಣಹೋಗುವ ಪ್ರಸಂಗಬಂ ದರೂಸಹ, ನಾನೇನು ನನ್ನ ಪರಮಾತ್ಮನ ಧ್ಯಾನ ಬಿಡತಕ್ಕವನಲ್ಲ.

ಹಿರಣ್ಯ—ನಿನ್ನ ಪ್ರಾಣವನ್ನು ತೆಗೆಯಲೋ?

ಪ್ರಲ್ಹಾದ—ನನ್ನ ಪ್ರಾಣವನ್ನು ತೆಗೆಯುವದೂ, ಬಿಡುವದೂ ಯಾರ

ಸ್ವಾಧೀನದಲ್ಲಿಯೂ ಇಲ್ಲ, ತಾತಾ.

ಹಿರಣ್ಯ—ಮತ್ತಾರ ಸ್ವಾಧೀನದಲ್ಲಿದೆ?

ಪ್ರಲ್ಹಾದ—ಈ ದೇವ ದೇವನ ಅಧೀನದಲ್ಲಿದೆ. ಈ ಮಹಾಮಹಿಮನ ಆಜ್ಞೆಯಿಲ್ಲದೆ, ಪ್ರಾಣಿಗಳಿರಲಿ ಜಗತ್ತಿನಲ್ಲಿಯ ಒಂದು ಕ್ಷುಲ್ಲಕ ಕಡ್ಡಿಯು ಕೂಡ ಅತ್ತಿತ್ತ ಸರಿದಾಡುವಹಾಗಿಲ್ಲ.

### ೧೦ ಪದ ರಾಗ ಕಾಪಿ ತ್ರಿತಾಳ.

ಅಜನ ಪಿತಗೆ ಸಮರಾರ್‍ಯೆ ತಾತಾ |
ಅಜಿತಾ ಶರಣರ ಕಾಯ್ವನಿರುತಾ|
ಸುಜನ ತಾರಕಾ ದೇವಾ ನಮಿತಾ|| ಪ ||
ಶೋಭಿಪತಾರಾ ವಿಶಾಲನ ಭದಾ|
ಪ್ರಭೆಯುಬೀರ್ವ ರವಿಚಂದ್ರರ ಗತಿಗ|
ಪ್ರಭುವೆಯಿಂಹಹರಿ ಮೋಕ್ಷದಾತಾ || ೧ ||

ನನ್ನ ದೇವನು ಸಾಮಾನ್ಯನಲ್ಲ. ಶಿವನು ಕಾಲಕೂಟವಿಷವನ್ನು ಕುಡಿದು ನೀಲಕಂಠನಾಗಿದ್ದರೆ, ನನ್ನ ದೇವನು ಅನಂತ ಭಕ್ತರ ಪಾಪವೆಂಬ ಕಾಲಕೂಟವಿಷಪಾನಮಾಡಿ ನೀಲಾಂಗನಾಗಿದ್ದಾನೆ. ಮಕರ, ಕರ್ಣಕುಂಡಲ ಕಿರೀಟಗಳಿಂದ ಶಂಖ, ಚಕ್ರ, ಗದಾಪದ್ಮಗಳಿಂದ ವಿರಾಜಿತನಾಗಿ ಪೀತಾಂಬರ ಧಾರಿಯಾಗಿ ಕುಲು ಕುಲು ನಗುತ್ತಿರುವ ಈ ನನ್ನ ದೇವನ ನಯನಮನೋಹರ ಮೂರ್ತಿಯನ್ನು ಕಣ್ತುಂಬ ನೋಡುವದೇ ಕಣ್ಣಿಗೆ ಮೇಲಾದ ಹಬ್ಬವೆಂದು ತಿಳಿ, ತಾತಾ.

ಹಿರಣ್ಯ—ನಿಜವಾಗಿಯೂ ನಿನ್ನ ತಲೆ ತಿರುಗಿದೆ. ಎಲವೋ ಜಗತ್ತಿನಲ್ಲಿಯ ಸರ್ವಪ್ರಾಣಿಗಳನ್ನು ಕೊಲ್ಲುವ ಕಾಲನಿಗೂ ಕೂಡ ಕಾಲನಾಗಿರುವ ನನಗೆ ಕಾಲನಾರು?

ಪ್ರಲ್ಹಾದ—ಈ ದೇವನು ಸರ್ವರ ಕಾಲನ ಕಾಲನಾದ ನಿನ್ನನ್ನು ನುಂಗುವ ಕಾಲನು.

ಹಿರಣ್ಯ—ಕಣ್ಮುಚ್ಚಿಕಣ್ತೆರೆಯುವಷ್ಟರಲ್ಲಿ ತ್ರಿಮೂರ್ತಿಗಳನ್ನು ನುಂಗುವ ಕಾಲನಾದ ನನಗೆಲ್ಲಿಯ ಕಾಲನೋ? ನಾನೇ ಸರ್ವರ ಕಾಲನು: ದೇವರ

ದೇವನು. ಜೀವವಿಲ್ಲದ ಲೋಹದ ಪರಮೇಶ್ವರನನ್ನು ದೀಪ, ಧೂಪ, ಪುಷ್ಪಗಳಿಂದ ಪೂಜಿಸದೆ ಈ ಜೀವಂತ ಪರಮೇಶ್ವರನನ್ನು ಪೂಜಿಸು, ಭಜಿಸು ಎಂದರೆ ನೀನೂ ನನ್ನ ಅನುಗ್ರಹದಿಂದ ನನ್ನ ಹಾಗೆ ಜಗದ್ವಂದ್ಯ ಸಮ್ರಾಟರ ಸಮ್ರಾಟನಾಗುವೆ; ದೇವರ ದೇವನಾಗುವೆ.

ಪ್ರಲ್ಹಾದ—ಲೋಹದಪ್ರತಿಮೆಯನ್ನು ಪೂಜಿಸುವವರಿಗಲ್ಲವೆ ಆ ಮಾತು!

ಹಿರಣ್ಯ—ಮೂರ್ಖಾ, ಶತಮೂರ್ಖಾ, ಕಣ್ಣಲ್ಲಿ ಗೊಡಚಿಯು ಬೆಳೆದಿರುವದೋ? ಎದುರಿಗಿರುವದು ಲೋಹದ ಪ್ರತಿಮೆಯಲ್ಲವೋ?

ಪ್ರಲ್ಹಾದ—ಅಲ್ಲ. ತಾತಾ, ಎಲ್ಲಜೀವರಲ್ಲಿ ಜೀವವಿಲ್ಲದವುಗಳಲ್ಲಿ ಎಲ್ಲಿ ನೋಡಿದಲ್ಲಿ ತುಂಬಿತುಳುಕುತ್ತಿರುವ ಪರಮೇಶ್ವರನನ್ನೇ ನಾನೀ ಲೋಹದ ಪ್ರತಿಮೆಯಲ್ಲಿ ಪೂಜಿಸುತ್ತಿರುವೆನು.

ಹಿರಣ್ಯ—ಇದೆಲ್ಲಿಯ ಪರಮೇಶ್ವರನೋ, ಕಲ್ಲಲ್ಲಿಹುಟ್ಟಿದ್ದು ಕಲ್ಲೇ ಕಲ್ಲು.

ಪ್ರಲ್ಹಾದ—ನನ್ನದೇವರು ಕಲ್ಲೆಂದು ತಿಳಿದವರಪಾಲಿಗೆ ಕಲ್ಲಾಗುವನು. ಮಲ್ಲನೆಂದು ತಿಳಿದವರಪಾಲಿಗೆ ಮಲ್ಲನಾಗುವನು. ದೇವರೆಂದು ತಿಳಿದವರಿಗೆ ಮಾತ್ರ ದೇವನಾಗುವನು.

ಹಿರಣ್ಯ—ದೇವನಲ್ಲ. ಹೇಳಿ ತಿದ್ದಿಮಾಡಿಸಿದ ವಜ್ರದುಂಡಿಯಕಲ್ಲು.

ಪ್ರಲ್ಹಾದ—ಕಲ್ಲಲ್ಲ. ದೇವನು ಪ್ರೇಮಮಯನು, ಪ್ರೇಮಸಾಗರನು, ಕನಿಕರದಿಂದ ಕರೆಯುವ ಹಾಗೆ ಕರೆದರೆ, ಕರುವಿನ ಕೂಗನ್ನು ಕೇಳಿ, ಗೋಪ ತಾಯಿಯು ಓಡಿಬಂದು ತನ್ನ ಕರುವಿನಮೇಲೆ ಪ್ರೇಮಮಾಡುವಂತೆಯೇ, ಆ ದೇವನು ತನ್ನ ಭಕ್ತರಮೇಲೆ ಪ್ರೇಮಮಾಡುವನು. ಬೇಡಿದ್ದನ್ನು ಕೊಡುವನು. ಕೊಟ್ಟಿದ್ದನ್ನು ಬೇಡನು. ಸಾರಾಂಶ ಪ್ರೇಮವಿಲ್ಲದ ಮದಾಂಧ ಜನರಿಗೆ ಕಾಣುವ ದೇವನು ಸಹ ಕಲ್ಲು. ಅದೇ ಪ್ರೇಮಮಯ ಭಕ್ತನಿಗೆ ಅರಳುವ ಅರಳಿನಲ್ಲಿ ಸುರಿಯುವ ಮಳೆಯ ಹನಿಯಲ್ಲಿ ಬೆಳೆಯುವ ಬೆಳೆಯಲ್ಲಿ ಹರಿಯುವ ನೀರಿನ ಪ್ರತಿಯೊಂದು ಹನಿಯಲ್ಲಿ ಮಣ್ಣಿನ ಪ್ರತಿಯೊಂದು ಕಣದಲ್ಲಿ ಕಣ್ಣು ಹೊರಳಿಸಿದತ್ತ ನೋಡಿದತ್ತ ದೇವರ ಮೋಹಕ ರೂಪವು ಕಾಣುವದು.

ಹಿರಣ್ಯ—ನನ್ನಲ್ಲಿ ದೇವನು ಇರುವನೋ ಇಲ್ಲವೋ?

ಪ್ರಲ್ಹಾದ—ಇಲ್ಲದೆ ಏನು?

**೧೧ ಪದ ( ಭಾಮಿನಿಷಟ್ಪದಿ ರಾಗ ಸಾರಂಗ ಏಕತಾಳ )**

ಎಲ್ಲಿ ಕೇಳಿದರೆಲ್ಲಿ ನೋಡಿದ |
ರೆಲ್ಲಿ ಬೇಡಿದರೆಲ್ಲಿ ನೀಡಿದ |
ರೆಲ್ಲಿ ಓಡಿದರೆಲ್ಲಿ ಯಾಡಿದರೆಲ್ಲಿ ಇರುತಿಹನು ||
ಬಲ್ಲಿದ ರಿಗತಿ ಬಲ್ಲಿದನು ಸರಿ |
ಯಿಲ್ಲವಿವಗಾವಲ್ಲಿ ನೋಡಲು |
ಖುಲ್ಲ ಮಾನವರನೊಲ್ಲ ನಪ್ರತಿಮಲ್ಲ ಜಗಕೆಲ್ಲ || ೧ ||

ಹಿರಣ್ಯ—ಆ ಅಧಮನು ಅಪ್ರತಿಮನಲ್ಲ. ನಾನೆ; ಅಪ್ರತಿಮ ಮಲ್ಲನು. ನನ್ನನ್ನೇ ಪೂಜಿಸು.

ಪ್ರಲ್ಹಾದ—ನೀನು ಎಂದೂ ದೇವನಾಗಲಾರೆ.

ಹಿರಣ್ಯ—ಹಾಗಾದರೆ ನಾನು ಯಾರು?

ಪ್ರಲ್ಹಾದ—ಸಾಮ್ರಾಟ ಸೂರ್ಯನು ಒಂದೇ ಕಾಲಕ್ಕೆ ಉದಯಿಸಿದ, ಅನಂತ ಸೂರ್ಯರ ಪ್ರಕಾಶವನ್ನು ಅಡಗಿಸುವ ಪ್ರಕಾಶಕ್ಕೆ, ಪ್ರಕಾಶನಾದ ದೇವದೇವನ ಪ್ರಭುತ್ವದಮುಂದೆ ಸಾಮ್ರಾಟ ಸೂರ್ಯನು ಒಂದು ಮಿಣುಕು ಹುಳವು ಇದ್ದಹಾಗೆ.

ಹಿರಣ್ಯ—ಸ್ವರ್ಗಾದಿ ಸಮಸ್ತ ಲೋಕಗಳಲ್ಲಿಯ ವೀರಾಧಿವೀರರನ್ನೆಲ್ಲ ಮಣ್ಣು ಮುಕ್ಕಿಸಿ ಹೊನ್ನಿನ ರಾಸಿಯಮೇಲೆ, ವೈಭವ ಸಂಪನ್ನ ವಿಶ್ವದ ಸಮ್ರಾಟರ ವೀರ ಸಿಂಹಾಸನದಲ್ಲಿ ಮೆರೆಯುವ ಈ ದೈತ್ಯ ಸಮ್ರಾಟನು ಹೇಡಿಯೇ?

ಪ್ರಲ್ಹಾದ—ನಾನೆಲ್ಲಿ ಹಾಗೆ ಹೇಳುವೆನು? ಪರಮಾತ್ಮನ ಪ್ರಭುತ್ವದ ವರ್ಣನ ಮಾಡುವದು ತಪ್ಪೇ?

ಹಿರಣ್ಯ—ತಪ್ಪಿರಲಿ, ಒಪ್ಪಿರಲಿ. ನಿಜವಾದ ಸಮ್ರಾಟರಾರು?

ಪ್ರಲ್ಹಾದ—ಸ್ವಾರ್ಥಕ್ಕಾಗಿ ಸ್ವಸುಖಕ್ಕಾಗಿ ನಿಷ್ಕಾರಣ ಪರರಿಗೆ, ಪ್ರಜರಿಗೆ ಪೀಡೆ ಕೊಡುವ ವೈಭವ ಸಂಪನ್ನ ಸಮ್ರಾಟರು, ಲೋಕವನ್ನೇ ಮುರಿದು ನುಂಗುವ ರಾಕ್ಷಸರು. ಪ್ರಜರ ಹಿತಕ್ಕಾಗಿ, ಅವರ ಮಾನ ಪ್ರಾಣಗಳ ಹಿತಕ್ಕಾಗಿ ಬಳಿಯಲ್ಲಿ ಇದ್ದದ್ದನ್ನೆಲ್ಲ ದಾನಮಾಡಿ, ತಿರಿದುಣ್ಣುವ ತಿರುಕರ ಧೊರೆಗಳು ಜಗದ್ವಂದ್ಯ ಸಮ್ರಾಟರು ಮಹಾತ್ಮರು. ತಾತಾ, ವೀರಾಧಿವೀರರನ್ನು ಗೆದ್ದವರು ವೀರರಲ್ಲ.

ಹಿರಣ್ಯ—ಹಾಗಾದರೆ ನಿಜವಾದ ವೀರರಾರು?

ಪ್ರಲ್ಹಾದ—ಎಲ್ಲ ಜೀವಿಗಳ ಹೃದಯ ದುರ್ಗದಮೇಲೆ ಹಲ್ಲೆಮಾಡಿ, ಅವನ್ನು ಮೋಹಜಾಲದಲ್ಲಿ ಸಿಕ್ಕಿಸಿ ಕೊಲ್ಲುವ ಷಡ್ರಿಪುಗಳ ಬಲೆಗೆ ಬೀಳದೆ, ಅವರನ್ನು ತನ್ನ ಆಳಿನ ಆಳನ್ನಾಗಿ ಮಾಡುವದಲ್ಲದೆ, ಜಗತ್ತನ್ನು ಕುಣಿಸುವ ಪ್ರಭುವಾದ ದೇವದೇವನನ್ನು ಭಕ್ತಿಬಲದಿಂದ ತನ್ನೆದುರಿಗೆ ಕುಣಿಯುವ ಹಾಗೆ, ನಗುವಹಾಗೆ, ಅಳುವಹಾಗೆ ಮಾಡುವ ವೀರ ಭಕ್ತನೇ, ಸಮ್ರಾಟನು, ವೀರಾಧಿವೀರನು, ಶ್ರೀಹರಿ.

ಹಿರಣ್ಯ—ಇಷ್ಟಕ್ಕೆ ಬಾಯಿಮುಚ್ಚು, ನನ್ನಾಜ್ಞೆಯಂತೆ ನಡೆಯುವೆಯೋ ಏನು? ಅಮಂಗಲ ಮೂರ್ತಿಯನ್ನು ಪೂಜಿಸಿ ಪೂಜಿಸಿ, ಅಪವಿತ್ರವಾದ ನಿನ್ನ ಕೈಗಳನ್ನು ಛೇದಿಸಲೋ? ಮಗೂ ಬೇಡ; ಹಟಕ್ಕೆ ಬೀಳಬೇಡ. ನಿನ್ನ ತತ್ವವು ಸುಳ್ಳು.

ಪ್ರಲ್ಹಾದ—ಸುಳ್ಳಲ್ಲ, ನನ್ನ ತತ್ವವು ಸತ್ಯವಾದದ್ದು. ಒಂದಿಲ್ಲೊಂದು ದಿವಸ ನಾಶವಾಗುವ ರಾಜಶಕ್ತಿಗೆ ಬೆದರಿ, ರಾಜರ ರಾಜಶಕ್ತಿಯಾದ, ವಿಶ್ವದ ವಿಶ್ವಶಕ್ತಿಯಾದ ಪರಮೇಶ್ವರನ ಮಂಗಲ ಮೂರ್ತಿಯನ್ನು ಪೂಜಿಸುವ ಸತ್ಯ ಮಾರ್ಗ ಬಿಡಲಿಕ್ಕೆ ಈ ಪ್ರಲ್ಹಾದನು ಹೇಡಿಯಲ್ಲ. ಈ ನನ್ನ ತತ್ವವು ಸತ್ಯವಾದದ್ದು. ತಾತಾ, ತಾವೇಕೆ, ಈ ಸರ್ವಜಗತ್ತು ನಾನು ಆರಾಧಿಸುವ ದೇವದೇವನು ಕೂಡ, ನನ್ನ ಸತ್ಯದೆದುರಿಗೆ ನಿಲ್ಲಲಾರನು.

ಹಿರಣ್ಯ—ಸತ್ಯ ಸತ್ಯ ಎಂದು ಸತ್ತುಹೋಗಬೇಡ. ನನ್ನಾಜ್ಞೆಯಂತೆ ನಡೆ. ನೀನು ಬೇಡಿದ್ದನ್ನು ಕೊಡುವೆನು. ನನ್ನ ವಿರುದ್ಧ ಹೋದಲ್ಲಿ, ನೀನು ಶೆರೆಮನೆಯ ಕಠಿಣ ಶಿಕ್ಷೆಗಳಿಗೆ ಗುರಿಯಾಗಿ, ಅಲ್ಲಿಯ ಅನಂತ ಕ್ರೂರ ಯಾತನೆಗಳನ್ನು ಅನುಭವಿಸಬೇಕಾದೀತು, ದುರಾಗ್ರಹೀ.

ಪ್ರಲ್ಹಾದ—ದುರಾಗ್ರಹಿ ಅಲ್ಲ. ಅಸತ್ಯಮಾರ್ಗದಿಂದ ನಡೆದು ಅರಮನೆಯ ರಾಜಸುಖಬಡುತ್ತ, ರಥದಲ್ಲಿ ಕುಳಿತು ರಾಜಬೀದಿಯಲ್ಲಿ ಮೆರೆಯುವದಕ್ಕಿಂತ, ಪ್ರಜರ ಹಿತಕ್ಕಾಗಿ ಪರೋಪಕಾರಕ್ಕಾಗಿ ಸತ್ಯಮಾರ್ಗದಿಂದ, ಧರ್ಮಮಾರ್ಗದಿಂದ ನಡೆದ ತಪ್ಪಿಗಾಗಿ ರಾಜರ ಶೆರೆಮನೆಗಳಲ್ಲಿಯ ನರಕಸಮಯಾತನೆಗಳನ್ನು ಅನುಭವಿಸಿ, ಅನುಭವಿಸಿ ಆ ಶೆರೆಮನೆಗಳಲ್ಲಿಯೇ ಕೂಳಿಲ್ಲದೆ, ತೊಳಲಿ ತೊಳಲಿ ಸಾಯುವದೇ ವೀರಸ್ವರ್ಗಸುಖವೆಂದು ತಿಳಿದುಕೊಂಡ

ಅಹಿಂಸಾಪ್ರಿಯ ಸತ್ಯಾಗ್ರಹಿಗಳಲ್ಲಿ ಮೇಲಾದ ಸತ್ಯಾಗ್ರಹಿಯೇ ನಾನಾಗಿರುವೆನು.

ಹಿರಣ್ಯ—ಥೂ, ರಾಕ್ಷಸ ಕುಲಾಧಮಾ, ರಾಕ್ಷಸರ ಸತ್ವಹರಣಮಾಡುವ ದಾನವಾರಿಯನ್ನು ಸಂಹರಿಸುವ ಘೋರ ಪ್ರತಿಜ್ಞೆಮಾಡಿ, ವೀರ ಕಂಕಣಕಟ್ಟಿಕೊಂಡ ಈ ದಾನವೇಂದ್ರನು ನಿನ್ನಂಥ ಯಕಃಶ್ಚಿತ ಕ್ಷುದ್ರ ಹುಡುಗನ ಮಾತಿನ ಮಾಲೆಯ ಜಾಲಕ್ಕೆ ಸಿಕ್ಕು, ಸತ್ಯಪಕ್ಷ ಬಿಟ್ಟುಕೊಟ್ಟು, ಅಸತ್ಯಪಕ್ಷ ಹಿಡಿಯಲಿಕ್ಕೆ ನಿನ್ನ ಹಾಗೆ ದುರಾಗ್ರಹಿ ಅಲ್ಲ. ಸರ್ವರನ್ನು ನುಂಗಿ ಸರ್ವದೇಶಗಳಲ್ಲಿ ಎಲ್ಲಿ ನೋಡಿದಲ್ಲಿ ನಮ್ಮ ವರ್ಣದವರ ವಿಜಯಧ್ವಜ ಸ್ಥಾಪಿಸುವ ಅಜೇಯ ಅಜರಾಮರ ಸರ್ವಶಕ್ತಿಮಾನ್ ಸತ್ಯಾಗ್ರಹಿ ಆಗಿರುವೆನು ಸತ್ಯಾಗ್ರಹಿ.

ಪ್ರಲ್ಹಾದ—ರಾಜ್ಯವಿದೆ, ಪೌರುಷವಿದೆ, ದಂಡಿನ ಬಲವಿದೆ, ಸಂಪತ್ತಿದೆ ಎಂಬ ಗರ್ವದಿಂದ ಮದಾಂಧರಾಗಿ ಮನಬಲ್ಲಂತೆ ನಿರಪರಾಧಿಗಳಾದ ಸುಜನರ ರಕ್ತದ ಕಾವಲಿಗಳನ್ನು ಹರಿಸುವಲ್ಲಿ ಅನ್ಯಾಯದಿಂದ ಅಧರ್ಮದಿಂದ ಆಳುತ್ತ ವಿಲಾಸಸುಖದಲ್ಲಿ ವೇಳೆ ಕಳೆಯುತ್ತಿರುವ ನೀಚರಾಜರು ಸಮ್ರಾಟರು, ನೀಚ ಅಧಿಕಾರಿಗಳು ಸತ್ಯಾಗ್ರಹಿಗಳು ಎಂದು ಜಗತ್ತು ಹೇಳುವಂಥ ಮಾತಂತೂ ಇರಲಿ, ಬೀದಿಯಲ್ಲಿ ಬೊಗಳುತ್ತ ತಿರುಗುವ ಹುಚ್ಚನಾಯಿಯು ಕೂಡ ಅಂಥ ಹಿಂಸಾತ್ಮಕ ದುಷ್ಟ ರಾಜರಿಗೆ ದುಷ್ಟ ಸಮ್ರಾಟರಿಗೆ ಸತ್ಯಾಗ್ರಹಿಗಳೆಂದು ಹೇಳುವದಿಲ್ಲ.

ಹಿರಣ್ಯ—ನಿಜವಾಗಿಯೂ ನಿನ್ನ ತಲೆಯು ತಿರುಗಿದೆ. ಎಂದೇ ಸಮ್ರಾಟನೆದುರಿಗೆ ಹೀಗೆ ಎದುರುತ್ತರ ಕೊಡುತ್ತಿರುವೆ.

ಪ್ರಲ್ಹಾದ—ನಾನು ಎದುರುತ್ತರ ಕೊಡುವದಿಲ್ಲ. ತಾತಾ, ನೀರಿನಲ್ಲಿ ತೇಲುವ ನೀರಿನ ಗುಳ್ಳೆಯಹಾಗೆ ಅತಿ ಸ್ವಲ್ಪಕಾಲವಿದ್ದು ಹಾಳಾಗಿಹೋಗುವ ರಾಜಸುಖದಾಶೆಗೆ ಮರುಳಾಗಿ ತಲೆ ತಿರುಗಿ ರಾಜರು ಸಮ್ರಾಟರು ಮನಬಂದಂತೆ ನಡೆಯುವ ರಾಜಕೋಣಗಳಾಗಿ ಮೆರೆಯುವದು ಸರಿಯಲ್ಲವೆಂದು ಸೂಚಿಸಿದೆನು.

ಹಿರಣ್ಯ—ಇಷ್ಟು ಸೊಕ್ಕಲ್ಲವೇ ನಿನಗೆ, ಇನ್ನು ಹೆಚ್ಚಿಗೆ ಮಾತನಾಡಿದೆಯೆಂದರೆ ನಿನ್ನ ನಾಲಿಗೆಯನ್ನೇ ಛೇದಿಸುವೆನು.

ಪ್ರಲ್ಹಾದ—ನಮ್ಮ ಪರಮಪೂಜ್ಯ ಗುರುಗಳವರಿಂದ ಗರ್ಭದಲ್ಲಿರುವಾಗ ಉಪದೇಶಹೊಂದಿ, ಆಮೇಲೆಗೆ ಭಗವಂತನ ಭಕ್ತಿಯ ಬೆಳಕಿನಲ್ಲಿ ಬೆಳೆಯು ತ್ತಿರುವವನನ್ನು ಕೊಲ್ಲುವದು ಶಕ್ಯವಿಲ್ಲ. ಕಾಲತ್ರಯಕ್ಕೂ ಶಕ್ಯವಿಲ್ಲ.

ಹಿರಣ್ಯ—ಆದೇಕೆ ಶಕ್ಯವಿಲ್ಲವೋ, ಕುಲಘಾತಕಾ.

ಪ್ರಲ್ಹಾದ—ಶಾಂತಿಮಯ, ಅಹಿಂಸಾಮಯ, ಸತ್ಯಮಯ, ಧರ್ಮ ಮಯ ರಾಜತತ್ವದ ಧ್ವಜಪತಾಕೆಯನ್ನು ಸ್ಥಾಪಿಸುವ ವೀರ ಕಂಕಣ ಕಟ್ಟಿ ಕೊಂಡು ಜೀವದ ಹಂಗುದೊರೆದು ದೇವನಲ್ಲಿ ಅಚಲಭಕ್ತಿಯನ್ನು ಇಟ್ಟು, ತನ್ನ ರಕ್ಷಣೆಯಭಾರವನ್ನು ಆ ದಯಾಸಾಗರನ ಮೇಲೆ ಹಾಕಿ ಸತ್ಯ ಮಾರ್ಗ ದಿಂದ, ಧರ್ಮಮಾರ್ಗದಿಂದ, ಭಕ್ತಿಮಾರ್ಗದಿಂದ ನಡೆಯುವ ಸತ್ಯಾಗ್ರಹಿ ಯಾದ ಮಹಾತ್ಮನ ಬಾಯಿಗೆ ಬೀಗಹಾಕುವದು, ಅವನಕೊದಲೆಳೆಗೆ ಕೂಡ ಅಪಾಯಮಾಡುವ ಶಕ್ತಿಯು ಜಗತ್ತಿನಲ್ಲಿಯ ಶಸ್ತ್ರಾಸ್ತ್ರಗಳಲ್ಲಿ, ಸ್ವರ್ಗದಲ್ಲಿಯ ಶಸ್ತ್ರಾಸ್ತ್ರಗಳಲ್ಲಿ, ದೇವರ ಶಸ್ತ್ರಾಸ್ತ್ರಗಳಲ್ಲಿ ಕೂಡ ಇಲ್ಲ. ತಾತಾ, ರಾಜ ಸತ್ತೆಯು ಎಷ್ಟು ಮೆರೆದರೂ ಕೊನೆಗೆ ಒಂದಿಲ್ಲೊಂದು ದಿವಸ ಸತ್ಯಾಗ್ರಹಿಯ ಸತ್ಯದ ಶಕ್ತಿಯ ಎದುರಿಗೆ ತನ್ನ ತಲೆಯನ್ನು ಬಾಗಿಸಲೇ ಬೇಕಾಗುತ್ತದೆ.

ಹಿರಣ್ಯ—ಸಾಕು ಸಾಕು, ಇನ್ನು ನಿನ್ನಮಾತು ಕೇಳೆನು. ಅಕ್ರಾಳಾ ವಿಕ್ರಾಳಾ. (ಬಂದು ನಮಿಸಿ ನಿಲ್ಲಲು) ಈ ಕುಲಕುಠಾರನನ್ನು ಭದ್ರವಾದ ಕಾವಲಿನಲ್ಲಿ ಒಯ್ದಿಡರಿ.

ಕಯಾಧು—ಪ್ರಾಣೇಶ್ವರಾ,

ಹಿರಣ್ಯ—ಸುಮ್ಮನಿರೆ, ನೀನು ಮಧ್ಯದಲ್ಲಿ ಬರಬೇಡ. ಎಲವೋ, ನೀಚಾ, ನಿನಗೆ ಕಲಿಸಿದ ಗುರುವು ಯಾರು?

ಪ್ರಲ್ಹಾದ—ಮೀನದಮರಿಗೆ ಯಾರಾದರೂ ಈಸಲು ಕಲಿಸುವರೇನು?

ಹಿರಣ್ಯ—ನೀನು ಮೀನವಲ್ಲ. ನಿನಗೆ ಕಲಿಸಿದ ಗುರುವಿನ ಹೆಸರೇನು?

ಪ್ರಲ್ಹಾದ—ಶ್ರೀ ಹರಿಯು, ಆ ಕರುಣಾಸಾಗರನೇ ನನ್ನ ಗುರುವು. ನನ್ನ ಪ್ರೇಮದ ತಾಯಿ ತಂದೆ ಸಕಲ ಬಂಧು ಬಳಗವು ಕೂಡ ಆಗಿದ್ದಾನೆ. ನನ್ನ ಶ್ರೀ ಹರಿ.

ಹಿರಣ್ಯ—ಕೇಳೆನು, ಕೇಳೆನು. ಕರ್ಣಕಠೋರ ಶಬ್ದ

ಪ್ರಲ್ಹಾದ—ಕರ್ಣ ಕಠೋರವಲ್ಲ, ಅಮೃತಮಯ ಶಬ್ದ

ಹಿರಣ್ಯ—ವಿಷಮಯ ಶಬ್ದ, ನಿನ್ನ ಮುಖವನ್ನು ಕೂಡ ನೋಡೆನು. ಗುರುಗಳ ದುರುಪದೇಶದಿಂದ ನಿನ್ನ ತಲೆಯೆಲ್ಲವೂ ಕೆಟ್ಟುಹಾಳಾಗಿ ಹೋಗಿದೆ ಆಕ್ರಾಳಾ, ವಿಕ್ರಾಳಾ, ಸ್ವಲ್ಪ ಸಹ ವಿಲಂಬ ಮಾಡದೆ ಈ ಕುಲಘಾತಕನನ್ನು ಶೆರೆಮನೆಯಲ್ಲಿ ಇಡರಿ. ಈ ಪಾಪಾತ್ಮನು ನನ್ನ ಕಣ್ಣೆದುರಿಗೆ ಕೂಡ ಬೇಡ. ಈ ನೀಚ ಕುಲಾಂಗಾರನನ್ನು ಎಳೆದೊಯ್ಯಿರಿ. (ಸೇವಕರು ಪ್ರಲ್ಹಾದನನ್ನು ಎಳೆದುಕೊಂಡು ಹೋಗುವರು)

ಕಯಾಧು—ಮಹಾರಾಜ, ಆಜ್ಞೆಯನ್ನು ತಿರುಗಿಸಿರಿ.

ಹಿರಣ್ಯ—ಇಲ್ಲ, ಒಮ್ಮೆ ಆದ ರಾಜಾಜ್ಞೆಯು ತಿರುಗುವದು ಶಕ್ಯವೇ ಇಲ್ಲ (ದೂತರು ಹೋದಕಡೆಗೆ ಹೋಗುವನು. )

ಕಯಾಧು—ಇನ್ನುಮಾತ್ರ ನನ್ನಯತ್ನವು ಮೀರಿತು. ದೇವಾ,

**೧೨ ಪದ ರಾಗ ಜೋಗಿಯಾ ರೂಪಕ ತಾಳ**

ನಿನ್ನ ಸ್ಮರಣಾ ಪಾವಕಾ| ನಿನ್ನನಾಮಾ ತಾರಕಃ|| ಪ ||
ತರುಳಗೆ ನೀನೇಪಾಲಕಾ | ಧರೆಯುಕಾಯ್ವ ಚಾಲಕಾ ||
ಮರೆವರೆ ಶರಣಾಧೀನತಾ | ಕರಿಯ ಕಾಯ್ದಾ ದೇವತಾ|| ೧ ||

# ೪ನೆಯ ಪ್ರವೇಶ.

ಸ್ಥಳ—ಹಿರಣ್ಯಕಶಿಪುವಿನ ರಾಜಧಾನಿಯ ಕಡೆಗೆ ಹೋಗುವ ಹಾದಿಯು

**ಪಾತ್ರ—ನಾ ರ ದ ರು**

ಬರುವರೀತಿಯು—ವೀಣೆಯ ನಾದದೊಡನೆ ನಾರಾಯಣ ನಾರಾಯಣ ಎನ್ನುತ್ತ ಬರುವರು.

ನಾರದ—(ಸ್ವಗತ) ಪ್ರಜರ ಪ್ರಜತ್ವದ, ರಾಜರ ರಾಜತ್ವದ, ಇಷ್ಟೇ ಅಲ್ಲ. ದೇವರ ದೇವತ್ವದ ನಾಶಮಾಡಿ, ಕೇವಲ ಸ್ವಾರ್ಥದಾಶೆಗೆ ನೀತಿ

ನ್ಯಾಯಧರ್ಮಗಳನ್ನು ಸಹ ಲಕ್ಷ್ಯಗೆತಾರದಲೆ ಅಧರ್ಮದ ಪ್ರಚಾರವೇ ಧರ್ಮ, ನ್ಯಾಯದ ಕೊಲೆಯೇ ನ್ಯಾಯ ಪಾಪವೇ ಪುಣ್ಯ, ಅಸತ್ಯವೇ ಸತ್ಯ ಎಂಬ ದುರಾಗ್ರಹದಿಂದ ಮದೋನ್ಮತ್ತರಾಗಿ ಮದ್ದಾನೆಯಂತೆ ಒಬ್ಬರ ಲಕ್ಷ್ಯವಿಲ್ಲದೆ, ವರ್ತಿಸುವ ದುಷ್ಟಾತ್ಮರಾದ ರಾಜರ,ದುಷ್ಟ ಅಧಿಕಾರಿಗಳ ಭಾರತಾಳದೆ ಭೂದೇವಿಯು ಗದಗದ ನಡಗುತ್ತಿರುವಳು. ಪ್ರಜರ ಗೋಳನ್ನು ಹೇಳಕೇಳುವವರೇ ಇಲ್ಲದಾಗಿದೆ. ಹೀನ ದೀನಪ್ರಜರು, ಗೇಣುಬಟ್ಟೆಕಾಣದೆ ಹೊಟ್ಟೆಗೆ ಕೂಳಿಲ್ಲದೆ ಕಂಗಾಲರಾಗಿ ಸ್ವಾರ್ಥಪ್ರಿಯ, ವಿಲಾಸಪ್ರಿಯ ದುಷ್ಟರಾಜರ ದುಷ್ಟ ಅಧಿಕಾರಿಗಳ ಸೇವೆಯನ್ನು ದುಡಿ-ದುಡಿದು ಸಣ್ಣಾಗುತ್ತ ನಡೆದಿರುವರು. ಸ್ವಸುಖಕಾಗ್ಗಿ ಪ್ರಜರ ಕೊಲೆಮಾಡುವದೂ ಅವರ ಹೊಲ-ಮನೆ-ಮಾರುಗಳನ್ನು ಸುಲಿಯುವದೂ ಅವರ ಸ್ತ್ರೀಯರನ್ನು ಕೆಡಿಸುವದೂ ಪರಸ್ಪರರಲ್ಲಿ ಕಲಹಹಚ್ಚಿ ತಮ್ಮ ಬೇಳೆ ಬೇಯಿಸಿಕೊಳ್ಳುವದೂ ದುಷ್ಟರಾಜರ ಹಾಗು ದುಷ್ಟರಾಜ್ಯಾಧಿಕಾರಿಗಳ ಪರಮ ಪವಿತ್ರ ಕರ್ತವ್ಯ ಕರ್ಮಗಳಾಗಿವೆ. ಆ ನೀಚಾತ್ಮರ ಪ್ರಬಲ ಸಮ್ರಾಟ ಶಕ್ತಿಯ ಎದುರಿಗೆ ನಿಂತುಹೋರಾಡುವ ಶಕ್ತಿಯು ಮಾನವಶಕ್ತಿಯಲ್ಲಿ ದಾನವ ಶಕ್ತಿಯಲ್ಲಿ ದೇವಶಕ್ತಿಯಲ್ಲಿ ಕೂಡ ಇಲ್ಲದಾಗಿದೆ. ಆ ಕ್ರೂರ ಹಿಂಸಾಮಯ ಶಕ್ತಿಯನ್ನೇ ಸಮೂಲ ನಿರ್ಮೂಲಮಾಡಿ ಬಿಡುವ ಉದ್ದಿಶ್ಯವಾಗಿಯೇ ಜನ್ಮತಾಳಿದ ಮಹಾತ್ಮನು ಎಂದರೆ ನನ್ನ ಪ್ರಿಯಶಿಷ್ಯ ಪ್ರಲ್ಹಾದನು ತನ್ನ ತಾಯಿಯ ಗರ್ಭದಲ್ಲಿದ್ದಾಗಲೇ ನನ್ನಿಂದ " ಓನ್ನಮೋ ನಾರಾಯಣಾಯ " ಎಂಬ ಅಹಿಂಸಾಮಂತ್ರದ ಶಾಂತಿಪಾಠದ ಶಿಕ್ಷಣ ಹೊಂದಿದ್ದಾನೆ. ಈಗ ಆ ನನ್ನ ಪ್ರಿಯಶಿಷ್ಯನು ರಾಜ ವೈಭವಕ್ಕೆ ಮರುಳಾಗಿ ದುರಾಗ್ರಹಿ ಆಗಿರುವನೋ ಅಥವಾ ನಾನು ಹೇಳಿಕೊಟ್ಟ ತತ್ವಕ್ಕನುಸಾರವಾಗಿ ನಡೆಯುತ್ತ ಸತ್ಯಾಗ್ರಹಿ ಆಗಿರುವನೋ ಎಂಬದನ್ನು ಪರೀಕ್ಷಿಸುವದಕ್ಕಾಗಿಯೇ ನಾನೀಗ ಸಂಚಾರ ಮಾಡುತ್ತಮಾಡುತ್ತ ಭೂಲೋಕಕ್ಕೆ ಅದರಲ್ಲಿಯೂ ನನ್ನ ದೇವರ ಪ್ರೇಮಕ್ಕೆ ಪಾತ್ರವಾದ ಆರ್ಯಾವೃತ್ತಕ್ಕೆ ಬಂದಿರುವೆನು. ದೇವಾ, ನಾರಾಯಣಾ, ಸತ್ಯ ಪಕ್ಷ ಹಿಡಿದು ಹೋರಾಡುತ್ತಿರುವ ನನ್ನ ಪ್ರಿಯಶಿಷ್ಯ ಪ್ರಲ್ಹಾದನಮೇಲೆ ನಿನ್ನ ವರದಹಸ್ತವಿರಲಿ.

**೧೩ ಪದ ರಾಗ ದುರ್ಗಾ ತಾಳ ಯಕ್ಕಾ**

**ಸತತ ಹರಿಯ ಪ್ರಾರ್ಥನಾ ಬಹು ಮೋದಾ |**

ಧಾತ್ರಿಯನ್ನ್ ಪೊರೆವ ಹರಿಯೆ ವಿಧಾತಾ॥ ಪ ॥
ಭವಭಂಗಾ ನಾವು ಪಾಡೆ । ಪವನ ಸುತನ ಪಿತನ ಸಿಂಗಾರಾ ॥ ೧ ॥
ಬಲುಚಂದಾ ಹರಿಯೆಮನದಿ । ಸುಳಿಯೆ ವಲಿಯೆ ನಲಿಯೆ ವಿಧಾತಾ ॥ ೨ ॥

## ೧ನೆಯ ಅಂಕ ಮುಗಿದುದು.

### ಶ್ರೀ ಮಧ್ವೇಶಾರ್ಪಣಮಸ್ತು.



|| ಹರಿಃ ಓಂ ||

ಶ್ರೀ ಗುರುರಾಜ ಪ್ರಸನ್

# ವೈಕುಂಠಕ್ಕೆ ಮುತ್ತಿಗೆ.

ಅಥವಾ

## ವಿಶ್ವದ ಪ್ರಥಮ ಮಹಾತ್ಮಾ. [ ನಾಟಕವು ]

## ೨ ನೆಯ ಅಂಕ

### ೧ನೆಯ ಪ್ರವೇಶ.

ಸ್ಥಳ—ಕಯಾಧುವಿನ ಮಂದಿರವು.

ಪಾತ್ರಗಳು—ನರ್ತಕಿಯರು, ಕಯಾಧು, ಪ್ರಲ್ಹಾದ, ಅಕ್ರಾಳ.

ಬರುವರೀತಿಯು—(ನರ್ತನವು ನಡೆದಿರುವದು)

ನರ್ತಕಿಯರು— **೧ಳ ಪದ ರಾಗ ಯಮುನ ತ್ರಿತಾಳ**

ನೀಸಾಗಿಹೆ ದೈತ್ಯರ ವರರಾಣಿ |<br>
ಗಾನವಿನೋದಿನಿ ರಾಣಿ || ಪ ||<br>
ಧೀಮಂತ ದೇವಾದಿಸುಪೂಜಿತೆ |<br>
ಕಾಮಮೋಹಿತೆ ಸುಮಧುರಗೀತೆ |<br>
ಪ್ರೇಮದಿಂದ ಪೊರೆ ಪ್ರಖ್ಯಾತೆ|| ೧ ||

ಪ್ರಲ್ಹಾದ—(ನರ್ತನವು ಮುಗಿದಮೇಲೆ) ಇಂದೇಕೆ ನರ್ತನಸಮಾರಂಭವು ನಡೆದಿರುವದು?

ಕಯಾಧು——ಆನಂದದ ದಿವಸವೆಂದು.

ಪ್ರಲ್ಹಾದ——ಅದಾವ ನಿಮಿತ್ತವಾಗಿ ಅಮ್ಮಾ?

ಕಯಾಧು——ನಿನ್ನ ನಿಮಿತ್ತವಾಗಿಯೇ ಮಗೂ.

ಪ್ರಲ್ಹಾದ —ಅದೇಕೆ?

ಕಯಾಧು——ಕೊನೆಗೆ ಮಹಾರಾಜರು ನನ್ನ ಸವಿನಯ ಪ್ರಾರ್ಥನೆಗೆ ಮರ್ಯಾದೆಮಾಡಿ ನಿನ್ನನ್ನು ಕಷ್ಟಮಯ ಶೆರೆಮನೆಯ ದುಃಖದಿಂದ ಮುಕ್ತ ಮಾಡಿದರೆಂದು.

ಪ್ರಲ್ಹಾದ—ದುಃಖಸಾಗರದಲ್ಲಿ ನೂಕಿಸಬೇಕೆಂಬ ಉದ್ದಿಶ್ಯದಿಂದಲ್ಲವೇ?

ಕಯಾಧು——ಹಾಗಲ್ಲ. ಮಗೂ. ನೀನು ಆನಂದಾಮೃತ ಪಾನ ಮಾಡಿ ಮಾಡಿ, ಆನಂದಬಡುವದನ್ನು ನೋಡಿ, ಹಿರಿಹಿರಿ ಹಿಗ್ಗಬೇಕೆಂದು.

ಪ್ರಲ್ಹಾದ——ಆನಂದ! ಹಿಂಸಾಮಯ ದುಷ್ಟರಾಜ್ಯದಲ್ಲಿ ಅನ್ಯಾಯದ ಅಧರ್ಮದ ರಾಜ್ಯದಲ್ಲಿ ಎಲ್ಲಿದೆ ಆನಂದ! ನಾನು ದುಃಖದಲ್ಲಿಯೇ ಮರ ಮರ ಮರುಗಿ ಕೊರಗಿ ಕೊರಗಿ ಸಾಯಬೇಕೆಂದು ದೇವರ ಸಂಕಲ್ಪವಲ್ಲ. ಮರತೆ; ಸಾಮ್ರಾಟರ ಸಂಕಲ್ಪ. ಮೇಲಾಗಿ ಸತ್ಯಕ್ಕಾಗಿ ಸಾಯುವ ಸಂಕಲ್ಪಮಾಡಿದ ಸತ್ಯಾಗ್ರಹಿಯ ಬಂಧನ ದುಃಖವನ್ನು ಪ್ರಾರ್ಥನೆಯ ಮುಖಾಂತರ ಬಿಡಿಸುವದೆಂದರೆ ಆತನ ಕೊಲೆ ಮಾಡಿದಂತೆ, ಭೂಮಾತೆಯ ಕೊರಳ ಕೊಯ್ದಂತೆ.

ಕಯಾಧು——ಹೀಗೇಕೆ ಮಾತನಾಡುವೆ ಮಗೂ?

ಪ್ರಲ್ಹಾದ—ಹೀಗೇಕೆಂದರೆ,ರಾಷ್ಟ್ರಕ್ಕೆ ಹಿತವಾಗಬೇಕೆಂದು ಪುಣ್ಯಕರ್ಮ ಮಾಡುವ ಮಹಾತ್ಮರನ್ನು ಹೀಯಾಳಿಸಿ, ಕಾಡಿ ಕಾಡಿ ನರಕದಲ್ಲಿ ದಬ್ಬುವೆನು. ಶೆರೆ–ಮಾಂಸಾದಿಗಳ ಸೇವನ ಮಾಡುತ್ತ, ಉನ್ಮತ್ತರಾಗಿ ಮನಬಂದಂತೆ ನಡೆಯುವ ದುರಾತ್ಮರನ್ನು ಪೂಜಿಸಿ, ಪೂಜಿಸಿ, ದೊಡ್ಡಪದಗಳಮೇಲೆ ಕುಳ್ಳಿರಿಸಿ ಸ್ವರ್ಗಸುಖ ಅನುಭವಿಸಲು ಹಚ್ಚುವೆನು, ಎಂದು ಘೋರ ಪ್ರತಿಜ್ಞೆಮಾಡಿ, ಅನ್ಯಾಯದಿಂದ ಅಧರ್ಮದಿಂದ ಆಳುತ್ತಿರುವ ಹಿಂಸಾಮಯ ರಾಜಪಿಶಾಚಿಯ ಪಾಪಮಯ ದುಷ್ಟಾನ್ನ ತಿಂದು ಆನಂದ ಪಡುವದಕ್ಕಿಂತ ಶೆರೆಮನೆಯಲ್ಲಿ ಅಲ್ಲ ಹರಿಮನೆಯಲ್ಲಿ ಹರಿಪ್ರಸಾದ ಸೇವಿಸಿ, ಅಲ್ಲಿ ಸಾಯುವದರಲ್ಲಿಯೇ ನನಗೆ

ಆನಂದ ಪರಮಾನಂದ.

ಕಯಾಧು—ಹೀಗೆ ತಿಳಿಗೇಡಿಯಹಾಗೆ ಮಾತನಾಡಬೇಡ. ಮಗೂ ಬಾ, ನನ್ನಹತ್ತಿರ ಕುಳಿತುಕೊಂಡು, ನಾನು ಕೇಳುವದಕ್ಕೆಲ್ಲ ಸರಿಯಾಗಿ ಉತ್ತರಕೊಡು.

ಪ್ರಲ್ಹಾದ—ಮಾತಿನ ಜಗಳದಲ್ಲಿ ವೇಳೆಕಳೆಯದೆ ಮಂಗಲಮಯ ಶ್ರೀಹರಿಧ್ಯಾನದಲ್ಲಿ ಆನಂದದಿಂದ ವೇಳೆಕಳೆಯುವೆನೆಂದು ನನಗೆ ವಚನಕೊಟ್ಟರೆ ಮಾತ್ರ ನಾನು ನಿನ್ನ ಮಾತು ಕೇಳುವೆನು.

ಕಯಾಧು—ರಾಜರ, ಅದರಲ್ಲಿಯೂ ತಂದೆಯವರ ರಾಜಾಜ್ಞೆಗೆ ಅವಮರ್ಯಾದೆ ಮಾಡುವದು ನ್ಯಾಯವೇ?

ಪ್ರಲ್ಹಾದ—ನಾನೆಲ್ಲಿ ತಾತನ ಆಜ್ಞಾಭಂಗ ಮಾಡುತ್ತಿರುವೆನು? ಮಾತೇ, ರಾಜಾಜ್ಞೆಯಂತೆ ಅವರು ಕೊಡುತ್ತಿರುವ ಕಠಿಣ ಶಿಕ್ಷೆಗಳನ್ನೆಲ್ಲ ಶಾಂತರೀತಿಯಿಂದ ಅನುಭವಿಸುವದರಿಂದಲೇ ಸರ್ವಜಗತ್ತಿಗೆ ಕಲ್ಯಾಣವಾಗುವದೆಂದು ನನ್ನ ದೃಢವಾದ ನಂಬಿಗೆಯು ಇದೆ.

ಕಯಾಧು—ಶಾಂತಿಯ ಆಟವು ಪ್ರಬಲ ಶಸ್ತ್ರಾಸ್ತ್ರಗಳಮುಂದೆ ನಡೆಯುವದೇ?

ಪ್ರಲ್ಹಾದ—ಸ್ವಸುಖಕ್ಕಾಗಿ ನೀಚರಾಜರು ಕೊಡುತ್ತಿರುವ ದುಷ್ಟ ಶಾಸನಗಳನ್ನು ಆನಂದದಿಂದ ಅನುಭವಿಸುವ ಮಹಾತ್ಮರ, ಲೋಕಕಲ್ಯಾಣಕ್ಕಾಗಿ ದೇಹಸವಿಸುವ ಕರ್ಮಯೋಗಿಗಳ, ಶಾಂತಿಯಮುಂದೆ ರಾಜ್ಯಗಳನ್ನು ನುಂಗುವ ರಾಜರೇಕೆ ಪ್ರಳಯಕಾಲದಲ್ಲಿ ಸರ್ವರನ್ನು, ಸರ್ವಜಗತ್ತುಗಳನ್ನು ಸಮೂಲ ನುಂಗುವ ಸಾಮ್ರಾಟರ ಸಾಮ್ರಾಟನ, ಎಂದರೆ ದೇವರ ಆಟವು ಕೂಡ ನಡೆಯುವಹಾಗಿಲ್ಲ.

ಕಯಾಧು—ತಂದೆಯವರು ದೇವರಲ್ಲವೆ?

ಪ್ರಲ್ಹಾದ—ಹೌದು. ಮಾತೇ, ನನ್ನ ದೇವರ ದೇವನಾದ ಪರಮಾತ್ಮನ ಆಜ್ಞೆಯೇ ನನಗೆ ಹೆಚ್ಚಿನದಾಗಿದೆ. ನನ್ನ ದೇವನು ಸಾಮಾನ್ಯನಲ್ಲ.

**೧೫ ಪದ ರಾಗ ಬಹಾರ ತ್ರಿತಾಳ**

ಸುಮಂದಿರಾ, ಸುಚಂದಿರಾ ಕೃಪಾಕರಾ |
ಕಮನೀಯಾ ಮುಖಭಾಯಾ ||

ರಮೆಯ ಮನಕತಿ ಮುದಾ|
ಪ್ರೇಮಮಯ ಹರಿ ಪ್ರೇಮಖಣಿ ಹರಿ|
ತಮವನೆ ಕಳೆವಾ ದಿನಮಣಿ ಗುಣಖಣಿ|| ೧ ||
ಹರಿಗುಣಕಥನ ಅಮೃತಪಾನಾ|
ವಾರಿಜನಾಭ ಸದಮಲಸದನಾ||
ಕುರಂಗನಯನಾ ಲಕ್ಷ್ಮೀರಮಣಾ|| ೨ ||

ಶ್ರೀಹರಿ ಧ್ಯಾನದಲ್ಲಿ ಶ್ರೀಹರಿ ಪೂಜೆಯಲ್ಲಿ ಇದ್ದಷ್ಟು ಆನಂದವು ಸ್ವರ್ಗದಲ್ಲಿ ಕೈಲಾಸದಲ್ಲ, ಸತ್ಯಲೋಕದಲ್ಲಿ, ವೈಕುಂಠಲೋಕದಲ್ಲಿ ಕೂಡ ಇಲ್ಲ. ದೇವ ಬ್ರಾಹ್ಮಣ ಗುರು ಹಿರಿಯರ ದ್ವೇಷಿಯು, ತಂದೆಯೇ ಅಲ್ಲ. ಹಿಂಸಾಮಯ ಪ್ರಜಾಭಕ್ಷಕ ರಾಜನು ರಾಜನೇ ಅಲ್ಲ; ಎಂದು ವೇದದಲ್ಲಿ ಹೇಳಿದೆ. ಮಾತೇ, ಒಮ್ಮಿಂದೊಮ್ಮೆ ನಿನ್ನ ಮುಖವೇಕೆ ಬಾಡಿತು?

ಕಯಾಧು—ಮಗನು ಹೊಟ್ಟೆತುಂಬ ಅನ್ನವಿಲ್ಲದೆ, ಮೈತುಂಬ ಬಟ್ಟೆಯಿಲ್ಲದೆ, ಶರೆಮನೆಯ ಕಠಿಣ ಯಾತನೆಗಳಿಗೆ ಗುರಿಯಾಗಿ ದುಃಖಪಡುತ್ತಿರುವಾಗ, ಹಡೆದತಾಯಿಗೆ ಎಂದಾದರೂ ಸಮಾಧಾನವಾಗುವದೇ?

ಪ್ರಲ್ಹಾದ—ಮಾತೇ, ನನ್ನ ರಕ್ಷಣೆಯನ್ನು ಮಾಡುವದಕ್ಕಿಂತ, ಬಟ್ಟೆಯಿಲ್ಲ ಹೊಟ್ಟೆಗಿಲ್ಲ ಎಂದು ಹಗಲಿರುಳು ದುಃಖದುರಿಯಲ್ಲಿ ಬೆಂದು ನೊಂದು ಗೋಳಾಡುತ್ತಿರುವ ಪ್ರಜರ ರಕ್ಷಣಮಾಡಿ, ನೀವು ನಿಮ್ಮ ಹೊಟ್ಟೆಯಮಕ್ಕಳ ಕರುಳುಹರಿದರೂಕೂಡ ನನಗೆ ಆನಂದವೆನಿಸುವದು. ರಾಜರಿಗೆ ರಾಜಪತ್ನಿಯರಿಗೆ ಹೊಟ್ಟೆಯ ಮಕ್ಕಳಿಗಿಂತ ಪ್ರಜರೇ ಹೆಚ್ಚಿನ ಪ್ರೀತಿಯ ಮಕ್ಕಳು. ಪ್ರಜರಿಗಾಗಿ ಸರ್ವಸ್ವ ಕಳೆದುಕೊಂಡು ಕೊನೆಗೆ ಪ್ರಾಣದಾನಮಾಡುವದೇ ರಾಜರಿಗೆ ರಾಜಕುಲಸಂಭೂತರಿಗೆ ಭೂಷಣವು; ಎಂದು ರಾಜಧರ್ಮದಲ್ಲಿ ಸಾರಿ ಸಾರಿ ಹೇಳಿದೆ. ಯಾರಿಗೆ ಯಾರು ಸಂಬಂಧವಮ್ಮಾ, ಈ ಜಗತ್ತಿನಲ್ಲಿ ಎಲ್ಲರೂ ಸ್ವಾರ್ಥಪ್ರಿಯರೆ!

ಕಯಾಧು—ಹೀಗೆ ಮಾತನಾಡಕೂಡದು. ಮಗೂ, ತಾಯಿತಂದೆಗಳ ದೇಹಗಳು ಮಕ್ಕಳ ಕಲ್ಯಾಣಕ್ಕಾಗಿಯೇ ಇರುವವಲ್ಲ?

ಪ್ರಲ್ಹಾದ—ಬರಿ ಬಾಯಿಮಾತಿನಿಂದ ಪ್ರಯೋಜನವೇನು? ತಂದೆ ತಾಯಿಗಳು ಸ್ವಾರ್ಥಪ್ರಿಯರೆಂದೇ ಬೇನೆಬಂದು ಸತ್ತಮಕ್ಕಳನ್ನು ಸ್ಮಶಾನ

ದಲ್ಲಿ ಸುಟ್ಟುಬಂದ, ಸ್ವಲ್ಪದಿವಸಗಳಲ್ಲಿಯೇ ಆ ಮಕ್ಕಳನ್ನು ಮರೆತು, ಮತ್ತೆ ಸಂಸಾರ ಸುಖದಲ್ಲಿ ತಲ್ಲೀನರಾಗಿಹೋಗುವರು. ಮರೆಯುವ ಬಳಗಕ್ಕಿಂತ ಎಂದೆಂದೂ ಮರೆಯದ ಶ್ರೀಹರಿಯ ಕೈಹಿಡಿದರೆ ಆನಂದವೇ ಆನಂದ, ಮಹದಾನಂದ. ಶ್ರೀಹರಿ ನಾರಾಯಣ, ಶ್ರೀಹರಿ ನಾರಾಯಣ.

ಕಯಾಧು——ನೋಲಿಂದಮೇಲೆ ಶ್ರೀಹರಿ ನಾರಾಯಣ ಶ್ರೀಹರಿ ನಾರಾಯಣ ಎನ್ನಬಾರದು.

ಪ್ರಲ್ಹಾದ——ಏನೆನ್ನಬಾರದು?

ಕಯಾಧು——ಶ್ರೀಹರಿನಾರಾಯಣ ಶ್ರೀಹರಿನಾರಾಯಣ ಎನ್ನಬಾರದು.

ಪ್ರಲ್ಹಾದ——ಅಮ್ಮಾ, ನೀನೂ ಶ್ರೀಹರಿ ನಾರಾಯಣ ಶ್ರೀಹರಿ ನಾರಾಯಣ ಎನ್ನಬಾರದು; ಎಂದು ಎನ್ನುತ್ತಹೋಗು; ಎಂದರೆ ನಾನು ಆ ಶ್ರೀಹರಿ ನಾಮಾಮೃತ ಪಾನಮಾಡುತ್ತ, ಅದೇ ಆನಂದದ ಭರವಲ್ಲಿ ಮೈಮರೆತು ಕುಣಿಯುವೆನು. ನೀನೂ ಕುಣಿ.

**೧೬ ಪದ ರಾಗ ಭೀಮಪಲಾಸ ತಾಳ ಏಕಾ**

ದೇವಾ ಕುಣಿವೆ ಹರಿ| ದಿವ್ಯಚರಿತ ತವಚರಿತ||
ಭಾವದಲ್ಲಿ ನಲಿವ ಮೂರ್ತಿ| ಅವನಿಧರಾ ರಮಾಕಾಂತ|| ಪ ||
ಗುಣಶಾಲಿ ನಾರಾಯಣ ಸುಖದಾತಾ|
ಕುಣಿವೆ ಸದಾ ರಮಾನಾಥ||೧||

ಅಮ್ಮಾ, ಮೆಲ್ಲಗೇಕೆ ಕುಣಿಯುವೆ? ನನ್ನಹಾಗೆ ಶ್ರೀಹರೇ ಪ್ರಭೋ ನಾರಾಯಣ ದುರಿತನಿವಾರಣ ಪಾಹಿಮಾಂ ಎಂದು ಕುಣಿಕುಣಿದು ದಣಿದರೆ ಶ್ರೀಹರಿಯೇ ಓಡುತ್ತಬಂದು ನಮ್ಮೆದುರಿನಲ್ಲಿ ಕುಣಿಯುವನು. ನಮ್ಮ ಭವದ ಕಷ್ಟಗಳನ್ನು ಬಿಡಿಸುವನು. ಶ್ರೀಹರೇ ಪ್ರಭೋ ನಾರಾಯಣ ನಾರಾಯಣ ಪಾಹಿಮಾಂ ನಾರಾಯಣ ದುರಿತನಿವಾರಣ.

ಕಯಾಧು—ಹೀಗೆ ಗಟ್ಟಿಯಾಗಿ ಕೂಗಬೇಡ ಮಗು, ಅವರು ಈ ಕೂಗನ್ನು ಕೇಳಿದರೆ ಮತ್ತೆ ಪ್ರಮಾದವಾದೀತು.

ಪ್ರಲ್ಹಾದ—ಶ್ರೀ ಹರಿಯ ಗುಡುಗಿಗೆ ಎಲ್ಲರನ್ನು ನುಂಗುವ ಕಾಲನ ಕಾಲನು ಕೂಡ ದಿಕ್ಕಾಪಾಲಾಗಿ ಓಡಿಹೋಗುವಾಗ ಗರ್ವದ ದಾನವರಿಂದ ನನಗೇನಪಾಯವಾಗಬೇಕಾಗಿದೆ! ಹರಿಯಮುಂದೆ ನರಿಯ ಆಟವು ನಡೆಯು

ವದೇ, ನಮ್ಮ ಹರಿಯುಮುಂದೆ ನರಿಯು ಆಟವು.

ಕಯಾಧು—ಇಲ್ಲ ಮಗೂ, ಇಲ್ಲ.

ಪ್ರಲ್ಹಾದ—ಹೀಗಿದ್ದಮೇಲೆ ಭಯಪಡುವದೇಕೆ? ಅಮ್ಮಾ, ನಾನೂ ನೀನೂ ಶ್ರೀ ಹರಿ ನಾರಾಯಣ ಶ್ರೀ ಹರಿ ನಾರಾಯಣ ಎಂದು ಆನಂದದಿಂದ ಭಜನ ಮಾಡುತ್ತ ಇಲ್ಲಿಯೇ ಇರೋಣ.

ಕಯಾಧು—ಹರಿ ಹರಿ ಎಂದವರ ಹೊಟ್ಟೆಗಳನ್ನು ಹರಿಯುವೆನು ಎಂಬ ರಾಜಾಜ್ಞೆಯ ಭಯವೂ, ಅವರ ಶಸ್ತ್ರಾಸ್ತ್ರಗಳ ಭಯವೂ ಕೂಡ ನಿನಗಿಲ್ಲವೇ?

ಪ್ರಲ್ಹಾದ—ಶ್ರೀಹರಿಯನ್ನು ಪೂರ್ಣನಂಬಿ, ಸರ್ವವಿಶ್ವದ ಕಲ್ಯಾಣಕ್ಕಾಗಿ ದೇಹ ಸವಿಸುವ ಮಹಾತ್ಮರ ಹೊಟ್ಟೆಗಳನ್ನು ಹರಿಯುವ ಶಕ್ತಿಯು ಶಸ್ತ್ರಗಳಲ್ಲಿ ಇಲ್ಲ. ಅವರನ್ನು ಸುಡುವ ಶಕ್ತಿಯು ಉರಿಯಲ್ಲಿ ಇಲ್ಲ. ಮುಳುಗಿಸುವ ಶಕ್ತಿಯು ನೀರಿನಲ್ಲಿ ಇಲ್ಲ ಅಮ್ಮಾ, ನಾನು ಶಸ್ತ್ರಾಸ್ತ್ರಗಳಿಗೆ ಬೆದರುವದಿಲ್ಲ. ಇಂದ್ರನ ವಜ್ರಾಯುಧಕ್ಕೆ ಕೂಡ ಬೆದರುವದಿಲ್ಲ.

ಕಯಾಧು—ಮತ್ತೇತಕ್ಕೆ ಬೆದರುವೆ?

ಪ್ರಲ್ಹಾದ—ಸ್ವಾರ್ಥಕ್ಕಾಗಿ, ವಿಲಾಸಸುಖಕ್ಕಾಗಿ ದೀನ ಪ್ರಜರನ್ನು ಸುಲಿಯುವ, ನಿರಪರಾಧಿಗಳನ್ನು ದಂಡಿಸುವ ರಾಜರ ರಾಜ್ಯಾಧಿಕಾರಿಗಳ ದುಷ್ಟ ಪಾಪಕೃತ್ಯಗಳ ಭಯಂಕರ ನೋಟನೋಡಿದೊಡನೆ ಮಾತ್ರ ಗದಗದ ನಡಗುವೆನು. ಮಾತೇ, ರಾಜ್ಯವನಿತಾದಿ ಸಕಲ ವೈಭವಗಳನೆ ಕೊಟ್ಟು, ಆನಂದದಲ್ಲಿಟ್ಟ ಜಗತ್ತಿನ ಧೊರೆಯಾದ ಶ್ರೀಹರಿಯನ್ನು ಕಾಲುಕಸಕ್ಕೆ ಸರಿಮಾಡಿ, ವಿಲಾಸಾದಿ ಸುಖಗಳಲ್ಲಿ ಆ ಕರುಣಾಶಾಲಿಯಾದ ದೇವ ದೇವನನ್ನು ಮರೆಯುವ ಸುರರು ಅಸುರರು, ನರರು ಪಶುಗಳೇ ಸರಿ ಶ್ರೀ ಹರಿ ದ್ವೇಷವೇ ದುಃಖದ ತವರಮನೆಯು.

ಕಯಾಧು—ತಾಯಿಯ ಮಾತು ಕೇಳಬಾರದೆಂದು ಪಣಮಾಡಿದ ಹಾಗೆ ಕಾಣುವದು.

ಪ್ರಲ್ಹಾದ—ಛೇ, ಛೇ, ಹಾಗೆ ಭಾವಿಸಲಾಗದು. ತಾಯಿಯಸಮಾನ ಬಂಧುವಿಲ್ಲ ಶ್ರೀಹರಿಗೆ ಸಮಾನ ದೇವರಿಲ್ಲ.

ಕಯಾಧು—ಮಗೂ, ನಿನ್ನ ಮಾತು ಸತ್ಯವು.

ಪ್ರಲ್ಹಾದ—ಸತ್ಯಕ್ಕೆ ಸಾವೂ ಇಲ್ಲ; ಸೋಲೂ ಇಲ್ಲ. ಸತ್ಯಾಗ್ರಹಿಗೆ

ಸದಾ ಗೆಲವೇ ಗೆಲವು.

ಅಕ್ರಾಳ—(ಬಂದು ನಮಿಸಿ) ದೇವಿಯವರೇ, ಯುವರಾಜರನ್ನು ಕರೆದುಕೊಂಡುಬರಲಿಕ್ಕೆ ರಾಜಾಜ್ಞೆಯಾಗಿದೆ.

ಕಯಾಧು—ಈಗ ಅವರೆಲ್ಲಿದ್ದಾರೆ?

ಅಕ್ರಾಳ—ತಮ್ಮ ರಾಜಾಜ್ಞೆಗೆ ಅಪಮಾನ ಮಾಡಿದ ಉದ್ಧಟರಿಂಗೆ ಅವರವರ ಅಪರಾಧಗಳಿಗೆ ತಕ್ಕಶಾಸನ ಮಾಡಲಿಕ್ಕೆ ಹೋಗತಕ್ಕವರಿದ್ದಾರೆ.

ಕಯಾಧು—ಯಾವ ಕಡೆಗೆ?

ಅಕ್ರಾಳ—ಕುಟೀರಗಳ ಕಡೆಗೆ.

ಪ್ರಲ್ಹಾದ—ಅಕ್ರಾಳಾ, ತಂದೆಯವರು ಅತ್ತ ಹೋಗುವ ಮೊದಲೇ ನಾನು ಅಲ್ಲಿಗೆ ಹೋಗುವೆನು. ನೀನು ಈ ವಿಷಯವನ್ನು ಮಹಾರಾಜರಿಗೆ ತಿಳಿಸು ಹೋಗು.

ಅಕ್ರಾಳ—ತಮ್ಮ ಆಜ್ಞೆಯಂತೆ ನಡೆದುಕೊಳ್ಳುವೆನು. (ನಮಿಸಿ ಹೋಗುವನು)

ಪ್ರಲ್ಹಾದ—ಅಮ್ಮಾ, ಹೋಗಿಬರಲೇ?

ಕಯಾಧು—ಹೋಗಲು ಬೇಡವೆನ್ನುವದಿಲ್ಲ. ಆದರೆ,

ಪ್ರಲ್ಹಾದ—ಆದರೆ ಏಕೆ? ಮತ್ತೆ ಮಧ್ಯದಲ್ಲಿ?

ಕಯಾಧು—ಅವರ ಆಜ್ಞೆಯಂತೆ ನಡೆಯುವ ಹಾಗಿದ್ದರೆ ಹೋಗು.

ಪ್ರಲ್ಹಾದ—ಆ ವಿಷಯವಾಗಿ ಚಿಂತಿಸುವದೇ ಬೇಡ. ಅಮ್ಮಾ, ರಾಜಾಜ್ಞೆಯು ಯೋಗ್ಯವಿರಲಿ, ಅಯೋಗ್ಯವಿರಲಿ ಆ ಆಜ್ಞೆಗೆ ವಿರುದ್ಧ ಹೋರಾಡದೆ, ಆ ಆಜ್ಞೆಯುಮೇಲೆಗೆ ಕೊಟ್ಟ ಕಠೋರ ಶಾಸನಗಳನ್ನೆಲ್ಲ ಶಾಂತತೆಯಿಂದ ಅನುಭವಿಸುವದರಿಂದಲೇ ನನಗೆ ನನಗಿಂತ ಹೆಚ್ಚು ಸರ್ವ ಜಗತ್ತುಗಳಿಗೆ ಆನಂದವಾಗುವದು.

ಕಯಾಧು—ಕಠೋರಶಾಸನಗಳನ್ನು ಅನುಭವಿಸುವೆಯಾ?

ಪ್ರಲ್ಹಾದ—ಕಠೋರಶಾಸನಗಳನ್ನು ಶಾಂತತೆಯಿಂದ ಅನುಭವಿಸುವದೇ ಸತ್ಯಾಗ್ರಹಿಯ ಜೀವನಸಾರ. ಅಮ್ಮಾ, ನೀನೇಕೆ ಭಯಪಡುವೆ? ಸತ್ಯಕ್ಕೆ ಸಾವಿಲ್ಲ, ಸೋಲಿಲ್ಲ, ನೋವಿಲ್ಲ ಸತ್ಯಾಗ್ರಹಿಗೆ ಎಲ್ಲಿ ಹೋದಲ್ಲಿ ಜಯವೇ ಜಯವು. ಎಂದು ಈ ಮೊದಲೇ ನಿನಗೆ ಹೇಳಿರುವೆನಲ್ಲ. ನೀನು ಸ್ವಸ್ಥಳಾ

ಗಿರು. ನನ್ನನ್ನು ನಿನ್ನ ಗರ್ಭದಲ್ಲಿ ರಕ್ಷಿಸಿದ ದೇವದೇವನೇ ನನ್ನನ್ನು ಪರಿಪರಿಯಿಂದ ರಕ್ಷಿಸಲು ಟೊಂಕಕಟ್ಟಿಕೊಂಡು, ನಾನಿದ್ದಲ್ಲಿ ಇರುತ್ತಿರುವಾಗ ನೀನೇಕೆ ನನ್ನ ವಿಷಯವಾಗಿ ಚಿಂತೆ ಮಾಡಿ ಮಾಡಿ ಹಲಬುವೆ? ಶ್ರೀಹರಿಯೇ ನನ್ನನ್ನು ಕಾಯುವನು. (ನಮಿಸಿ ಹೋಗುವನು.)

ಕಯಾಧು— [ಸ್ವಗತ] ಆಯಿತು; ಸರ್ವಸ್ವೀ ಘಾತವಾಯಿತು. ಈಸಲ ಹೋದ ಮಗುವು ಜೀವಿಸಿ ತಿರುಗಿ ಬರುವ ಆಶೆಯೇ ಇಲ್ಲ. ಆಜ್ಞಾಭಂಗವಾದೊಡನೆಯೇ ಅವನು ಶೂಲದ ಬಾಯಿಗೆ ತುತ್ತಾಗಿ ಸಾಯುವದೇ ಖಂಡಿತ ಖಂಡಿತ ಮಗನು ಗುಣಿಯಿದ್ದಾನೆ, ರೂಪವಂತನಿದ್ದಾನೆ. ಅವನ ಪ್ರತಿಯೊಂದು ಮಾತು ಹಸಿ ಗೋಡೆಯಲ್ಲಿ ಹರಳಿಟ್ಟಹಾಗೆ, ಹುಸಿಯಾಗುವ ಹಾಗೆಯೇ ಇಲ್ಲ. ಆ ಮಾತುಗಳು ಮುತ್ತಿನಂತಹವು. ಪ್ರತಿಯೊಂದು ಅಕ್ಷರದಲ್ಲಿ ಸುಧೆಯ ಸಾರವು ತುಂಬಿತುಳುಕುತ್ತದೆ. ನಾನಂತೂ ಅಬಲೆಯು.

**ಪದ ರಾಗ ಕಾಪಿ ತ್ರಿತಾಳ**

ಸಿರಿವರಾ ನೀನಿರೆ ದೂರಾ|
ಪರಿಪಾಲಿಪ ರಾರಯ್ಯಾ ದಯಾಪೂರಾ || ಪ ||
ಬಂದಿದೆ ಮರಣವು ನಿನ್ನಯ ತನಯಗೆ|
ತಂದೆಪ್ರಾರ್ಥಿಸುವೆ ಬಾ ತಾಪಹರಾ|
ಕಂದನ ಕಾಯಬಾ ಬೇಗಬಾ ಉದಾರಾ|| ೧ ||

---

# ೨ನೆಯ ಪ್ರವೇಶ

ಸ್ಥಳ.... ಕುಟೀರಗಳಕಡೆಗೆ ಹೋಗುವ ಹಾದಿಯು

**ಪಾತ್ರಗಳು — ನಾರದ ಪ್ರಲ್ಹಾದ**

ಬರುವರೀತಿಯು.—[ನಾರದರು ಶ್ರೀಹರಿಯ ಗುಣಗಾನಮಾಡುತ್ತ ಬರುವರು]

**೧೭ ಪದ ರಾಗ ಹಮೀರ ಝಂಪತಾಳ**

ರಮಾಲೋಲ ನೀರಕ್ಷಿತಾ ಸೌಖ್ಯಧಾಮಾ |
ರಮಾವಂದಿತಾ ಪಾಡುವೆ ನಿನ್ನನಾಮಾ || ಪ ||
ಆದೇನಾಮಘೋಷಾ ಭವ ಪಾಶನಾಶಾ |
ಪದವೀಯುವಾ ದೇವತಾನಾಮ ತೋಷಾ |
ಗದಾಧಾರಿ ಪೀತಾಂಬರಧಾರಿ ಶ್ರೀಶಾ || ೧ ||

ಪ್ರಲ್ಹಾದ—[ಶ್ರೀಹರಿ ನಾರಾಯಣ ಶ್ರೀಹರಿ ನಾರಾಯಣ ಎನ್ನುತ್ತ ಪ್ರವೇಶಮಾಡಿ, ನಾರದರನ್ನು ನೋಡಿ] ಗುರುವರಾ, ಈ ಹೀನ ದೀನ ಶಿಷ್ಯನ ಮೇಲೆ ತಮ್ಮ ಪಾದಾನುಗ್ರಹವು ಅಖಂಡವಾಗಿರಲಿ.[ನಮಿಸುವನು]

ನಾರದ—ಶ್ರೀಹರಿಯು ನಿನಗೆ ಸದೈವ ಕಲ್ಯಾಣ ಮಾಡಲಿ[ಪ್ರಲ್ಹಾದನು ನಮಿಸಿ ಎದ್ದಮೇಲೆ] ಮಗೂ, ಪ್ರಲ್ಹಾದಾ, ನಾನು ನಿನಗೆ ಹೇಳಿಕೊಟ್ಟ "ಓನ್ನಮೋನಾರಾಯಣಾಯ" ಎಂಬ ಅಹಿಂಸಾಮಂತ್ರದ ಪಠಣವನ್ನು ಮರೆಯದೆ ಪ್ರತಿನಿತ್ಯ ಭಕ್ತಿಪೂರ್ವಕ ಮಾಡುತ್ತಿರುವೆಯೋ ಇಲ್ಲವೋ?

ಪ್ರಲ್ಹಾದ—ತಮ್ಮ ಪಾದಾನುಗ್ರಹ ಬಲದಿಂದ, ಆ ಮಂತ್ರವನ್ನು ಭಕ್ತಿ ಪೂರ್ವಕ ಪ್ರತಿನಿತ್ಯ ಪಠಿಸುತ್ತಿರುವೆನು.

ನಾರದ—ಆ ಮಂತ್ರವನ್ನು ಹಾಗೆಯೇ ಪಠಿಸುತ್ತಲಿರು. ದುಷ್ಟರ ಹಿಂಸಾಮಯ ವಿಶ್ವಶಕ್ತಿಯ ಸತ್ವವನ್ನು ಸಂಪೂರ್ಣ ನಾಶಮಾಡುವ ಪ್ರಬಲ ಅಹಿಂಸಾಮಂತ್ರವೇ ಓನ್ನಮೋನಾರಾಯಣಾಯ ಎಂಬ ಅಷ್ಟಾಕ್ಷರಮಂತ್ರವು ಆ ಅಹಿಂಸಾಮಂತ್ರ ಪಠಿಸುವ ಭಕ್ತನಿಗೆ ಪ್ರಾಣಹರಣ ಮಾಡುವ ಮೃತ್ಯು ದೇವತೆಯು ಕೂಡ ಹೆದರಿ ಓಡಿ ಹೋಗುವಳು.

ಪ್ರಲ್ಹಾದ—ಅದರಲ್ಲಿ ಸಂಶಯವೇ ಇಲ್ಲ. ಭಗವನ್, ತಾವು ಹೇಳಿ ಕೊಟ್ಟ "ಓನ್ನಮೋ ನಾರಾಯಣಾಯ" ಎಂಬ ಅಷ್ಟಾಕ್ಷರ ಅಹಿಂಸಾ ಮಂತ್ರವೇ ನನ್ನನ್ನು ಕಾಯುವ ದೇವರ ದಿವ್ಯ ಶಕ್ತಿ, ರಾಜಪದ, ಸುರಪದ, ಬ್ರಮ್ಹಪದ ಬಿಟ್ಟೇನು, ಕೊನೆಗೆ ಈ ನನ್ನ ಪ್ರಾಣಕೂಡ ಬಿಟ್ಟೇನು, ತಾವು ಹೇಳಿಕೊಟ್ಟ ಮಹಾ ಮಂತ್ರವನ್ನು ಮರೆಯದೆ ಒಂದೇಸವನೆ ಪಠಿಸುತ್ತಿರುವೆನು. ಎಂದು ತಮ್ಮ ಪೂಜ್ಯಪಾದಗಳನ್ನು ಮುಟ್ಟಿ ಪ್ರಮಾಣ ಮಾಡಿ ಹೇಳುವೆನು.

ನಾರದ—ಸಂತೋಷ, ಬಹು ಸಂತೋಷ. ಮಗೂ, ಸಕಲ ಜೀವಿ

ಗಳಲ್ಲಿ ನನ್ನ ನಿನ್ನ ಆರಾಧ್ಯ ದೇವನಾದ ಶ್ರೀ ಮನ್ನಾರಾಯಣನು ಮೂರ್ತಿಮಂತ ವಾಸವಾಗಿರುತ್ತಾನೆಂದು ತಿಳಿದು ಎಲ್ಲ ಪ್ರಾಣಿಗಳ ಮೇಲೆ ದಯತೋರುತ್ತ ಅಲ್ಲಿ ವಾಸಿಸುತ್ತಿರುವ ದೇವದೇವನನ್ನು ಆರಾಧಿಸುತ್ತಲಿರು. ಎಂದರೆ ನಿನ್ನ ಆತ್ಮಶಕ್ತಿಯ ತೇಜವು ತ್ರಿಲೋಕಗಳಲ್ಲಿ ಬೆಳಗುವದು. ಪ್ರಲ್ಹಾದಾ, ನಾನು ನಿನಗೆ ಹೇಳಿಕೊಟ್ಟ "ಓಂ ನಮೋ ನಾರಾಯಣಾಯ" ಎಂಬ ಅಹಿಂಸಾಮಂತ್ರದಲ್ಲಿ ಎಂಥ ಅದ್ಭುತ ಶಕ್ತಿಯಿದೆ ಎಂಬುದನ್ನು ಬಲ್ಲೆಯಾ?

ಪ್ರಲ್ಹಾದ—ಆ ವಿಷಯದ ಪ್ರಭಾವವನ್ನು ತಾವೇ ವರ್ಣಿಸಿ ಹೇಳಬೇಕು. ಭಗವನ್.

ನಾರದ—ಅಗಾಧ ತಪಸ್ಸು ಮಾಡಿ ಪಡೆದ ವರ ಬಲದಿಂದಾಗಲಿ, ಪೂರ್ವ ಜನ್ಮದ ಪುಣ್ಯಬಲದಿಂದಾಗಲಿ ವಿಶ್ವದ ಸಮ್ರಾಟರಾಗಿ ಸಂಪತ್ತಿನ ಮದದಲ್ಲಿ ರಾಜನೀತಿ–ಧರ್ಮಗಳನ್ನು ಲಕ್ಷಿಗೆ ತಾರದೆ, ಸಜ್ಜನರನ್ನು ಕಾಲಲ್ಲಿ ತುಳಿಯುತ್ತ, ದುಷ್ಟರನ್ನು ವೈಭವ ಶಿಖರದ ಮೇಲೆ ಕುಳ್ಳಿರಿಸಿ, ಹಿಂಸೆಯಲ್ಲಿಯೇ ಆನಂದಪಡುವ ಅಜೇಯ ವೀರಾಧಿವೀರ ಎಂದರೆ ಯಾರಿಂದಲೂ ನಾಶವಾಗದ ಮಹಾಪ್ರಬಲ ಶಕ್ತಿಯನ್ನು ನಾಶಮಾಡಿ, ಒಂದರಗಳಿಗೆಯಲ್ಲಿ ಎಲ್ಲಿನೋಡಿದಲ್ಲಿ ಆನಂದಮಯ ಶಾಂತತಾಮಯ ಸಾಮ್ರಾಜ್ಯ ಸ್ಥಾಪಿಸುವ ಅವರ್ಣನಿಯ ಅಮೋಘ ಶಕ್ತಿಯು ನನ್ನ ಅಹಿಂಸಾ ಮಂತ್ರದ ಪಠಣದಲ್ಲಿದೆ. ಮತ್ತೊಂದು ಮಹತ್ತರವಾದ ವಿಷಯವಿದೆ.

ಪ್ರಲ್ಹಾದ—ಅದಾವದು ಭಗವನ್!

ನಾರದ—ಅಹಿಂಸಾವ್ರತ ಧಾರಿಯಾದ ಮಹಾತ್ಮರು ಅವರ ಪಟ್ಟ ಶಿಷ್ಯರು ಸ್ವಾರ್ಥದ ಕಡೆಗೆ ಸ್ವಲ್ಪಸಹ ಲಕ್ಷ್ಯಗೊಡದೆ, ವಿಶ್ವದ ಕಲ್ಯಾಣಕ್ಕಾಗಿ ತಮ್ಮ ಸರ್ವಸಂಪತ್ತಿನ ತಮ್ಮ ಮಾನದ ತಮ್ಮ ಪ್ರಾಣದ ಬಲಿ ಕೂಡ ಕೊಡಬೇಕು. ನಡೆನುಡಿಗಳಿಂದಷ್ಟೇ ಅಲ್ಲ. ಮನಸ್ಸಿನಲ್ಲಿಸಹ ಎರಡನೆಯವರನ್ನು ಹೀಯಾಳಿಸಿ ನೋಯಿಸುವ ಹಿಂಸಾಮಯ ಪಾಪಮಯ ಆಲೋಚನೆಯುಕೂಡ ಬಾರದಹಾಗೆ ಸಾವಧರಾಗಿರಬೇಕು. ಈಪ್ರಕಾರ ಪಣಮಾಡಿ ಅಹಿಂಸಾವ್ರತ ಹಿಡಿದ ಮಹಾತ್ಮರ ರಕ್ಷಣೆಗಾಗಿಯೇ ಶ್ರೀಹರಿಯ ಸುದರ್ಶನ ಚಕ್ರವು ಅವರ ಸುತ್ತುಮುತ್ತು ಸದಾ ಸರ್ವದಾ ಗರಗರ ತಿರುಗುತ್ತಿರುವದು.

ಪ್ರಲ್ಹಾದ—ಆಗಲಿ. ತಾವು ಆಜ್ಞಾಪಿಸಿದಂತೆ ತಪ್ಪದೇ ನಡೆಯುವೆನು.

ನಾರದ——ಸಂತೋಷ! ನಾನು ಹೇಳಿದಹಾಗೆ ವರ್ತಿಸಿದರೇನೇ ಈಗಿನ ಆಜೇಯ ಅಜರಾಮರ ವೀರಾಧಿ ವೀರನಾದ ದುಷ್ಟ ಸಾಮ್ರಾಟನ ಹಿಂಸಾ ಮಯ ರಾಜ್ಯವು ನಾಶವಾಗಿ, ಎಲ್ಲಿ ನೋಡಿದಲ್ಲಿ ಶಾಂತತಾಮಯ ಸಾಮ್ರಾಜ್ಯದ ಸ್ಥಾಪನೆಯಾಗುವದು. ಮಗೂ, ಪ್ರಸಂಗವರಿತು ಮತ್ತೊಮ್ಮೆ ನಿನ್ನನ್ನು ಕಾಣುವೆನು. ಹೋಗಿಬರಲೊ?

ಪ್ರಲ್ಹಾದ——ತಾವು ಇಲ್ಲಿಗೆ ಬಂದ ಮಹತ್ವದ ಕಾರಣವೇನು?

ನಾರದ——ನೀನು ಸುಖರೂಪವಾಗಿ ಇರುವೆಯೋ ಇಲ್ಲವೋ? ನಾನು ಹೇಳಿಕೊಟ್ಟ ಅಹಿಂಸಾ ಮಂತ್ರವನ್ನು ತಪ್ಪದೇ ಚನ್ನಾಗಿ ಪಠಿಸುತ್ತಿರುವೆಯೋ ಇಲ್ಲವೋ ಎಂಬುದನ್ನು ತಿಳಿದುಕೊಂಡು ಹೋಗಲು ಬಂದಿದ್ದೇನೆ.

ಪ್ರಲ್ಹಾದ—ತಮ್ಮ ಪವಿತ್ರ ಪಾದಾನುಗ್ರಹ ಬಲದಿಂದ ನಾನು ಸುಖ ರೂಪವಾಗಿಯೇ ಇರುವೆನು. ಮಂತ್ರದ ವಿಷಯವನ್ನಂತೂ ಈಮೊದಲೇ ಹೇಳಿರುವೆನು.

ನಾರದ—ಮಗೂ, ನಿನ್ನ ಮಂತ್ರದ ಪ್ರಭಾವವನ್ನು ವರ್ಣಿಸುವಾಗ ಮತ್ತೊಂದು ಮುಖ್ಯ ಸಂಗತಿಯ ವಿಷಯವಾಗಿ ನಿನ್ನನ್ನು ಕೇಳುವದನ್ನೇ ಮರೆತುಬಿಟ್ಟಿರುವೆನು.

ಪ್ರಲ್ಹಾದ——ಅದಾವವಿಷಯವು? ಹೇಳಿ ಗುರುವರಾ.

ನಾರದ—ನಿನ್ನ ಗುರುಗಳಾದ ಶಂಡಾಮರ್ಕರು ನಿನಗಾವ ವಿಷಯ ವನ್ನು ಹೇಳಿಕೊಟ್ಟಿರುವರು?

ಪ್ರಲ್ಹಾದ— ತಮ್ಮಂಥ ಮಹಾನುಭಾವರಮುಂದೆ ಆ ಕ್ಷುಲ್ಲಕ ಹಾಳು ವಿಷಯದ ವಿಚಾರವಾಗಿ ಮಾತನಾಡಲು ನನಗೆ ನಾಚಿಕೆಯು ಬರುತ್ತದೆ. ಸುಡುಗಾಡು ವಿಷಯ, ಹುಡುಗಾಡಿಕೆಯ ವಿಷಯ, ಗೊಡ್ಡುವಿಷಯ.

ನಾರದ—ಸೀ ತಿಂದು ತಿಂದು ಕೆಟ್ಟನಾಲಿಗೆಗೆ ಗೊಡ್ಡಿನಿಂದ ಮತ್ತಿಷ್ಟು ಹೆಚ್ಚು ರುಚಿಯು ಬರುವದಿಲ್ಲವೇ?

ಪ್ರಲ್ಹಾದ—ಆ ವಿಷಯವನ್ನು ಸವಿದವರ ಸರ್ವಾಂಗವು ವಿಷಮಯ ವಾಗುವದೆಂದು ಹೆದರಬೇಕಾಗಿದೆ.

ನಾರದ—ಹೇಳಿಯಾದರೂ ಹೇಳು. ನಿನ್ನ ಗುರುಗಳ ಜ್ಞಾನದ ಬೆಳ ಕೆಷ್ಟಿದೆ; ಎಂಬುದು ಹೊರಬೀಳಲಿ

ಪ್ರಲ್ಹಾದ—ಶ್ರೀಹರಿಯ ವಿಷಯವಿಲ್ಲದ ಮಹಿಮೆಯನ್ನು ಹೇಳಲಾರೆ. ಗುರುವರಾ, ಆ ವಿಷಮಯ ವಿಷಯವನ್ನು ಹೇಳುವವರೂ, ಕೇಳುವವರೂ ನರಕಕ್ಕೆ ಇಳಿಯುವರು ನರಕಕ್ಕೆ.

ನಾರದ—ನರಕಸ್ಥರನ್ನು ಕೂಡ ಉದ್ಧಾರಮಾಡುವ ಮಹಾಮಂತ್ರವು ನಿನ್ನ ಸ್ವಾಧೀನದಲ್ಲಿರುವಾಗ ನೀನೇಕೆ ಭಯಪಡುವೆ? ಅಲ್ಲಿ ನಿನಗೆ ಹೇಳಿ ಕೊಟ್ಟ ವಿಷಯವಾದರೂ ಯಾವದಿದೆ ಹೇಳು?

ಪ್ರಲ್ಹಾದ—ಗುರುವರಾ, ಶುಷ್ಕವಿಷಯ; ಸುಣ್ಣವು ಬೆಳ್ಳಗಿರುವದು; ಮಂಗಗಳಿಗೆ ಬಾಲಗಳಿರುವವು; ಎತ್ತುಗಳಿಗೆ ಕೋಡುಗಳಿರುವವು; ಇಲಿಯು ಚಿವ್ ಚಿವ್ ಎನ್ನುತ್ತದೆ; ಬೆಕ್ಕು ವ್ಯಾವ್ ವ್ಯಾವ್ ಎನ್ನುತ್ತದೆ. ಎಂದು ಹೇಳುವ ಪಾಠಗಳೇ ಅಲ್ಲಿಯ ಮುಖ್ಯ ಪಾಠಗಳು.

ನಾರದ—ದೇವರ ಪಾಠ.

ಪ್ರಲ್ಹಾದ—ದೇವರಿಲ್ಲ ದಿಂಡರಿಲ್ಲ. ಅಲ್ಲಿ ಎಲ್ಲಿಯ ದೇವರ ಪಾಠ! ತಾವೇ ದೇವರು; ತಮ್ಮ ಧ್ಯಾನ, ತಮ್ಮ ಪ್ರತಿಮೆಗಳ ಪೂಜೆ, ತಮ್ಮ ಗುಣ ಗಾನ ಎಲ್ಲಿನೋಡಿದಲ್ಲಿ ಆಗಬೇಕೆಂದು ಪ್ರಖರ ರಾಜಾಜ್ಞೆಗಳನ್ನು ಹೊರಡಿಸಿ, ಆ ಪ್ರಕಾರ ತಮ್ಮ ಪೂಜೆಯನ್ನು ತಾವೇ ಮಾಡಿಸಿಕೊಳ್ಳುವ ದೈತ್ಯರಾಜರ ಶಾಲೆಗಳಲ್ಲಿ ದೇವರ ದಾಸರಾಗುವ ವಿಷಯವಿಲ್ಲ.

ನಾರದ—ವೀರರ ಪಾಠಗಳನ್ನೇನಾದರೂ ಹೇಳಿಕೊಡುವರೇ?

ಪ್ರಲ್ಹಾದ—ಅಲ್ಲಿ ವೀರರ ಹೆಸರುಗಳು ಕೂಡ ಕಿವಿಗೆ ಕೇಳಬರುವಹಾ ಗಿಲ್ಲ ಆವಬಗೆಯ ದಾಸ್ಯದಿಂದ ತಮಗೆ, ತಮ್ಮ ವರ್ಣದವರಿಗೆ ಹಿತವಾದೀತು ತಮ್ಮ ತಮ್ಮ ರಾಜಕಾರ್ಯಗಳನ್ನು ಹೇಗೆ ಹೇಗೆ ಸಾಧಿಸಿಕೊಂಡರೆ ತಮಗೆಲ್ಲ ರಿಗೆ ಸರ್ವವಿಧದಿಂದಲೂ ಕಲ್ಯಾಣವಾದೀತು. ಇವೇ ಮೊದಲಾದ ಸ್ವಾರ್ಥ ಪರ ಉದ್ದೇಶಗಳನ್ನು ಸಾಧಿಸಿಕೊಳ್ಳುವ ಉದ್ದಿಶ್ಯವಾಗಿಯೇ ಸ್ಥಾಪಿಸಿದ ರಾಜರ ರಾಜಶಾಲೆಗಳವು. ಆ ಶಾಲೆಗಳಲ್ಲಿ ಕಲಿತವರು ವೀರರಾಗುವದಿಲ್ಲ; ನಾರಿಯರ ಹಾಗೆ ಶೃಂಗಾರರಾಗಿ, ಅವರಹಾಗೆ ಸೋಗುಮಾಡುತ್ತ ರಾಜಬೀದಿಯಲ್ಲಿ ಅಲೆ ದಾಡುವರು.

ನಾರದ—ಹೀಗೋ! ಗಂಡಸರ ಸ್ಥಿತಿಯು ಈಪದಕ್ಕೆ ಬಂದಿರುವದೇ!

ಪ್ರಲ್ಹಾದ—ಹೌದು ಗುರುವರಾ! ಹೇಳಲಿಕ್ಕೆ ಬಹು ನಾಚಿಕೆಯು

ಬರುತ್ತದೆ. ಆ ರಾಜಶಾಲೆಗಳಲ್ಲಿ ಕಲಿತ ಗಂಡಸರು ಸ್ವಂತಪ್ರಾಣವನ್ನು ಮಾಡಿಕೊಂಡ ಹೆಂಡಂದಿರ ಮಾನ-ಪ್ರಾಣಗಳನ್ನು ಕೂಡ ಕಾಯಲಾರದಷ್ಟು ಹೇಡಿಗಳೂ, ಅವರ ಹೊಟ್ಟೆಗೆ ಹಾಕಲಾರದಷ್ಟು ನಿರ್ಬಲರೂ ಆಗಿರುವರು. ಸಾರಾಂಶ ಅವರು ಪ್ರಬಲರಲ್ಲ, ಅಬಲೆಯರೇ ಸರಿ.

ನಾರದ—ಪುರುಷರ ಶಿಕ್ಷಣದ ವಿಷಯವನ್ನು ಕೇಳಿದ್ದಾಯಿತು. ಸ್ತ್ರೀ ಶಿಕ್ಷಣದ ವಿಷಯವೇನು?

ಪ್ರಲ್ಹಾದ—ಆ ಶಿಕ್ಷಣದ ವಿಷಯವು ಸಹ ವಿಲಕ್ಷಣವೇ. ಅಲ್ಲಿ ಕಲಿತ ಸ್ತ್ರೀಯರು ತಮ್ಮ ಗಂಡಂದಿರ ಅಭಿಮಾನ, ತಮ್ಮ ಧರ್ಮದ ಅಭಿಮಾನ, ತಮ್ಮ ದೇಶದ ಅಭಿಮಾನ ಬಿಟ್ಟುಕೊಟ್ಟು, ತಮ್ಮ ಮನಸ್ಸಿಗೆ ಬಂದಹಾಗೆ ನಡೆಯುವರು. ಗುರುಗಳೆ, ಇಲ್ಲಿಯವರೆಗೆ ಸ್ತ್ರೀಯರ ಕಂಠದಲ್ಲಿ ಶೋಭಿಸುತ್ತಿದ್ದ ಮಂಗಲಸೂತ್ರವು ಕೊರಳಿಗೆ ಉರುಲು ಬೀಳಬಾರದೆಂದು ಎದೆಗೆಬಂದು ಕುಳಿತಿದೆ. ದೇವತಾಲಾಂಛನವಾದ ಕುಂಕುಮತಿಲಕವು ಸೊರಗಿ ಸೊರಗಿ ಸಾಸವಿಕಾಳಿನಷ್ಟು ಸಣ್ಣದಾಗಿ ಹುಬ್ಬುವಿನ ನಡುವೆ ಬಂದುಕುಳಿತು, ದೈತ್ಯಲಾಂಛನವಾಗಿದೆ. ಸುಂದರಿಯರು ಸರ್ವಾಂಗ ಕಾಣುವಂಥ ತೆಳುವಾದ ಸೀರೆಗಳನ್ನುಟ್ಟು, ಒಯ್ಯಾರಮಾಡುತ್ತ ಬೀದಿಗುಂಟ ಅತ್ತಿಂದ ಇತ್ತ ಇತ್ತಿಂದ ಅತ್ತ ಅಲೆದಾಡುತ್ತಾರೆ. ಹೆಂಗಸರು ನಾಚುವಬದಲು ಗಂಡಸರೇ ಅವರ ವರ್ತನಕ್ಕೆ ನಾಚಿ, ತಲೆಬೊಗ್ಗಿಸಿಕೊಂಡು ಹೋಗುವ ವಿಪರೀತ ಕಾಲವು ಬಂದಿದೆ ನೋಡಿ ಒಟ್ಟಿನಮೇಲೆ ಗರತಿಯರಾರೋ ನರ್ತಕಿಯರಾರೋ ಎಂಬುದನ್ನು ತಿಳಿದುಕೊಳ್ಳುವದು ಕೂಡ ಬಹುಕಷ್ಟನೋಡಿ, ಬಹುಕಷ್ಟ.

ನಾರದ—ವಿದ್ಯಾದಾನಮಾಡುವ ರಾಜಶಾಲೆಗಳಲ್ಲವು ಜ್ಞಾನದ ಕೊಲೆಯನ್ನೇ ಮಾಡುವ ರಾಜಕಟುಗರ ರಾಜಶಾಲೆಗಳವು. ನೀತಿಗೂ ಧರ್ಮಕ್ಕೂ ನಾಡಿಗೂ ತುಸುಸಹ ಉಪಯೋಗವಾಗದ ಹಾಳುವಿದ್ಯೆಕಲಿಸಿ ಉಚ್ಚ ಸಂಸ್ಕೃತಿಯನ್ನು ಮಣ್ಣುಗೂಡಿಸಿಬಿಡುವ ರಾಜಕಟುಗರ ಶಾಲೆಗಳಲ್ಲಿ ಹಾಳುವಿದ್ಯೆ ಕಲಿತು ಗುಣಹೀನರಾಗುತ್ತ ನಡೆದಿರುವ ಬಾಲ ಬಾಲಿಕೆಯರನ್ನು ತರುಣ ತರುಣಿಯರನ್ನು ನೋಡಿ, ನಗಬೇಕೋ ಅಳಬೇಕೋ ಒಂದೂ ತಿಳಿಯದ ಹಾಗೆ ಆಗಿದೆ. ಕಾಲಾಯ ತಸ್ಮೈನಮಃ. ಮದವೇರಿದ ಆನೆಗಳನ್ನು ಹಿಡಿದು ನಿಲ್ಲಿಸುವಷ್ಟು ಬಲಿಷ್ಠರಾದರೇನು? ೬೪ ವಿದ್ಯೆಗಳನ್ನು ಕಲಿತು ಪ್ರವೀಣ

ರಾಗಿ ಪಂಡಿತರೆನಿಸಿದರೇನು? ತ್ರಿಭುವನದ ದೊರೆಯಾಗಿ ಆನೆಯಮೇಲೆ ಅಂಬಾರಿಯಲ್ಲಿ ಕುಳಿತು ಮೆರೆದರೇನು? ವೈಭವಶಾಲಿಗಳಾಗಿ ಉಂಡುತಿಂದು ಸೊಕ್ಕಿದ ಆನೆಗಳಹಾಗೆ ಮದೋನ್ಮತ್ತರಾಗಿ ಕಾಮ ಮದದಲ್ಲಿ ಕಾಮಿನಿಯರೊಡನೆ ಕಾಮಕೇಳಿಯಲ್ಲಿ ನಲಿದಾಡಿದರೇನು? ಎಲ್ಲವೂ ಹೇಸಿ ವಿಷಯಗಳೇ ವಿಷಯಸುಖದ ಸವಿ ಬಿಡಿಸುವ, ವಿಷಕ್ಕೆ ಅಮೃತದ ಸವಿತರುವ, ನರಕಸ್ಥರನ್ನು ಕೂಡ ಉದ್ಧಾರಮಾಡುವ ಶ್ರೀಹರಿ ಗುಣಗಾನಮಾಡು. ಕೇಳಿ ಆನಂದಬಡುವೆನು.

ಪ್ರಲ್ಹಾದ--ಆಗಬಹುದು ಗುರುಗಳೇ.

**೧೮ ಪದ ರಾಗ ಕಾಪಿ ತ್ರಿತಾಳ**

ಘನ್ನ ಮಹಿಮ ಭೂನಾಥ |
ಗುಣ ಖಣಿ ಹರಿ ಮೋಕ್ಷದಾತ ||
ದಾನವಾರಿ ಭಾಗ್ಯಾದಿ ದಾತ |
ಎನಗೆ ಪೂಜಿತಾ || ಪಲ್ಲ ||
ಧರಾಧರ ಹರಿಯೆ ವಿಧಾತಾ |
ಸ್ಮರಪಿತ ಜಗದೇಕ ನಾಥಾ |
ಚಾರು ಚರಿತ ಸುಜನ ತ್ರಾತಾ ||೧||

ನಾರದ---ಶ್ರೀಹರಿ ಗುಣಗಾನಕೇಳಿ, ಬಹು ಆನಂದವಾಯಿತು. ಪ್ರಲ್ಹಾದಾ, ನನ್ನ ಅಹಿಂಸಾಮಂತ್ರದ ರಹಸ್ಯವನ್ನು ನೀನಾವಬಗೆಯಿಂದ ತಿಳಿದುಕೊಂಡಿರುವೆ ಸ್ವಲ್ಪದರಲ್ಲಿ ಹೇಳು.

ಪ್ರಲ್ಹಾದ....ತಿರಿದುಣ್ಣಲು ಹಚ್ಚಿದವನು ಧೊರೆಯಾಗಲಿ, ಕೊಡುವ ಸಾಲ ಮುಳುಗಿಸಿದವನ ಮನೆಯಲ್ಲಿ ಬಂಗಾರ ತೊಟ್ಲ ಕಟ್ಟಲಿ. ಕುಲಸವರಿದವನ ಕುಲವು ಬೆಳೆಯಲಿ, ಕಡಿಯಲು ಬಂದವನ ಉತ್ಕರ್ಷ ನೋಡಿ, ಮನವು ಆನಂದಬಡಲಿ, ಕಡಿದವನು ಮೋಕ್ಷಕ್ಕೆ ಹೋಗಲಿ ಎಂಬ ಸದ್ಭಾವನೆಗಳಿಂದ ಪರೋಪಕಾರಕ್ಕಾಗಿ ವಿಶ್ವದ ಕಲ್ಯಾಣಕ್ಕಾಗಿ, ಸರ್ವಸ್ವೀ ದಾನ ಮಾನ ದಾನ ಪ್ರಾಣದಾನ ಮಾಬೇಕೆಂಬುದೇ ಆ ಮಂಗಲಮಯ “ಓನ್ನಮೋ ನಾರಾಯಣಾಯ ಎಂಬ ಅಷ್ಟಾಕ್ಷರ ಅಹಿಂಸಾಮಂತ್ರದಲ್ಲಿಯ ಮುಖ್ಯಗುಟ್ಟು.

ನಾರದ....ಭಲೆ ಭಲೆ, ಬಹು ಮುದ್ದಾಗಿ ಹೇಳಿದೆ. ನೀನು ಸಾಮ್ರಾಜ್ಯ ಚಕ್ರವರ್ತಿಯಾಗು. ಭಕ್ತಾಗ್ರೇಸರ ಚಕ್ರವರ್ತಿಯಾಗು. ನಾನು ಗುರು ಆದರೆ ನೀನು ಗುರುರಾಯನಾಗಿ ನಿನ್ನ ಶಿಷ್ಯರಿಗೆ ಬೇಡಿದ್ದನ್ನು ಕೊಟ್ಟು ಜಗದ್ವಂದ್ಯ ಮಹಾತ್ಮನಾಗು. ನಿನ್ನಂಥ ಮಹಾತ್ಮನು ಹಿಂದೆ ಆಗಿಲ್ಲ ಮುಂದೆ ಕೂಡ ಆಗುವದಿಲ್ಲ.

ಪ್ರಲ್ಹಾದ--ಜಯಶೀಲನಾದೆನು. ನನ್ನ ಕಾರ್ಯಗಳೆಲ್ಲವೂ ಸಿದ್ಧಿಗೆ ಹೋದವು.

ನಾರದ—ಹೀಗೇತರಮೇಲಿಂದ ಹೇಳುವೆ?

ಪ್ರಲ್ಹಾದ—ಗುರುವು ಒಲಿದಮೇಲೆ ಹರಿಯು ಒಲಿದಂತೆಯೇ. ಗುರು ಮುನಿದರೆ ಹರಿಹರ ಬ್ರಹ್ಮರು ಕಾಯರು. ಹರಿಹರ ಬ್ರಹ್ಮರು ಮುನಿದರೆ ಗುರು ಕಾಯ್ವನು.

ನಾರದ—ಈ ವಿಷಯವಿರಲಿ. ಈಗ ಎತ್ತ ಕಡೆಗೆ ಹೋಗಲು ಸಿದ್ಧನಾಗಿರುವೆ?

ಪ್ರಲ್ಹಾದ—ಕುಟೀರಗಳ ಕಡೆಗೆ ದೈತ್ಯರಾಜರೂ ಅಲ್ಲಿಗೆ ಬರತಕ್ಕವರಿದ್ದಾರೆ; ತಾವೂ ಅಲ್ಲಿಗೆ ಬರುವಿರಾ?

ನಾರದ—ಈಗ ಆ ಹಿಂಸಾಮಯ ದೈತ್ಯನ ಸುಟ್ಟಮುಖಕೂಡ ನೋಡುವದು ಬೇಡ. ಪಾಪಕರ್ಮ ಮಾಡಿಮಾಡಿ, ಆ ಅಧಮನ ಪುಣ್ಯವೆಲ್ಲವೂ ಸವಿದುಹೋದಮೇಲೆ, ಕೊನೆಯ ಕಾಲಕ್ಕೆ ಬಂದು ಆ ನೀಚಾತ್ಮನ ದರ್ಶನ ತೆಗೆದುಕೊಳ್ಳುವೆನು. ಪ್ರಲ್ಹಾದಾ, ನೀನುಮಾತ್ರ ರಾಜ್ಯದಾಶೆಗೆ ಮರುಳಾಗಿ ಶ್ರೀಹರಿ ಗುಣಗಾನ ಮಾಡುವದನ್ನು ಬಿಡಬೇಡ.

ಪ್ರಲ್ಹಾದ—ಆ ವಿಷಯದ ಚಿಂತೆಯನ್ನೇ ಬಿಡಿ. ಎಲ್ಲಿ ನೋಡಿದಲ್ಲಿ ನನ್ನ ಅಹಿಂಸಾಮಂತ್ರ ಪಠಿಸುವ ಮಠಗಳ ಸ್ಥಾಪನ ಮಾಡುವೆನು. ಹೋಗಿ ಬನ್ನಿ ಭಗವನ್. ( ನಮಿಸುವನು. )

ನಾರದ—ಚಿರಜೀವಿಯಾಗು. ಭಕ್ತಾಗ್ರಣಿಯಾಗು. ( ಎಂದು ಹರಿಸಿ ವೀಣೆಯ ನಾದದೊಡನೆ ನಾರಾಯಣ ನಾರಾಯಣ ಎನ್ನುತ್ತ ಹೋಗುವನು)

# ೩ ನೆ ಯ ಪ್ರ ವೇ ಶ

## ಪರ್ಣಕುಟೀರದ ಮುಂದಿನ ಅಂಗಳ.

ಪಾತ್ರಗಳು....ಹುಡುಗರು, ಪ್ರಲ್ಹಾದ, ಆಕ್ರಾಳ, ವಿಕ್ರಾಳ, ತಿರು ಮೂಲಿ ಹಿರಣ್ಯಕಶಿಪು.

ಬರುವರೀತಿಯು—( ಹುಡುಗರು ಒಂದೇತರದ ಉಡುಪಿನಲ್ಲಿ ಬರುವರು. )

ನಾಯಕ— **೧೯ ಪದ**

ದೈತ್ಯನಾಮ ಘೋಷ | ನಿತ್ಯ ಹಿರಣ್ಯಕಶಿಪು ಎನ್ನಿರಿ || ಪ ||
ಬಾಲರೆ ನೀವು ಬೇಗ ಬನ್ನಿರಿ |
ಶಾಲಿನಲ್ಲಿಯೇ ಬಂದು ನಿಲ್ಲಿರಿ ||
ಕುಳಿತುಕೊಳ್ಳಿರಿ ಮೇಲೆ ಏಳಿರಿ |
ನಿಲ್ಲುತ ಹೊರಳಿ ಹೊರಳಿ ನೋಡಿರಿ ||
ಎರಡು ಕೈಗಳ ಮೇಲಕೆತ್ತಿರಿ |
ಎರಡು ಕೈಗಳ ಕೆಳಗೆ ಮಾಡಿರಿ ||
ಒಂದು ಕಾಲನೆ ಮುಂದೆ ಮಾಡಿ |
ಮುಂದೆ ಎದೆಯ ಸೆಟಿಸಿನಿಲ್ಲಿರಿ || ೧ ||

ಪ್ರಲ್ಹಾದ—ಶೆಟೆದು ಹೋಗಿರಿ. ( ಪ್ರವೇಶ ಮಾಡುವನು )

ತಿರುಮೂಲಿ—ಸತ್ತು ಹೋಗಿರಿ. (ಬಂದು) ಪಾಠಹೇಳಲು ತಪ್ಪಿದಿರಿ ( ಎದುರು ನಿಂತಿದ್ದ ಪ್ರಲ್ಹಾದನನ್ನು ಎಡವಿ ಬೀಳುವನು )

ಪ್ರಲ್ಹಾದ....ಹೀಗೇಕೆ ಬಿದ್ದೆಯೋ ?

ತಿರುಮೂಲಿ .... ಬಿದ್ದಿದ್ದಿರಲಿ ಮೊದಲು ಹಾವಭಾವ ಸಹಿತ ಪಾಠ ಹೇಳುವೆನು.

ಶಿಸ್ತಿನಿಂದಲಿ ಹಿಂದೆ ಸರಿಯಿರಿ |
ಶಿಸ್ತಿನಿಂದಲಿ ಮುಂದೆ ಸರಿಯಿರಿ ||

ಶಿಸ್ತಿನಿಂದಲಿ ಬಾಳ್ವೆ ಮಾಡಿರಿ |
ಶಿಸ್ತಿನಿಂದಲಿ ಸೋಗು ಮಾಡಿರಿ ||
ಶಿಸ್ತಿನಿಂದಲಿ ಯುದ್ಧ ಮಾಡಿರಿ |
ಶಿಸ್ತಿನಿಂದಲಿ ವಿಜಯ ಪಡೆಯಿರಿ ||
ಶಿಸ್ತಿನಿಂದಲಿ ಉಂಡು ಬಾಳಿರಿ |
ಶಿಸ್ತಿನಿಂದಲಿ ಸತ್ತು ಹೋಗಿರಿ || ೧ ||

೧ನೆಯ ಹುಡುಗ—ಅವ ಹುಚ್ಚ ಇದ್ದಾನರಿ. ಯುವರಾಜರ, ಸಾಲಿ ಪಾಠಕ್ಕೆ ಬರೋದಿಲ್ಲ. ಶಕ್ತಿ ಪಾಠಕ್ಕೆ ತಪ್ಪಿಸೋದಿಲ್ಲ

ತಿರುಮೂಲಿ—ಸುಮ್ಮನಿರಲೇ ಸಾಲಿ ತಪ್ಪಿದರೂ ಚಿಂತೆಯಿಲ್ಲ. ಶಕ್ತಿ ಪಾಠಕ್ಕೆ ತಪ್ಪಿಸ ಬೇಡೆಲೆ ಮಗನೇ ಅಂತಾ ಗುರುಗೋಳು ಹೇಳಿದಾರ.

ಪ್ರಲ್ಹಾದ—ಗುರುಗಳು ಎಲ್ಲಿ ಇದ್ದಾರೆ?

ತಿರುಮೂಲಿ—ಗಾಳಿ ತಿನ್ನಲಿಕ್ಕೆ ಹೋಗಿದ್ದಾರೆ.

ಪ್ರಲ್ಹಾದ—ಅನ್ನವಿರಲಿಕ್ಕೆ ಗಾಳಿಯನ್ನೇಕೆ ತಿನ್ನಲಿಕ್ಕೆ ಹೋಗಿದ್ದಾರೆ.

ತಿರುಮೂಲಿ—ಗುರುಗೋಳು ಹೇಳಿದ್ದನ್ನ ಹೇಳತೀನಿ ಕೇಳಿರಿ. ಯುವರಾಜರೇ, ಗಾಳಿಯೆಂದರೆ ಉಸಿರು, ಉಸಿರಿದ್ದರೆ ಪ್ರಾಣ, ಹಾವಿನಹಾಗೆ ಗಾಳಿ ನುಂಗಿ ನುಂಗಿ ಬದಕೋ ರೂಢಿ ಇಟ್ಟರೆ, ಕಾಳಿಲ್ಲದ ಗೋಳಾಡೋ ಬರಗಾಲ ಬಿದ್ದಾಗ, ಗಾಳಿ ತಿಂದು ಬದುಕಲಿಕ್ಕೆ ಬರತದ ಅಂತ ಹೇಳಿ, ಗಾಳಿ ತಿನ್ನಲಿಕ್ಕೆ ಹೋದರು.

೨ನೆಯ ಹುಡುಗ—ಅವನ ಮಾತು ಕೇಳಬೇಡರಿ. ಹುಚ್ಚಿದ್ದಾನ.

ತಿರುಮೂಲಿ—ನಾ ಹುಚ್ಚಲ್ಲರಿ. ಎಲ್ಲಾರಕಿಂತ ಜಾಣದೀನಿ. ಪಾಠ ಕೇಳರಿ.

೩ನೆಯ ಹುಡುಗ—ಇವ ಪಾಠಕ್ಕೇನೇ ಬರೋದಿಲ್ಲರಿ.

ಪ್ರಲ್ಹಾದ—ಎಲೋ, ನಿನ್ನ ಹೆಸರೇನು?

ತಿರುಮೂಲಿ—ತಿರುಮೂಲಿ.

ಪ್ರಲ್ಹಾದ—ಇದೆಂಥ ಹೆಸರು?

ತಿರುಮೂಲಿ—ನಮ್ಮ ಉದ್ಯೋಗಕ್ಕೆ ತಕ್ಕ ಹೆಸರೇ ಇದು. ಯುವರಾ

ಜರ! ಮೊದಲು ಮೊದಲು ನಮ್ಮ ತಾಯಿ-ತಂದೆಗಳು, ಹಡೆದ ಮಕ್ಕಳು ಬದಕೋದಿಲ್ಲಂತ ವಜ್ರಬಂಡಿ ಅಂತ ನನಗೆ ಹೆಸರಿಟ್ಟರು.

೩ನೆಯ ಹುಡುಗ— ಅದೇ ನಿಜವಾದ ಹೆಸರು.

ತಿರುಮೂಲಿ—ನೀ ಸುಮ್ಮನಿರಲೇ, ಯುವರಾಜರ! ನಾ ಸುಳ್ಳು ಹೇಳೋದ ಇಲ್ಲ. ನಾನು ಬದುಕಿ ಕುಲದೀಪಕ ಅಂತ ಎನಿಸಿಕೊಳ್ಳಬೇಕೆಂದು ನನ್ನ ಮೂಗಿಗೆ ಮುರುವು ಚುಚ್ಚಿ ಹಾಕ್ಯಾರ. ಗಂಡಸು ಕೂತು ಕೆಟ್ಟ, ಹೆಂಗಸು ಪಿರಿ ಪಿರಿ ತಿರುಗಿ ಕೆಟ್ಲ ಅಂತ ನಾ ಸಾಲಿಪಾಠ ತಪ್ಪಿಸಿ, ಊರಾಗಿನ ಮೂಲಿ ಮೂಲಿ ತಿರುಗಿ ಸಾಲಿ ತಪ್ಪಿಸತೇನಿ, ಅಂತ ನನಗೆ ಊರ ಹಿರೇರು ತಿರುಮೂಲಿ ಅಂತಾ ಹೆಸರಿಟ್ಟರು. ಈ ಬಹದ್ದುರ ವಜ್ರಬಂಡಿಗೆ ನಾನು ಮುಂದೆ ಹೋಗುವವ.

೩ನೆಯ ಹುಡುಗ—ನೀನ ಮುಂದೆ ಹೋದಾವ ಸುಮ್ಮನಿರು.

ತಿರುಮೂಲಿ—ನೀವೂ ಮುಂದೆ ಹೋಗಿಲ್ಲ; ನಾನೂ ಮುಂದೆ ಹೋಗಿಲ್ಲ ಈಗಿನ ಹರೆಯದ ಹುಡಿಗೆಯರು ಹರೆಯದ ಗಂಡು ಹುಡುಗರೊಡನೆ ಪಿರಿ ಪಿರಿ ತಿರುಗಿ, ಮುಂದ ಹೋಗ್ಯಾರ ಬಹು ಮುಂದ ಹೋಗ್ಯಾರ. ಗಂಡಗೂ ಹೆದರೋದುಲ್ಲ, ಗುರು ಹಿರಿಯರಿಗೂ ಹೆದರೋದಿಲ್ಲ, ಯಮದೇವರಿಗೂ ಕೂಡ ಹೆದರೋದಿಲ್ಲ ಈಗ ಎಲ್ಲಿ ನೋಡಿದಲ್ಲಿ ತರುಣರ ಸೋಲೇಸೋಲು.

ಪ್ರಲ್ಹಾದ--ತಿರುಮೂಲಿ, ಹೀಗೆ ಹುಚ್ಚನಹಾಗೆ ತಿರುಗಿದರೆ ಸಾಲಿಯ ಪಾಠಕಲಿಯುವ ಬಗೆಹೇಗೆ?

ತಿರುಮೂಲಿ--ಪಾಠ ಕೇಳಿರಿ, ಎಲ್ಲರಿಗಿಂತ ಚನ್ನಾಗಿ ಹೇಳತೀನಿ?

ಪ್ರಲ್ಹಾದ—ಎಲೋ ಹುಡುಗಾ, ನಿನಗಾವಪಾಠ ಹೇಳಿಕೊಟ್ಟಿರುವರು. ಹೇಳು?

೧ನೆಯ ಹುಡುಗ—ಗಿಡದಿಂದ ಕಟ್ಟಿಗೆಗಳು ದೊರೆಯುತ್ತವೆ. ಕಟ್ಟಿಗೆಗಳಿಗೆ ಉರಿ ಹಚ್ಚಿ ಅವನ್ನು ಸುಟ್ಟರೆ ಕೆಂಡ ಬೀಳುತ್ತದೆ. ಕೆಂಡದಮೇಲೆ ನೀರು ಹಾಕಿದರೆ ಇದ್ದಲಿಯಾಗುತ್ತದೆ, ಇದ್ದಲಿಯ ಬಣ್ಣ ಕಪ್ಪು

ಪ್ರಲ್ಹಾದ-- ಇದೆಂಥ ವಿಚಿತ್ರ ಪಾಠ.

ತಿರುಮೂಲಿ—ವಿಚಿತ್ರಪಾಠ ಅಲ್ಲರಿ. ವಿಜ್ಞಾನ ಶಾಸ್ತ್ರದ ಪಾಠ. ಈ ಪಾಠ ಕಲಿತರ ಉರಿಹಚ್ಚಲಿಕ್ಕೆ ಬರತದ, ಬಣವಿ ಸುಡಲಿಕ್ಕೆ ಬರತದ, ಊರ

ಸುಡಲಿಕ್ಕೆ ಬರತದ, ಜನರನ್ನ ಸುಡಲಿಕ್ಕೆ ಕೂಡ ಬರತದ.

ಪ್ರಲ್ಹಾದ—ಎಲೋ, ನಿನಗಾವ ಪಾಠ ಕಲಿಸಿದ್ದಾರೆ.

೨ನೆಯ ಹುಡುಗ—ಮಂಗನ ಹೋಲಿಕೆಯು ಮನುಷ್ಯನಹಾಗೆ ಇರುತ್ತದೆ. ಮನುಷ್ಯರ ಪೂರ್ವಜನು ಮಂಗವು. ಮಂಗವು ಬಾಲವನ್ನು ಕಳೆದುಕೊಂಡು ಮನುಷ್ಯನಾಗಿದೆ.

ತಿರುಮೂಲಿ—ಮಂಗನನಮಗನ ಪಾಠ ಹೇಳೋದು ಸಾಕು, ಕೇಳೋದುಸಾಕು.

೩ನೆಯ ಹುಡುಗ—ನೀನ ಕೋತಿ, ನೀನ ಮಂಗ.

ತಿರುಮೂಲಿ—ಹಾಗೇ ಆಗಲಿ. ಸಾಲಿಗೆ ಬಂದು ಗಿಳಿಯಹಾಗೆ ಹೇಳಿದಷ್ಟು ಕಲಿತು ಹಾಕಿದಷ್ಟು ತಿಂದು ಪಂಜರದಲ್ಲಿಯೇ ಪರತಂತ್ರವಾಗಿ ಇದ್ದು, ಸಾಯುವದಕ್ಕಿಂತ ಮಂಗನಾಗಿ ಕಾಡಿನಲ್ಲಿಯ ಹಣ್ಣು ಹಂಪಲಗಳನ್ನು ತಿನ್ನುತ್ತ, ಸ್ವತಂತ್ರತೆಯಿಂದ ಇರುವದೇ ಲೇಸು. ಮೇಲಾಗಿ ನಮ್ಮ ನಾಡಿನ ಮಂಗರಾಯ ದುಷ್ಟರಾಜರ ಪಟ್ಟಣ ಸುಟ್ಟಿತು, ಭೂಮಾತೆಯ ಕಷ್ಟ, ಪ್ರಜರ ಕಷ್ಟ ಬಿಡಿಸಿತು.

೨ನೆಯ ಹುಡುಗ—ನಿನ್ನ ಪುರಾಣದ ಕಥೆ ಸಾಕು, ಬಿಡು ಮಹಾರಾಯಾ! ಯುವರಾಜರೇ, ಈಗಿನ ಕಾಲದಲ್ಲಿ ಅಕ್ಷರ ತೀಡದೆ ಬರೆಯದೆ ಅಕ್ಷರ ಜ್ಞಾನವಾಗುತ್ತದೆ.

೩ನೆಯ ಹುಡುಗ—ಹೌದರಿ " ಕೋ " ಅಕ್ಷರ ತಿಳಿದುಕೊಳ್ಳಲಿಕ್ಕೆ ಕೋಣನ ಚಿತ್ರವನ್ನು " ಶ " ಅಕ್ಷರ ತಿಳಿದುಕೊಳ್ಳಲಿಕ್ಕೆ ಶಂಖದ ಚಿತ್ರವನ್ನೂ ಕೊಟ್ಟಿರುತ್ತಾರೆ.

ತಿರಮೂಲಿ—ಆ ಹಾಳು ವಿದ್ಯೆಯನ್ನು ಕಲಿತು ಜಾಣರಾಗದೆ ಕೋಣರಾಗಿ ಶಂಖಾ ಹೊಡೆಯುತ್ತ ಹಾಳಾಗಿ ಹೋಗಿರಿ. ಅಂತ ತಿಳಿಸಲಿಕ್ಕೆ ಕೋಣನಚಿತ್ರ, ಶಂಖದ ಚಿತ್ರ ಕೊಟ್ಟಿರತಾರ ಪಾಠದಾಗ ಅರಣ್ಯಪಂಡಿತರು. ಯುವರಾಜರ! ಸಾಲಾಗಿ ಅಕ್ಷರ ಸಾಲಾಗಿ ವಿದ್ಯಾ ಬರಬಾರದಂತ ತಿರುವುಮುರುವು ಕಲಿಸತಾರ ಇಷ್ಟೇ ಅಲ್ಲ. ಕ, ಕ, ಕತ್ತೆ. ಮ, ಮ, ಮಂಗ, ಎಂದು ಗುಕ್ಕಲು ಕೂಡ ಕಲಿಸುತ್ತಾರೆ ( ಕುಪ್ಪಿಯಲ್ಲಿಯ ನೀರನ್ನು ಕುಡಿಯುವನು)

೨ನೆಯ ಹುಡುಗ—ಅವ ತಲೀನ ಇಲ್ಲದ ಹುಚ್ಚಾ, ಇದ್ದಾನರಿ ಹುಚ್ಚಾ,

ತಿರುವುೂಲಿ, ಕುಡಿಯುವದೇನು?

ತಿರವುೂಲಿ--ಕಲಗಚ್ಚಿನ ನೀರು.

೩ ನೆಯ ಹುಡುಗ — ಕಲಗಚ್ಚಿನ ನೀರು ಕುಡಿಯಲಿಕ್ಕೆ ಕೋಣ ನೇನೋ?

ತಿರುಮೂಲಿ--ಕೋಣನಲ್ಲ, ಜಾಣನು. ನಮ್ಮಲ್ಲಿಯ ಜಾಣರಿಗೆ ನರ ನಾರಿಯರಿಗೆ ಬಾಲ ಬಾಲಿಕೆಯರಿಗೆ ಈ ಕಲಗಚ್ಚಿನ ನೀರು ಕುಡಿಯದೆ ಓದಲಿಕ್ಕೆ ನಡೆಯಲಿಕ್ಕೆ ಹಾಸಿಗೆಯಿಂದ ಏಳಲಿಕ್ಕೆ ಸಾಯಲಿಕ್ಕೆ ಕೂಡ ಬರುವ ದಿಲ್ಲ.

೨ನೆಯ ಹುಡುಗ--ಕಲಗಚ್ಚಿನ ನೀರು ಕುಡಿಯುವ ಕೋಣಾ, ಬಾಯಿಗೆ ಬಂದಹಾಗೆ ಬೊಗಳಬೇಡ.

ತಿರುಮೂಲಿ—ಬೊಗಳೋದಿಲ್ಲ. ವಿದ್ಯಾ ಕಲಿತು ಜಾಣರಾಗದೆ, ತಲೆ ಯಿಲ್ಲದ ಕೋಣರಾದವೇಲೆ ಕಲಗಚ್ಚಿನ ನೀರನ್ನೇಕೆ ಬಚ್ಚಲನೀರನ್ನು ಕೂಡ ಕುಡಿಯಬೇಕಾಗುವದು.ಹುಡುಗರಿರಾ, ಈ ಕಲಗಚ್ಚಿನ ನೀರು ಸಾಮಾ ನ್ಯವಲ್ಲ. ಒಣಗಿದ ಪರಮಪವಿತ್ರ ಪರ್ಣ ಚೂರ್ಣ ಬೆರೆತ ಉತ್ತಮಪೇ ಯವು. ಈ ಪೇಯದಿಂದಲೇ ನಮ್ಮ ದೇಶದ ಉದ್ಧಾರ.

೩ನೆಯ ಹುಡುಗ—ಸುಳ್ಳು ಸುಳ್ಳು.

ತಿರುವುೂಲಿ—ಸುಳ್ಳಲ್ಲ. ಈ ಪವಿತ್ರ ಪೇಯವನ್ನು ಸಾಯುವವರ ಬಾಯಿಯಲ್ಲಿ ಗಂಗೆಯ ಬದಲು ಹಾಕಿದರೆ ಅವರು ಸ್ವರ್ಗಕ್ಕೆ ಹೋಗುತ್ತಾರೆ. ಇಷ್ಟೇ ಅಲ್ಲ. ಸ್ವರ್ಗಸ್ಥರಾದ ನಮ್ಮ ಗುರು ಹಿರಿಯರಿಗೆ ಈ ಪೇಯದಿಂದಲೇ ತರ್ಪಣ ಕೊಡುವ ಮಹಾ ಪರವಣಿಯು ಬರುವದು.

೧ ನೆಯ ಹುಡುಗ — ಸುಮ್ಮನಿರೋ, ತಲೆ ತಿರುಕಾ ಶಕ್ತಿಪಾಠ ಹೇಳತೇನಿ.

ತಿರುಮೂಲಿ—ಪಾಠಲ್ಲವು ಸಪಾಟು.

ಪ್ರಲ್ಹಾದ—ಸರಿಯಾಗಿ ಹೇಳಿದೆ. ಶಕ್ತಿಯ ಶಕ್ತಿ ಸರ್ವರ ಶಕ್ತಿಯಾದ ಶ್ರೀಮನ್ನಾರಾಯಣನ ವಿಷಯವಾಗಿರುವ ಪಾಠ ಮಾಡರಿ.

೧ನೆಯ ಹುಡುಗ—ಆ ಪಾಠ ಬೇಡಿ. ಶ್ರೀಹರಿಯೆಂದವರು ನಮ್ಮ ದೊರೆಗಳಿಂದ ತಮ್ಮ ನಾಲಿಗೆಗಳನ್ನೇ ಕೀಳಿಸಿಕೊಳ್ಳಬೇಕಾಗುತ್ತದೆ.

ಪ್ರಲ್ಹಾದ—ಶ್ರೀಹರಿಯೆನ್ನದವರ ನಾಲಿಗೆಗಳು ಕೊಳೆತು ಹೋಗುವವು. ಆ ಶ್ರೀ ಹರಿಯೇ ನಮ್ಮನ್ನು ಹಾಗು ಎಲ್ಲ ಪ್ರಾಣಿಗಳನ್ನು ರಕ್ಷಿಸತಕ್ಕವನು.

೧ನೆಯ ಹುಡುಗ—ಅವನೆಲ್ಲಿ ಇದ್ದಾನೆ.

ಪ್ರಲ್ಹಾದ—ನಾವು ನೋಡಿದಲ್ಲಿ ನಾವು ಇಲ್ಲದಲ್ಲಿ ಎಲ್ಲಕಡೆಯಲ್ಲಿ ಮೇಲೆ ಕೆಳಗೆ ಒಳಗೆಹೊರಗೆ ನಮ್ಮ ಸುತ್ತುಮುತ್ತು ಇದ್ದು, ಸರ್ವಜಗತ್ತುಗಳನ್ನು ರಕ್ಷಿಸುತ್ತಾನೆ. ಬಾಲಕರಿರಾ, ಟೆಂಗಿನಕಾಯಿಯಲ್ಲಿ ಕಾಣದಹಾಗೆ ಎಳೆ ತಿಳಿ ನೀರನ್ನೂ, ಮಾವಿನಲ್ಲಿ ಸವಿರಸವನ್ನು ತುಂಬಿದವನು ಮುಗಿಲಿಗೆ ನೀಲಿಯ ಬಣ್ಣ, ಗಿಳಿಗೆ ಹಸಿರುಬಣ್ಣ ಬಳೆದವನು, ರಾತ್ರಿಯಲ್ಲಿ ಚಂದ್ರನನ್ನು, ಹಗಲಿನಲ್ಲಿ ಸೂರ್ಯನನ್ನು ಆಕಾಶದಲ್ಲಿ ತಿರುಗಾಡಲು ಹಚ್ಚಿದವನು. ನೋಡಲಿಕ್ಕೆ ನಮಗೆ ಕಣ್ಣುಗಳನ್ನು, ಸವಿನೋಡಲಿಕ್ಕೆ ನಾಲಿಗೆಗಳನ್ನು ಕೊಟ್ಟವನು, ವೈಶ್ವಾನರ ರೂಪದಿಂದ ದೇಹಿಯು ಉಣ್ಣುತ್ತಿರುವ ಅನ್ನವನ್ನು ಅರಗಿಸುವವನು, ಎಲ್ಲರನ್ನು ತನ್ನ ಮನಸ್ಸಿಗೆ ಬಂದಹಾಗೆ ಕುಣಿಸುವ ಸೂತ್ರಧಾರನೇ ನಮ್ಮ ಶ್ರೀಹರಿಯು. ಶ್ರೀಹರಿಯ ಕೃತಿಗೂ, ನಮ್ಮ ಕೃತಿಗೂ ಮುಗಿಲಿಗೂ ನೆಲಕ್ಕೂ ಇದ್ದಷ್ಟು ಅಂತರವಿದೆ. ಬಾಲಕರಿರಾ, ನಾವು ಕಟ್ಟಿದ ಕೆರೆಬಾವಿಗಳು, ಕಟ್ಟಡಗಳು, ಕೋಟೆ ಕೊತ್ತಳಗಳು, ಆ ರಾಜರು, ಆ ರಾಜವೈಭವಗಳು, ಅವರ ಸಿಂಹಾಸನಗಳು, ನಾವೂ ನೀವೂ ಒಂದಿಲ್ಲೊಂದುದಿವಸ ಮಣ್ಣುಗೂಡಿ ಹೋಗುವೆವು. ಅದೇ ನೋಡಿ; ದೇವರು ಹುಟ್ಟಿಸಿದ ಮುಗಿಲು ಇದ್ದಹಾಗೆ, ಇದೆ. ಸೂರ್ಯಚಂದ್ರರು ಇದ್ದಹಾಗೆ ವೇಳೆಗೆ ಸರಿಯಾಗಿ ತಪ್ಪದೇ ಬರುವರು; ವೇಳೆಗೆ ಸರಿಯಾಗಿ ತಿರುಗಿಹೋಗುವರು. ಈಬಗೆಯ ಪಾಠ ಕಲಿಯುವದೇ ನಮಗೆ ಹಿತದಾಯಕವು.

ಹುಡುಗರು—ನಿಜ; ನಿಜ. ಯುವರಾಜರೇ, ನೀವು ಹೇಳುತ್ತಿರುವದು ಅಕ್ಷರಶಃ ನಿಜವು.

ಪ್ರಲ್ಹಾದ—ನಾನು ಹೇಳಿಕೊಡುವ ಪಾಠ ಕಲಿತು ಅದರಂತೆ ನಡೆಯುವಿರಾ?

ಹುಡುಗರು—ನಡೆಯುವೆವು.

ಪ್ರಲ್ಹಾದ—ಎನ್ನ ಪ್ರಿಯ ಚಿಕ್ಕ ಗೆಳೆಯರಿರಾ. ದೇವರು ನಮ್ಮೆಲ್ಲರ

ತಾಯಿತಂದೆಗಳ ತಂದೆಯು; ಎಲ್ಲ ಪ್ರಾಣಿಗಳ ತಂದೆಯುಕೂಡ ಆಗಿರುವನು. ದೇವರು ಎಲ್ಲರಲ್ಲಿಯೂ, ಎಲ್ಲಿ ನೋಡಿದಲ್ಲಿಯೂ ಇರುವನು. ಆತನು ಎಲ್ಲರ ಮೇಲೆಯೂ ಸರಿಯಾಗಿ ಪ್ರೇಮಮಾಡುವನು; ಎಂದು ನೆರೆನಂಬಿ ನೀವು ನಿಮ್ಮ ತಾಯಿತಂದೆಗಳನ್ನು ಪ್ರೀತಿಸುವದಕ್ಕಿಂತ ಹೆಚ್ಚಾಗಿ ಆ ದೇವರನ್ನು ಪ್ರೀತಿಸಿರಿ. ನಾನು ಮಾಡುವೆ, ನಾನು ದೊಡ್ಡವ, ನಾನು ಜಾಣನು ಎಂಬ ದುರಭಿಮಾನ ಬಿಟ್ಟುಕೊಟ್ಟು, ಲೀನರಾಗಿ ದೀನರಾಗಿ ನಿಮ್ಮದೆಲ್ಲವನ್ನು ನಿರ್ಮಲ ಮನಸ್ಸಿನಿಂದ ಆ ಮಹಾಮಹಿಮನ ಪವಿತ್ರ ಪಾದಕ್ಕೊಪ್ಪಿಸಿರಿ. ದೇವರು ನಿಮ್ಮ ಮಾನಕ್ಕಿಂತ, ಪ್ರಾಣಕ್ಕಿಂತ ಹೆಚ್ಚಿನವನು. ಆತನನ್ನು ನಂಬಿರಿ. ಗಿಡವು ಎಳೆಯದಿರುವಾಗ ಬಗ್ಗುವಂತೆ ದೊಡ್ಡದಾದಮೇಲೆ ಬಾಗದು. ನಿಮ್ಮ ಎಳೆಮನವು ದೇವರ ಮನೆಯಾಗಲಿ; ಮುಂದೆ ಅದು ದೆವ್ವನಮನೆ ಆಗುವದು. ಬಾಗಿ ಬಾಳಿರಿ, ಬಾಗದ್ದು ಮುರಿದು ಮಣ್ಣುಗೂಡಿ ಹೋಗುವದು. ಗರ್ಭದಲ್ಲಿ ರಕ್ಷಿಸುವದಲ್ಲದೆ, ಭೂಮಿಗೆ ಬಂದಮೇಲೆ ನಿಮ್ಮ ಹೊಟ್ಟೆಗಾಗಿ ಮೊಲೆಹಾಲಿನ ನಿರ್ಮಾಣಮಾಡಿಡುವ ದೇವರನ್ನು ಬಿಟ್ಟುಕೊಟ್ಟಲ್ಲಿ ನಮ್ಮನ್ನಾರೂ ಕಾಯುವದಿಲ್ಲ. ನಮ್ಮಕುತ್ತಿಗೆ ಮುರಿಯಲು ಸಾವು ಎಂಬ ಬಾವುಗವು ನಮ್ಮ ಸುತ್ತುಮುತ್ತು ಸುತ್ತರಿಯುತ್ತ ಜಪ್ಪಿಸಿಕೊಂಡು ಕುಳಿತಿದೆ: ಸಾವನ್ನು ಗೆದೆಯಬೇಕಾದರೆ, ಸಾವನ್ನು ಗೆದ್ದ ದೇವರಿಗೆನೇ ಶರಣು ಹೋಗಿರಿ. ಈ ಲೋಕದ ಹಾಳು ಬಾಳುವೆಗೆ ಮನಸೋತು, ವಿಷಯಸುಖಕ್ಕೆ ಮರುಳಾಗಿ ತಿರುತಿರುಗಿ ಸಾವೆಂಬ ಬಾವುಗದ ಬಾಯಿಗೆ ತುತ್ತಾಗಬೇಡಿರಿ. ಪ್ರೇಮಮಯನಾದ ಭಕ್ತರ ಪಂಚಪ್ರಾಣನಾದ ದೇವ ದೇವನಾದ ನಾರಾಯಣನಿಗೆ ಮೊರೆ ಹೋಗಿರಿ. ಆ ಕರುಣಾಸಾಗರನ ಮುಂದೆ ನಿಮ್ಮ ಮನಬಿಚ್ಚಿಡಿರಿ. ಸುಖ ದುಃಖಗಳನ್ನು ತೋಡಿಕೊಳ್ಳಿರಿ. ಬೇಡುವದನ್ನು ಬೇಡಿರಿ. ಆ ಮಹಾಮಹಿಮನ ಗುಣಕಥನ ಕೇಳಿರಿ. ಬಿಟ್ಟೂಬಿಡದೆ ಲಕ್ಷ್ಯಗೊಟ್ಟು ಹರಿಸೇವೆ ಮಾಡಿರಿ. ದೇವರಿಗೆ ಭಾಗ್ಯಬೇಡ, ನಿಮ್ಮ ನಿರ್ಮಲ ಭಕ್ತಿ ಬೇಕು. ನೀವು ಬಹು ಭಕ್ತಿಯಿಂದ ಕೊಡುವ ಹೂ ಕಾಯಿ ಪತ್ರಿ ಫಲಗಳೇ ಅಮೌಲ್ಯ ವಜ್ರಗಳಿಕ್ಕಿಂತ ಹೆಚ್ಚಿನವೆಂದು ಅವನ್ನು ಸ್ವೀಕರಿಸುವನು. ಆ ದೇವ ದೇವನು ನಿಮ್ಮನ್ನು ಅಖಂಡ ಆನಂದದಲ್ಲಿ ಇಡುವನು. ಎಂದರೆ ನೀವು ಮುಕ್ತರಾಗುವಿರಿ. ಯಾವಾಗಲೂ ಸುಖದಿಂದಲೇ ಇರುವಿರಿ. ಪ್ರೇಮಮಯ ನಾರಾಯ

ಣನನ್ನು ನಂಬಿರಿ; ನೆನೆಯಿರಿ. ಆ ಮೇಘಶ್ಯಾಮನ ನಯನಮನೋಹರ ಮೂರ್ತಿಯನ್ನು ಕಣ್ತುಂಬ ನೋಡುತ್ತ ಆನಂದಾಶ್ರುಗಳನ್ನುದುರಿಸುತ್ತ, ಆದೇ ಆನಂದದ ಭರದಲ್ಲಿ ಮೈಮರೆತು ಕುಣಿಯಿರಿ. ಆ ದೇವನ ಸೇವೆಗಾಗಿಯೇ ಬಾಳಿರಿ; ಸುಖದಿಂದ ಇರ್ರಿ. ಸಾವನ್ನು ನೋವನ್ನು ಗೆಲ್ಲಿರಿ.

ತಿರುಮೂಲಿ—ಯುವರಾಜರ ಇಂಥಾ ಪಾಠ ಹೇಳಿಕೊಡಿರಿ. ಆಪಾಠ ಕಲಿತು ಈ ತಿರುಮೂಲಿ ವಿದ್ಯೆಯ ಪಡಿಮೂಲಿ ಆಗುವನು (ಮತ್ತೆ ನೀರನ್ನು ಕುಡಿಯುವನು)

ಗನೆಯ ಹುಡುಗ—ಇಷ್ಟೆಲ್ಲ ತಿಳಿದವನು ತಿರುತಿರುಗಿ ಕಲಗಚ್ಚಿನ ನೀರನ್ನೇಕೆ ಕುಡಿಯುವೆ?

ತಿರುಮುಮಲಿ — ಕೆಟ್ಟತಲೆಯು ಸುಧಾರಿಸಬೇಕೆಂದು, ಮರತೆ ಹಾಲೇ ಇಲ್ಲವೆಂದು.

ಪ್ರಲ್ಹಾದ—ಹಾಲೇಕೆ ಇಲ್ಲ?

ತಿರುಮೂಲಿ—ಗೋರಕ್ಷಕಸುರರ ರಾಜ್ಯವು ಎಂದೋ ಹಾಳಾಗಿಹೋಗಿ ಯಜ್ಞ ವಿಧ್ವಂಸಕ ಅರ್ಥಾತ್ ವೇದವಧ, ಸತ್ಯವಧ ಮಾಡುತ್ತಿರುವ ಗೋಭಕ್ಷಕ ರಾಕ್ಷಸರಹಾವಳಿಯು ಎಲ್ಲನೋಡಿದಲ್ಲಿ ಇದ್ದದ್ದರಿಂದ ಪ್ರತಿನಿತ್ಯ ಕೋಟ್ಯಾವಧಿ ಗೋಗಳ ವಧವಾಗುವದು ವಧ.

(ತೆರೆಯಲ್ಲಿ—ಗೋವಧ ನಿಲ್ಲಿಸಿರಿ ಗೋವಧ)

ಪ್ರಲ್ಹಾದ—ಏನದು ಗಲಭೆ?

ತಿರುಮೂಲಿ—(ಆಕಳುಬರಲು) ಯುವರಾಜರೆ, ಈ ಗೋವನ್ನು ರಕ್ಷಿಸಿರಿ.

ಅಕ್ರಾಳ—ಇದು ನಮ್ಮ ಆಹಾರವು.

ಪ್ರಲ್ಹಾದ—ಇದು ವಿಶ್ವರಕ್ಷಕ ತಾಯಿಯು.

ವಿಕ್ರಾಳ—ಇದು ನಮ್ಮ ವೈರಿಯು.

ಪ್ರಲ್ಹಾದ—ಹೀಗೇಕೆ ಹೇಳುವೆ ?

ವಿಕ್ರಾಳ—ಹರಿಯು ನಮ್ಮ ರಾಕ್ಷಸಕುಲದ ವೈರಿಯು. ಅವನಿಗೆ ಪ್ರಿಯವಾದ ಒಡವೆಗಳೆಲ್ಲವೂ ನಮಗೆ ಮಾರಕ . ಅವುಗಳನ್ನೆಲ್ಲ ನಾಶಮಾಡುವದೇ ನಮ್ಮ ಕರ್ತವ್ಯವಾಗಿದೆ .

ಅಕ್ರಾಳ—ಖಂಡಿತ ಖಂಡತುಂಡ ಮಾತನ್ನೇ ಹೇಳಿದ್ದಾನೆ. ಭೂದೇ

K 82

ವಿಯು ಗೋರೂಪದಿಂದ ನಮ್ಮ ವೈರಿಯಾದ ವಿಷ್ಣುವಿನಹತ್ತಿರಹೋಗಿ, ನಮ್ಮ ವೈರಿಯನ್ನು ನಮ್ಮ ದಾನವಕುಲದಲ್ಲಿಯೇ ಹುಟ್ಟಿಸುವದಕ್ಕೆ ಮೂಲಕಾರಣ ಳಾದಮೂಲಕ ನಾವು ಗೋವಧ ಮಾಡುವದು, ಗೋಮಾಂಸ ತಿನ್ನುವದು ಪರಮಪವಿತ್ರ ಕರ್ತವ್ಯವೆಂದೂ. ಧರ್ಮವೆಂದೂ ತಿಳಿದುಕೊಂಡಿರುವೆವು.

ತಿರುಮೂಲಿ—ಜನತಿನ್ನುವವರು ದನಾತಿನ್ನದೇ ಬಿಟ್ಟಾರೇ ಯುವ ರಾಜರೇ, ಹೇಗಾದರೂಮಾಡಿ, ಈ ಗೋವನ್ನು ರಕ್ಷಿಸಿರಿ.

ಅಕ್ರಾಳ-ವಿಕ್ರಾಳ—ಈ ನಮ್ಮ ಆಹಾರದ ಮೇಲೆ ಯಾರ ಅಧಿಕಾರವೂ ಇಲ್ಲ.

ಪ್ರಲ್ಹಾದ—ವಿಶ್ವರಕ್ಷಕ ಗೋಮಾತೆಯನ್ನು ಆಹಾರವನ್ನಾಗಿ ಮಾಡಿ ಕೊಳ್ಳುವ ಅಧಿಕಾರವು ಯಾರಿಗೂ ಇಲ್ಲ. ಮೂರ್ಖರಿರಾ, ಸರಿಯಿರಿ ಹಿಂದಕ್ಕೆ ಗೋವಿನ ಮೈಗೆ ಕೈ ಹಚ್ಚಿದರೆ ನಿಮ್ಮ ರುಂಡಗಳು ನಿಮ್ಮ ಮುಂಡ ಗಳಿಂದ ಬೇರೆ ಆದವೆಂದೇ ತಿಳಿಯಿರಿ.

ಅಕ್ರಾಳ-ವಿಕ್ರಾಳ—ನಾವೇನು ತಮ್ಮ ಮಾತು ಕೇಳತಕ್ಕವರಲ್ಲ, ರಾಜಾ ಜ್ಞೆಯಂತೆ ಗೋವಧ ಮಾಡಿಯೇ ಬಿಡುವೆವು.

ಪ್ರಲ್ಹಾದ—ಗೋವಧಕ್ಕೆ ಆಜ್ಞೆಯನ್ನು ಕೊಡುವವನು ರಾಜನಲ್ಲ, ರಾಜಪಿಶಾಚಿಯು

ಅಕ್ರಾಳ-ವಿಕ್ರಾಳ—ನಮ್ಮ ರಾಜರು ಪಿಶಾಚಿಗಳೇ?

ಪ್ರಲ್ಹಾದ—ನಿಸ್ಸಂದೇಹವಾಗಿ ಯಾರೇ ಇರಲಿ. ಗೋವಧಕ್ಕೆ ಆಜ್ಞೆ ಕೊಡುವವರು ರಾಜ ಪಿಶಾಚಿಗಳು. ಭೇದಭಾವಗಳಿಲ್ಲದೆ, ಮೇಯ್ದು ಕ್ಷುಲ್ಲಕ ಹುಲ್ಲನ್ನು ಅಮೃತವನ್ನಾಗಿ ಮಾಡಿ, ಸರ್ವಜಾತಿಯವರಿಗೂ ತನ್ನನ್ನು ಕಡಿ ಯುವ ಕಟುಗರವನಿಗೂ ಕೂಡ ಹಾಲುಣಿಸಿ ಪುನಃ ಅದೇ ಅಮೃತದಿಂದ (ಹಾಲಿನಿಂದ,) ಮೊಸರಾಗಿ, ಮಜ್ಜಿಗೆಯಾಗಿ, ಬೆಣ್ಣೆಯಾಗಿ, ತುಪ್ಪವಾಗಿ ಎಲ್ಲರನ್ನು ರಕ್ಷಿಸುತ್ತ ಸಂತೋಷ ಬಡಿಸುತ್ತಿರುವ ಜನತೆಯ ತಾಯಿಯು. ಇರುವೆ ಮೊದಲಾದ ಎಲ್ಲ ಪ್ರಾಣಿಗಳಿಗೆ ಅನ್ನ ಸಾಮಗ್ರಿಮಾಡಿಕೊಡಲು ಹೊಲಹರಗಿ ಹಸಮಾಡಿ, ಬೀಜ ಬಿತ್ತಿ ಬೆಳೆಬಂದಮೇಲೆ ಕಾಳುಗಳನ್ನು ತೆನೆ ಗಳಿಂದ ಬೇರೆಮಾಡಿ ಕಾಳಿನರಾಶಿಯನ್ನು ಕೊಟ್ಟು ಎಲ್ಲ ಜೀವಿಗಳನ್ನು ರಕ್ಷಿ ಸುವ ಬಸವರಾಜನ ತಾಯಿಯನ್ನು ಅರ್ಥಾತ್ ಅನ್ನದಾನಮಾಡುವ ಅನ್ನ

ದೇವರ ತಾಯಿಯನ್ನು ವಧಮಾಡುವದೆಂದರೆ ಅನ್ನ ದೇವರ ಕೊಲೆ, ಎಲ್ಲ ಜೀವಿಗಳ ಕೊಲೆಮಾಡಿದಂತೆಯೇ ಸರಿ. ಈ ಬಗೆಯ ಅಮಾನುಷ ಕೊಲೆ ಮಾಡಿಸುವಲ್ಲಿ ಆನಂದಪಡುವ ರಾಜನು ವಿಶ್ವರಕ್ಷಕ ರಾಜನಲ್ಲ; ವಿಶ್ವಭಕ್ಷಕ ರಾಕ್ಷಸನು. ಆ ರಾಜಪಿಶಾಚಿಯ ಆಜ್ಞೆಗೆ ನಾನೆಂತೂ ಮಾನಕೊಡುವದಿಲ್ಲ. ಗೋವಧಮಾಡಿಯೇ ಬಿಡಬೇಕೆಂದು ತಮ್ಮ ಹಟವಿದ್ದರೆ ಮೊದಲು ನನ್ನ ವಧ ಆಮೇಲೆ ಗೋವಧ.

ಅಕ್ರಾಳ-ವಿಕ್ರಾಳ--ಉಭಯತರ ವಧವಾಗಲಿ. ಅಧಿಕಸ್ಯ ಅಧಿಕಂ ಫಲಂ (ಖಡ್ಗಪ್ರಹಾರ ಮಾಡುವಾಗ ಮೇಲಕ್ಕೆ ಎತ್ತಿದ ಶಸ್ತ್ರಗಳು ಕೆಳಕ್ಕೆ ಬಾರದೇ ನಿಂತಲ್ಲಿಯೇ ನಿಲ್ಲುವವು)

ಎಲ್ಲರು--ಯುವರಾಜರೇ, ಗೋಮಾತೆಯು ತಮ್ಮ ಪುಣ್ಯದಿಂದಲೇ ಬದುಕಿತು.

ಪ್ರಲ್ಹಾದ--ನನ್ನ ಪುಣ್ಯದಿಂದಲ್ಲ. ಕಡಿಯಲು ಮೇಲಕ್ಕೆತ್ತಿದ ಶಸ್ತ್ರಾಸ್ತ್ರಗಳು ಎತ್ತಿದಲ್ಲಿಯೇ ನಿಲ್ಲುವಹಾಗೆ ಮಾಡುವ ಅಗಾಧಶಕ್ತಿಯು ನನ್ನಲ್ಲಿ ಇಲ್ಲ. ಕರಿಯ ಕಾಯ್ದು, ಧ್ರುವಗೆ ಧ್ರುವಪದಕೊಟ್ಟ ದೇವಾಧಿದೇವನಾದ ಶ್ರೀಮನ್ನಾರಾಯಣನ ನಾಮದಲ್ಲಿ ಮಾತ್ರ ಸರ್ವಶಕ್ತಿಯನ್ನು ತಡೆದುನಿಲ್ಲಿಸುವ ಅಮೋಘಶಕ್ತಿಯಿದೆ. ಪಾಪಾರಣ್ಯವನ್ನು ಸುಡುವ ಶಕ್ತಿಯಿದೆ. ಸಂಸಾರಸಮುದ್ರದಲ್ಲಿ ಮುಳುಗುವವರನ್ನು ತೇಲಿಸುವ ಶಕ್ತಿಯಿದೆ. ಸಕ್ಕರೆಯಗಿಂತ ಮಧುವಿನಗಿಂತ ಸುಧೆಯಗಿಂತ ಸವಿಯಾದ ನನ್ನ ಶ್ರೀಹರಿನಾಮ ತಾರಕನಾಮ ಪಾವಕನಾಮ. ಆ ದಯಾಘನನ ನಾಮಸ್ಮರಣ ಮಾಡಿ ಪಾವನರಾಗುವ, ಧನ್ಯರಾಗುವ ಬನ್ನಿ. ಗೆಳೆಯರಿರಾ! ( ಬಾಲಕರೊಡನೆ )

## ೨೦ ಪದ ( ಧಾಟಿ ಛಾಯಾ ತರಂಗಿಣಿ. )

ವೀರಾಧಿವೀರಾ ನಾರಾಯಣ | ಸುರವಿನುತಾ ದಯಾಯುತಾ ||
ನಿರುತದಲೀ ಪೊರೆವ ಧರೆಯ ರಕ್ಷಿತಾ |
ಸುರವಂದಿತಾ ರಮಾಯುತಾ ನಾರಾಯಣ || ಪಲ್ಲ ||
ಉರುಗಶಾಯಿಯೆ ವರಸೌಖ್ಯದಾಯಿಯೆ |

ನರರ ವ್ಯಥೆಯ ಕಳೆವ ಸುರವರ ಸಿರಿವರ।
ಗರುಡವಾಹನ ನಾರಾಯಣ ॥ ೧ ॥
ನಾರಾಯಣ, ಭವಭಯ ನಿವಾರಣ, ದುರಿತ ನಿವಾರಣ ನಾರಾಯಣ

ಅಕ್ರಾಳ-ವಿಕ್ರಾಳ—ದಾನವಾರಿಯ ಧ್ಯಾನ ಬಿಡುವಿರೋ ದಾನವೇಂದ್ರರ ಆಜ್ಞಾಭಂಗ ಮಾಡಿದ ಮಹಾಪರಾಧಕ್ಕೆ ತಕ್ಕ ಶಾಸನ ಮಾಡಬೇಕೋ

ವಿಕ್ರಾಳ—ಬೇಗಹೇಳಿ. ಆಜ್ಞೆಗೆ ಮಾನ್ಯವೋ, ಅಮಾನ್ಯವೋ?

ಎಲ್ಲರು—ಅಮಾನ್ಯವು, ಅಮಾನ್ಯವು.

ವಿಕ್ರಾಳ—ಶಾಸನದ ಭಯವು ತಮಗಿಲ್ಲವೇ?

೧ನೆಯ ಹುಡುಗ—ಶಾಸನಕ್ಕೆ ಬೆದರಿ ಸತ್ಯಮಾರ್ಗ ಬಿಡುವವರು ನಾವಲ್ಲ.

೨ನೆಯ ಹುಡುಗ—ಸತ್ಯವೇ ನಮ್ಮ ಸಂಪತ್ತು.

೩ನೆಯ ಹುಡುಗ—ಸತ್ಯವೇ ನಮ್ಮ ಜೀವನ.

ಎಲ್ಲರು—ಸತ್ಯಕ್ಕಾಗಿಯೇ ಸಾಯುವೆವು.

ವಿಕ್ರಾಳ—ಸತ್ಯಕ್ಕಾಗಿಯೇ ಸಾಯಿರಿ, ಯಾರು ಬೇಡವೆನ್ನುವರು. ದೇವದೇವರ ದಾನವೇಂದ್ರರ ಆಜ್ಞಾಭಂಗ ಮಾಡಿದ ಮಹಾಪರಾಧಕ್ಕೆ ತಕ್ಕ ಮರಣಾಂತಿಕ ಶಿಕ್ಷೆಯೇ ತಮ್ಮೆಲ್ಲರಿಗೆ ಆಗತಕ್ಕದ್ದು.

ಅಕ್ರಾಳ—ಅನುಮಾನವೇಕೆ, ಆಜ್ಞಾಭಂಗ ಮಾಡಿದ ಪುಂಡರ ಚೆಂಡುಗಳ ಚೆಂಡಾಡುವ.

ವಿಕ್ರಾಳ—ಸರಿಯಾದ ಹಂಚಿಕೆಯು. ಖಡ್ಗಗಳ ಮೇಲೆ ಖಡ್ಗಪ್ರಹಾರಮಾಡಿ, ಈ ಪಾಪಾತ್ಮರ ಸಂಹಾರ ಮಾಡಿಯೇ ಬಿಡುವ. (ಖಡ್ಗಪ್ರಹಾರ ಮಾಡುವಾಗ)

ಪ್ರಲ್ಹಾದ—ಮೂರ್ಖರಿರಾ, ಸರಿಯಿರಿ ಹಿಂದಕ್ಕೆ, ಮುಂದೆ ಒಂದು ಹೆಜ್ಜೆಯನ್ನಿಟ್ಟರೆ ನಿಮ್ಮ ಅವಸ್ಥೆಯು ನೆಟ್ಟಗಾಗಲಿಕ್ಕಿಲ್ಲ. ಜೋಕೆ ಬಹು ಜೋಕೆ.

ವಿಕ್ರಾಳ—ಸಮ್ರಾಟರ ಆಜ್ಞೆಗೆ ಅಮಾನ್ಯಮಾಡುವದು ನ್ಯಾಯವೇ?

ಪ್ರಲ್ಹಾದ—ರಾಜಧರ್ಮಮರ್ಯಾದಾಜ್ಞೆಗೆ ಅಮರ್ಯಾದೆ ಮಾಡುವದು ಸಮ್ರಾ

ಟರಿಗೆ ನ್ಯಾಯವೇ?

ಅಕ್ರಾಳ—ನಾವು ಧರ್ಮಾಧರ್ಮಗಳ ವಿಷಯವಾಗಿ ವಿಚಾರಮಾಡತಕ್ಕವರಲ್ಲ. ಸೇನಾಧಿಕಾರಿಗಳು ರಾಜಾಜ್ಞೆಯನ್ನಷ್ಟೇ ಪಾಲಿಸತಕ್ಕವರು.

ಪ್ರಲ್ಹಾದ—ನಾನೇನು ಆ ರಾಜಾಜ್ಞೆಗೆ ಮಾನ ಕೊಡತಕ್ಕವನಲ್ಲ.

ಅಕ್ರಾಳ-ವಿಕ್ರಾಳ—ನಾವಾದರೂ ತಮ್ಮವರ ಪ್ರಾಣ ತೆಗೆದುಕೊಳ್ಳದೆ ಬಿಡತಕ್ಕವರಲ್ಲ.

ಹಿರಣ್ಯ—( ಗದಾಧಾರಿಯಾಗಿ ಬಂದು ) ಏನದು ಗಲಭೆ?

ವಿಕ್ರಾಳ—ಈ ಯುವರಾಜರು ತಮ್ಮ ರಾಜಾಜ್ಞೆಗೆ ಅಮರ್ಯಾದೆಮಾಡುತ್ತಿರುವರಲ್ಲದೆ, ಒಕ್ಕಲಿಗರಿಗೆ ಹೆಚ್ಚಿನ ಕರ ಕೊಡಕೂಡದೆಂದು ಉಪದೇಶ ಮಾಡುತ್ತಿರುವರು.

ಅಕ್ರಾಳ—ಮಹಾಪ್ರಭೋ, ಆಜ್ಞಾಭಂಗ ಮಾಡುತ್ತಿರುವವರಿಗೆ ಉತ್ತೇಜನ ಕೊಡುತ್ತಿರುವರು.

ಹಿರಣ್ಯ--ಎಲೋ, ಮದಾಂಧಾ, ರಾಜವಂಶದಲ್ಲಿ ಹುಟ್ಟಿ, ರಾಜರಿಗೆ ಕರ ಕೊಡಕೂಡದೆಂದು ಪ್ರಜರಿಗೆ ಉಪದೇಶಮಾಡುವದು ಅನ್ಯಾಯವಲ್ಲವೇ?

ಪ್ರಲ್ಹಾದ—ಹೊಟ್ಟೆಗಿಲ್ಲದೆ ಗೋಳಾಡುತ್ತಿರುವ ಬರಗಾಲದಲ್ಲಿ, ಪ್ರಜರ ತಲೆಯಮೇಲೆ ಹೆಚ್ಚಿನ ಕರಭಾರ ಹೇರುವದೆಂದರೆ, ತಂದೆಯು ಮಕ್ಕಳ ಕರುಳುಗಳನ್ನು ಹರಿದು ತಿಂದಷ್ಟೇ ಅನ್ಯಾಯವು. ರಾಜರು ಪ್ರಜರ ತಂದೆಯು. ಪ್ರಜರು ರಾಜರ ಮಕ್ಕಳು. ತಂದೆಯು ತನ್ನ ಧರ್ಮ, ಪ್ರಜರು ತಮ್ಮ ಮಕ್ಕಳ ಧರ್ಮ ಪಾಲಿಸಲಿಕ್ಕೆ ಬೇಕು. ದೇವರು ರಾಜದಂಡವನ್ನು ತಮ್ಮ ಕೈಯಲ್ಲಿ ಕೊಟ್ಟದ್ದು ಪ್ರಜರನ್ನು ಹರಿದು ತಿನ್ನಲಿಕ್ಕೇನೂ ಅಲ್ಲ. ನಿಮ್ಮ ಮಾನಕ್ಕಿಂತ, ನಿಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಅವರನ್ನು ಮಮತೆಯಿಂದ ರಕ್ಷಿಸುವದಕ್ಕಾಗಿ ಇದೆ. ರಾಜಧರ್ಮ ಪಾಲಿಸಿರಿ.

ಹಿರಣ್ಯ--ಧರ್ಮವು ನನಗೆ ಬೇಕಿಲ್ಲ.

ಪ್ರಲ್ಹಾದ—ಧರ್ಮವೇ ಜಗತ್ತಿಗೆ ತಾರಕ. ಅಧರ್ಮವೇ ಮಾರಕ. ತಂದೆಯವರೇ, ತಮ್ಮ ರಾಜ್ಯದಲ್ಲಿ ಧರ್ಮವಿಲ್ಲ, ಎಂದು ನಮ್ಮೆಲ್ಲರಿಗೆ ಉಡತೊಡಲು ಬಟ್ಟೆ, ಹೊಟ್ಟೆಗಾಗಿ ಅನ್ನ ಕೊಟ್ಟು ಸಲಹುವ ನಮ್ಮ ತಾಯಿಯೆಂದರೆ ಭೂಮಾತೆಯೇ ಸಾಕ್ಷಿಹೇಳುತ್ತಾಳೆ.

ಹಿರಣ್ಯ—ಹೀಗೆಂದರೇನೋ ಮೂರ್ಖಾ.

ಪ್ರಲ್ಹಾದ—ತಂದೆಯಲ್ಲಿಯ ತಂದೆಯ ಧರ್ಮ, ಮಕ್ಕಳಲ್ಲಿಯ ಮಕ್ಕಳ ಧರ್ಮ ಇಲ್ಲದಾಯಿತೆಂದರೆ, ಮನೆತನವು ತನ್ನ ಸಕಲ ವೈಭವಗಳನ್ನೆಲ್ಲ ಕಳೆದುಕೊಂಡು ಹಾಳಾಗಿ ಹೋಗುವಂತೆಯೇ, ಪ್ರಜಾಧರ್ಮವು ರಾಜಧರ್ಮವು ರಾಷ್ಟ್ರದಲ್ಲಿ ಇಲ್ಲದಾಯಿತೆಂದರೆ, ಆ ರಾಷ್ಟ್ರವು ತನ್ನ ಸಕಲ ವೈಭವಂಗಳನ್ನು ಹಾಳುಮಾಡಿಕೊಂಡು ಮಣ್ಣುಗೂಡಿ ಹೋಗುತ್ತದೆ. ಧರ್ಮವು ಇಲ್ಲದಾಯಿತೆಂದರೆ, ಭೂಮಿಯು ತನ್ನಲ್ಲಿ ಬೀಜ ಬಿತ್ತಿದ್ದನ್ನೆಲ್ಲ ತಾನೇ ನುಂಗಿಬಿಡುವಳು. ತಾವೂ ತಮ್ಮ ಪರಿವಾರದವರು ಹಾಗು ತಮ್ಮ ಪ್ರಜರೆಲ್ಲರು ಮರಣಕ್ಕಾಹುತಿಯಾಗುವ ಕಠಿಣ ಪರಿಸ್ಥಿತಿಯು ಬರುವದು.

ಹಿರಣ್ಯ—ಭೂದೇವಿಯು ನನ್ನ ಆಜ್ಞೆಯನ್ನು ಅಮಾನ್ಯ ಮಾಡಿದರೆ, ಅವಳನ್ನು ಸಮುದ್ರದಲ್ಲಿ ಮುಳುಗಿಸಿಬಿಡುವೆನು.

ಪ್ರಲ್ಹಾದ— ನನ್ನ ಕಕ್ಕನ ಅವಸ್ಥೆಯೂ ತಮಗೆ ಬಂದೀತು. ಭೂದೇವಿಗೆ ತಾವು ನಾಥರಲ್ಲ. ರಾಷ್ಟ್ರಪುರುಷನಾದ ನಾರಾಯಣನೇ ನಾಥನು. ಆ ರಾಷ್ಟ್ರಪುರುಷನು ಅನ್ಯಾಯಕ್ಕೆ ಅಧರ್ಮಕ್ಕೆ ಎಂದೂ ಒಲಿಯತಕ್ಕವನೇ ಅಲ್ಲ. ದುಷ್ಟರ ದುಷ್ಟಾನ್ನ ತಿಂದ ಮನುಷ್ಯನಲ್ಲಿ, ದುರ್ಬುದ್ಧಿಯು ಹುಟ್ಟುವದೆಂದೇ ರಾಜರು, ಧರ್ಮದ ಕಾಯಕದಿಂದ ಬಂದ ಪವಿತ್ರಾನ್ನವನ್ನು ಉಂಡು, ರಾಜ್ಯವನ್ನಾಳಬೇಕು. ರಾಜಧರ್ಮದಲ್ಲಿ ಹೇಳಿದಂತೆ, ಜಿಗುಳಿಯು ತಿಳಿಯದಹಾಗೆ ರಕ್ತಹೀರುವಂತೆ, ಜನರಿಂದ ಕರ ಹೀರಬೇಕು.

ಹಿರಣ್ಯ—ಧರ್ಮದ ಕಾಯಕವೆಂದರೇನೋ ಮೂರ್ಖಾ.

ಪ್ರಲ್ಹಾದ—ಪರರನ್ನುಕಾಡದೆ,ವ್ಯೆಬೆವರು ಹರಿಯುವಹಾಗೆ ದುಡಿಯುವವರ ಕಾಯಕದಿಂದ ಎಂದರೆ ನೂತಾಗಲಿ, ಬೇರೆ ವಿಧದ ಕಾಯಕಷ್ಟದಿಂದಾಗಲಿ ಸಂಪಾದಿಸಿದ ಪವಿತ್ರ ಹಣವನ್ನು ರಾಜರು ತಮ್ಮ ಕಾಣಿಕೆಗಾಗಿ ಪ್ರಜರಿಂದ ಸ್ವೀಕರಿಸಿ, ಆ ಹಣದಿಂದ ತಮ್ಮ ರಾಜ ಸುಖಭೋಗಿಸಬೇಕು. ಪರರನ್ನು ಪೀಡಿಸಿ, ವಂಚಿಸಿ ಸಂಪಾದಿಸಿದ ದುಷ್ಟಾನ್ನದಿಂದ ರಾಜರ, ರಾಜ್ಯಾಧಿಕಾರಿಗಳ ಬುದ್ಧಿಯು ಕೆಟ್ಟು ಹಾಳಾಗಿ ಹೋಗುವದು. ಧರ್ಮಕಾಯಕದಿಂದ ದೊರೆತ ಪವಿತ್ರಾನ್ನವು ರಾಜರಲ್ಲಿ ರಾಜ್ಯಾಧಿಕಾರಿಗಳಲ್ಲಿ ಸದ್ಬುದ್ಧಿಯನ್ನು ಹುಟ್ಟಿಸುವದು. ಮುಖ್ಯ ಸಾರಾಂಶವೇನಂದರೆ ರಾಜಧರ್ಮದಲ್ಲಿ ಹೇಳಿದ

ಹಾಗೆ ದೊರಕಿಸಿದ ಕರವು. ( ಎತ್ತಿದ ಕರವು ) ಪುಣ್ಯಕ್ಕೆ ಸಾಧನ. ಅಧರ್ಮದಿಂದ ಬರುವ ಕರವು ನರಕಕ್ಕೆ ಸಾಧನ.

ಹಿರಣ್ಯ—ಅರ್ಥವಿಲ್ಲದ ನಿನ್ನ ಉಪದೇಶವು ಸಾಕಿನ್ನು. ದೈತ್ಯಕುಲ ಕುಠಾರಾ, ನನ್ನ ರಾಜಾಜ್ಞೆಗೆ ಅಮಾನ್ಯಮಾಡಿದ ತಪ್ಪಿಗಾಗಿ ನೀನು ಕಾರಾಗೃಹದಲ್ಲಿಯು ಕಠಿಣ ಯಾತನೆಗಳನ್ನು ಅನುಭವಿಸಿದ್ದು ಸಾಕಾಗಲಿಲ್ಲವೇ ನಿನಗೆ.

ಪ್ರಲ್ಹಾದ——ನಾನೆಲ್ಲಿ ತಮ್ಮ ಆಜ್ಞಾಭಂಗ ಮಾಡುತ್ತಿರುವೆನು! ತಮ್ಮ ಆಜ್ಞೆಯು ಮಾನ್ಯವಿರಲಿ, ಅಮಾನ್ಯವಿರಲಿ ಆ ರಾಜಾಜ್ಞೆಗೆ ಮರ್ಯಾದೆ ಕೊಟ್ಟು ಕಠೋರಶಿಕ್ಷೆಯನ್ನು ಆನಂದದಿಂದ ಅತ್ಯಾನಂದದಿಂದ ಅನುಭವಿಸುವದರಲ್ಲಿಯೇ ಸರ್ವ ಜಗತ್ತಿಗೆ ಕಲ್ಯಾಣ ವಾಗುವದೆಂದು ನಾನು ಸಂಪೂರ್ಣ ನಂಬಿದ್ದೇನೆ.

ಹಿರಣ್ಯ——ಇಷ್ಟು ಸೊಕ್ಕಲ್ಲವೇ ನಿನಗೆ. ದೈತ್ಯಕುಲ ಕುಠಾರಾ, ಹಾಗೇ ಆಗಲಿ. ಶಾಸನವನ್ನೇ ಅನುಭವಿಸು. ನಿನ್ನಂಥ ಕುಲಕಂಟಕನು ಜೀವಿಸಿ ನಮ್ಮ ದೈತ್ಯಕುಲಕ್ಕೆ ರಾಜನಾಗುವದಕ್ಕಿಂತ ನಿನ್ನ ನಾಶದಿಂದಲೇ ನಮ್ಮ ವಂಶಕ್ಕೆ ಹೆಚ್ಚು ಕಲ್ಯಾಣವಾಗುವದು. ರಾಕ್ಷಸವೀರರೇ, ಪ್ರಲ್ಹಾದನ ಆಜ್ಞೆಯಂತೆ ನಡೆದು, ನನ್ನ ರಾಜಾಜ್ಞೆಗೆ ಅಮಾನ್ಯಮಾಡಿದ ಒಕ್ಕಲಿಗರ ಗುಡಿಸಲಗಳಿಗೆ ಬೆಂಕಿ ಹಚ್ಚಿರಿ. ಅವರ ಸಂಪತ್ತನ್ನೆಲ್ಲ ನಮ್ಮ ಭಾಂಡಾರ ಖಾನೆಗೆ ಜಮೆಮಾಡರಿ. ಹೊಲಗಳನ್ನು ಕಸೆದುಕೊಳ್ಳಿರಿ. ಈ ಮೂರ್ಖನು ಕೂಳಿಲ್ಲದೆ ಕಾಡು ಕಾಡು ಸುತ್ತಿ ಅಲ್ಲಿಯೇ ಸತ್ತುಹೋಗಲಿ.

ಪ್ರಲ್ಹಾದ——ನಾನು ಕೂಳಿಲ್ಲದೆ ಕಾಡಿನಲ್ಲಿ ಸಾಯಲು ಸಿದ್ಧನೇ ಇದ್ದೇನೆ. ತಾತಾ, ಒಕ್ಕಲಿಗರು ನಿರಪರಾಧಿಗಳು. ವಿಶ್ವದ ದೃಷ್ಟಿಯಿಂದ, ಧರ್ಮದ ದೃಷ್ಟಿಯಿಂದ ನಿರಪರಾಧಿಯಾದ ನಾನೇ ತಮ್ಮ ದೃಷ್ಟಿಯಿಂದ ಮಹಾಪರಾಧಿಯಾಗಿದ್ದೇನೆ. ನನ್ನನ್ನು ಶೂಲದ ಬಾಯಿಗೆ ಕೊಟ್ಟಾಗಲಿ, ಮಣ್ಣಿನಲ್ಲಿ ಹುಗಿಸಿಯಾಗಲಿ, ಎಣ್ಣೆಯಲ್ಲಿ ಕರಿಸಿಯಾಗಲಿ, ತಮ್ಮ ಮನಸ್ಸಿಗೆ ಬಂದ ಕಠಿಣಯಾತನೆಗಳನ್ನು ಕೊಟ್ಟಾಗಲಿ ನನ್ನನ್ನು ಕೊಲ್ಲಿಸಿರಿ. ಅಪರಾಧಿಗೆ ಆಗುವಶಿಕ್ಷೆಯು ನಿರಪರಾಧಿಗಳಿಗೇಕೆ?

ಹಿರಣ್ಯ—ನಾನೇನು ನಿನ್ನಮಾತು ಕೇಳತಕ್ಕವನಲ್ಲ. ರಾಕ್ಷಸಕುಲ ಕಲಂಕಾ, ಹಾಗೆಮಾಡಿರಿ ಹೀಗೆಮಾಡಿರಿ ಎಂದು ದೇವದೇವನಾದ ನನಗೆ ಆಜ್ಞೆ

ಮಾಡಲಿಕ್ಕೆ ನಿನಗೇನು ಅಧಿಕಾರವಿದೆ?

ಪ್ರಲ್ಹಾದ— ತಾವು ನನ್ನ ವಿನಂತಿಗೆ ಮಾನಕೊಡಬೇಕೆಂದು ನಾನೇನು ಹೇಳುವದಿಲ್ಲ.

ಹಿರಣ್ಯ—ಮೂರ್ಖ, ಶತಮೂರ್ಖ, ನನ್ನ ರಾಜಾಜ್ಞೆಗೆ ಅವು ರ್ಯಾದೆ ಮಾಡಿ ಒಕ್ಕಲಿಗರನ್ನು ದುರ್ಮಾರ್ಗಕ್ಕೆ ಹಚ್ಚಿದ್ದು ಅನ್ಯಾಯದ ಪರ ಮಾವಧಿಯಲ್ಲವೆ?

ಪ್ರಲ್ಹಾದ—ವೇಳೆ ವೇಳೆಗೆ ಮಳೆ ಬೆಳೆಕೊಟ್ಟು ಸರ್ವಪ್ರಾಣಿಗಳನ್ನು ಸದಾಸರ್ವದಾ ಕರುಣೆಯಿಂದ ಕಾಯುವ ಸಮ್ರಾಟರ ಸಮ್ರಾಟನಾದ ದೇವ ದೇವನ ಪ್ರೀತಿಗಾಗಿ ಪ್ರಜ-ರಾಜರಿಬ್ಬರಿಗೂ ಧರ್ಮೋಪದೇಶ ಮಾಡುವದು ಪಾಪವೆ?

ಹಿರಣ್ಯ—ಎಲ್ಲಿಯ ಪಾಪ, ಎಲ್ಲಿಯದೇವ, ನಾನೇದೇವ ದೇವ. ನನ್ನ ಆಜ್ಞೆಗೆ ಅಮರ್ಯಾದೆ ಮಾಡಿದವರ ನಾಶವಾಯಿತೆಂದೇ ತಿಳಿ.

ಪ್ರಲ್ಹಾದ—ದೇವರಾಜ್ಞೆಯ ಮೇರೆಗೆ ದುಷ್ಟರ ನಾಶಕ್ಕೆ ಶಿಷ್ಟರ ರಕ್ಷಣೆಗೆ ಕೈಯಲ್ಲಿ ರಾಜದಂಡ ಹಿಡಿದ ರಾಜರು, ಸಮ್ರಾಟರು, ಅವರ ಕೈಕೆಳಗಿನ ಅಧಿಕಾರಿಗಳು ಸ್ವಸುಖಸಾಧನೆಯ ವಿಲಾಸಕ್ಕಾಗಿ ಧರ್ಮಕ್ಕೆ ಅಮರ್ಯಾದೆ ಮಾಡುತ್ತ ನ್ಯಾಯನೀತಿಗಳನ್ನು ಮೂಲೆಗೊತ್ತಿ, ತಮ್ಮ ಹಟನಡಿಸುವದಕ್ಕೆ ಅನ್ಯಾಯದ ಅಧರ್ಮದ ಆಜ್ಞೆಗಳನ್ನು ಹೊರಡಿಸಿ, ಪ್ರಜರನ್ನು ನಾನಾ ಬಗೆಯಿಂದ ಹಿಂಸಿಸುವದು ರಾಜಧರ್ಮವೇ ಅಲ್ಲ.

ಹಿರಣ್ಯ— ಆ ಹಾಳು ಧರ್ಮದ ಗೊಡವೆಯು ನನಗೆ ಬೇಡವೇ ಬೇಡ.

ಪ್ರಲ್ಹಾದ—ಹಾಗೆನ್ನಬೇಡರಿ. ಮಹಾರಾಜ, ಧರ್ಮವೇ ಜಗತ್ತಿನ ಪ್ರಾಣ. ರಾಜಧರ್ಮ ತಪ್ಪಿನಡೆಯುವ ರಾಜರ ಅರಮನೆಗಳು ನೆಲಸಮವಾಗುವವು; ರಾಜಸಿಂಹಾಸನಗಳು ಒಡೆದು ಪುಡಿ ಪುಡಿ ಆಗುವವು; ಆ ರಾಜವಂಶವು ರಕ್ತದ ಮಡುವಿನಲ್ಲಿ ಮುಳುಗುವದು. ಸಾರಾಂಶ ರಾಜ್ಯವನ್ನು ಪ್ರಜರೂ ಆಳುವದಿಲ್ಲ; ರಾಜರೂ ಆಳುವದಿಲ್ಲ. ಧರ್ಮವೇ ಎಲ್ಲರನ್ನು ಆಳುವ ಅರಸು. ದೇವರು ಧರ್ಮಮಯನು, ಧರ್ಮಸ್ಥಾಪನೆಗಾಗಿಯೇ ದೇವರ ಅವತಾರವು ಪ್ರತಿಯುಗದಲ್ಲಿ ಆಗುತ್ತದೆ. ಧರ್ಮದಾಜ್ಞೆಮೀರಿನಡೆದ ಪ್ರಜರಾಜರೀರ್ವರೂ ತಮ್ಮ ತಮ್ಮ ತಪ್ಪಿಗಾಗಿ ಅನಂತಕಾಲ ನರಕವಾಸದುಃಖ ಅನುಭವಿಸ ಬೇಕಾ

ಗುವದು.

ಹಿರಣ್ಯ—ಸಾಕು; ಸಾಕು. ಮಾತಿಗೊಮ್ಮೆ ಧರ್ಮ ಧರ್ಮ ಎಂದು ಎನ್ನುವ ನಿನ್ನ ಮಾತು ಕೇಳುವದೇ ಬೇಡ. ನಾನೇ ನರಕಾಧಿಪತಿಯಾಗಿರುವಾಗ ನನ್ನನ್ನು ಅದಾವ ಅಧಮಾಧಮನು ನರಕಕುಂಡದಲ್ಲಿ ದಬ್ಬುವನು? ಸಕಲ ಸಂಪತ್ತುಗಳ ಸುಖಭೋಗಗಳನ್ನು ಸವಿಸವಿದು ಆನಂದ ಬಡಬೇಕೆಂಬ ಇಚ್ಛೆಯಿದ್ದವರು ನನ್ನ ಆರಾಧನೆಯನ್ನೇ ಮಾಡಬೇಕು. ನಾನೆಂದರೆ ಯಾರೆಂದು ತಿಳಿದಿರುವೆ?

ಪ್ರಲ್ಹಾದ—ಲೋಕವನ್ನು ಮುರಿದು ನುಂಗುವ ರಾಕ್ಷಸನೆಂದು.

ಹಿರಣ್ಯ—ನಾನು ರಾಕ್ಷಸನೆ?

ಪ್ರಲ್ಹಾದ—ಅಲ್ಲ; ಮರತೆ. ತಾವು ರಾಕ್ಷಸಾಧಿಪರು.

ಹಿರಣ್ಯ—ರಾಕ್ಷಸಾಧಿಪನು ಇಷ್ಟೇ ಅಲ್ಲ. ತ್ರಿಲೋಕಾಧಿಪನು, ಸ್ವರ್ಗಾಧಿಪನು, ದೇವಾಧಿಪನು, ದೇವದೇವನು ಕೂಡ ನಾನೇ ಆಗಿರುವೆನು. ನನ್ನ ರಾಜ್ಯದಲ್ಲಿ ಬೆಳೆಗಳು ಬಿತ್ತದೆ ಬರುವವು. ಸಮುದ್ರರಾಜನು ತನ್ನಲ್ಲಿರುವ ಅಮೌಲ್ಯ ರತ್ನ-ಮುತ್ತು-ಹರಳುಗಳನ್ನು ತಾನೇ ತಂದು ನನ್ನ ಪಾದಕ್ಕೆ ಅರ್ಪಿಸುತ್ತಿರುವನು. ರಣರಂಗದಲ್ಲಿ ಯುದ್ಧಮಾಡುತ್ತಿರುವ ಮದೋನ್ಮತ್ತರಾದ ವೀರಾಧಿವೀರರು ನನ್ನ ಹೆಸರನ್ನು ಕೇಳಿದಾಕ್ಷಣವೇ ರಣಭೂಮಿಯಿಂದ ಓಡಿಹೋಗುವರು. ಹಲಕೆಲವರು ನನ್ನ ಬಾಯಗದ್ದರಿಕೆಗೆ ಬೆದರಿ ತಮ್ಮ ರಾಜ್ಯಗಳನ್ನು ನನಗೊಪ್ಪಿಸಿ, ಶರಣಾಗತರಾಗುವರು. ನನ್ನ ಒಂದೇ ಒಂದು ವೀರಗರ್ಜನೆಗೆ ಕೈಲಾಸ ವೈಕುಂಠಾದಿ ಸತ್ಯಲೋಕಗಳು ಗದಗದ ನಡುಗುವವು. ಸೂರ್ಯ ಚಂದ್ರರು ಅಂಬರದಿಂದ ಕಳಚಿ ಬೀಳುವರು. ನನ್ನ ಕೋಪಾತಿರೇಕದಿಂದ ಈ ಕಣ್ಣುಗಳಿಂದ ಹೊರಡುವ ಒಂದೇ ಒಂದು ಕಿಡಿಯು ಸರ್ವಜಗತ್ತುಗಳನ್ನು ಸುಟ್ಟು ಬೂದಿಮಾಡಿ ಹಾರಿಸಲು ಅಮೋಘಶಕ್ತಿಯುಳ್ಳದ್ದು ಇದೆ. ಮೃತ್ಯು ದೇವತೆಯು ನನಗೆ ಹೆದರಿ ಓಡಿಹೋಗುವಳು. ದಿಕ್ಪಾಲಕರು ಪಂಚಮಹಾಭೂತಗಳು ನನ್ನ ದಾಸರು. ಲಕ್ಷ್ಮೀ ಸರಸ್ವತಿ ಅನ್ನಪೂರ್ಣೆಯರು ನನ್ನ ಮನೆಯ ತೊತ್ತುಗಳು. ಸೌದಾಮಿನಿಯು ರಾತ್ರಿಯಲ್ಲಿ ದೀವಟಿಗೆಯನ್ನು ಹಿಡಿಯುವವಳು. ಇಂಥ ಬಲಾಢ್ಯ ದೇವದೇವನಾದ ನಾನು ಜೀವಂತ ಇರಲಿಕ್ಕೆ ನನ್ನೆದುರಿಗೆ ನನ್ನನ್ನು ಬಿಟ್ಟು ನನ್ನ ಕುಲವೈರಿಯ ಧ್ಯಾನಮಾ

ಡೆಂದು ಜಗತ್ತಿಗೆಲ್ಲ ಬುದ್ಧಿ ಹೇಳುವದಕ್ಕೆ ನಿನಗಾವ ನೀಚಾತ್ಮನು ಹೇಳಿದ್ದಾನೆ?

ಪ್ರಲ್ಹಾದ—ಹೀಗೆ ಹೇಳಿದವರು ನೀಚಾತ್ಮರಲ್ಲ.

ಹಿರಣ್ಯ—ಹಾಗಾದರೆ ಅವರಾರು ಬೊಗಳು?

ಪ್ರಲ್ಹಾದ—ಸಂಪತ್ತಿನ ಬಲವಿದೆ, ತಪದ ಬಲವಿದೆ, ಸೇನೆಯ ಬಲವಿದೆ, ರಾಜಸಿಂಹಾಸನದ ಬಲವಿದೆ ಎಂಬ ಸೊಕ್ಕಿನಿಂದ ರಾಜಧರ್ಮವನ್ನು ಕಾಲಿನಿಂದ ತುಳಿಯುತ್ತ ತಾನೇ ಲೋಕಾಧಿಪತಿ, ದೇವಾಧಿದೇವ ಎನ್ನುತ್ತ ಸ್ವಾರ್ಥಕ್ಕಾಗಿ ಕೇವಲ ತಮ್ಮವರ ಹಿತಕ್ಕಾಗಿ ಸರ್ವಜಗತ್ತಿನ ಪ್ರಭುವಾಗಲು ವರಪಡೆದ ರಾಜಪಿಶಾಚಿಯ ನಾಶಕ್ಕೆ ಹಿಂಸಾಮಯ ಶಸ್ತ್ರಗಳು ಬೇಡ ಅಹಿಂಸಾಮಯ ಶಾಂತಿ ಶಸ್ತ್ರವು ಒಂದೇ ಸಾಕು. ಎಂದು ನನ್ನ ಗುರುಗಳು ಹೇಳಿದ್ದಾರೆ.

ಹಿರಣ್ಯ— ನಾನೇ ಗುರುಗಳ ಗುರು; ಮಹಾತ್ಮರ ಮಹಾತ್ಮನು. ಸರ್ವ ಜಗತ್ತುಗಳು ತ್ರಿಮೂರ್ತಿಗಳನ್ನು ಪೂಜಿಸುವದು ಬಿಟ್ಟುಕೊಟ್ಟು ನನ್ನನ್ನು ಪೂಜಿಸಬೇಕು. ಯಜ್ಞಯಾಗಾದಿಗಳಲ್ಲಿ ದೇವತೆಗಳಿಗೆ ಮುಟ್ಟಿಸುವ ಹವಿರ್ಭಾಗಗಳನ್ನು ನನಗೇನೇ ಮುಟ್ಟಿಸಬೇಕು. ನನ್ನ ಗುಣಗಾನ ಮಾಡಬೇಕು. ತಿಳಿಯಿತೆ.

ಪ್ರಲ್ಹಾದ—ನಾನೆಲ್ಲವನ್ನೂ ತಿಳಿದುಕೊಂಡಿದ್ದೇನೆ.

ಹಿರಣ್ಯ—ಏನೆಂದು ತಿಳಿದುಕೊಂಡಿರುವೆ?

ಪ್ರಲ್ಹಾದ—ತಮಗೆ ಅಜೇಯ ಅಜರಾಮರ ಪದಕೊಟ್ಟ ಸಮ್ರಾಟ ಪದ ಕೊಟ್ಟವನೊಬ್ಬ ಜಗದ್ವಂದ್ಯ ಸಮ್ರಾಟನಿದ್ದಾನೆಂದು.

ಹಿರಣ್ಯ—ಆ ಸಮ್ರಾಟನಾರು?

ಪ್ರಲ್ಹಾದ—ಆ ಸಮ್ರಾಟನೇ (ಶ್ರೀಮನ್ನಾರಂಯಣನು.)

ಹಿರಣ್ಯ—ಹುಚ್ಚುಚ್ಚು ಮಾತನಾಡಬೇಡ. ನಾನೇ ಆ ಸಾಮ್ರಾಟನು. ನನ್ನ ಮೇಲೆ ಸಾಮ್ರಾಟರೇ ಇಲ್ಲ. ಅಕ್ರಾಳಾ, ಮತ್ತೆ ಈ ಮೂರ್ಖನನ್ನು ಭದ್ರವಾದ ಕಾವಲದಲ್ಲಿ ಒಯ್ದಿಡು.

ಪ್ರಲ್ಹಾದ—ಅವನೇಕೆ ನಾನೇ ಶರೆಮನೆಗೆ ಹೋಗುವೆನು. ನಿರಪರಾಧಿಗಳ ಛಲನೆಯಿಂದ ಹಿರಿ ಹಿರಿ ಹಿಗ್ಗುವ ಅಧರ್ಮದಿಂದ ಹಣಸಂಪಾದಿಸಿ ವಿಲಾಸಾದಿಸುಖಗಳಲ್ಲಿ ಆನಂದಪಡುವ ದುಷ್ಟರಾಜರ, ದುಷ್ಟ ಸಮ್ರಾಟರ ನರಕ

ಮುಯ ಅನ್ನ ತಿಂದು, ಅರಮನೆಯಲ್ಲಿ ಇರುವದಕ್ಕಿಂತ, ಶರೆಮನೆಯಲ್ಲಿ ಕಷ್ಟಕ್ಕೀಡಾಗಿ, ಯೋಗಿಯಂತೆ ದೇಹಸವಿಸುತ್ತ, ಶ್ರೀಹರಿ ಧ್ಯಾನಮಾಡುತ್ತ, ಅಲ್ಲಿಯ ಅಮೃತಾನ್ನ ಸೇವಿಸಿ ಪಾವನವಾಗುವದೇ ನನಗೆ ಹೆಚ್ಚು ಸುಖದಾಯಕ ಹಾಗು ಹಿತದಾಯಕ ಆಗಿದೆ. ನಿನ್ನ ಅರಮನೆಯೇ ನನಗೆ ಶರೆಮನೆಯು. ನನಗೆ ಶರೆಮನೆಯೇ ಅರಮನೆಯು ಹರಿಮನೆಯು .

ಹಿರಣ್ಯ—ನಿನ್ನಂಥ ಮೂರ್ಖನೊಡನೆ ವಾದ ವಿವಾದ ಮಾಡುವಲ್ಲಿ ಅರ್ಥವಿಲ್ಲ. ತಥ್ಯಾಂಶವೂ ಇಲ್ಲ. ಆಕ್ರಾಳಾ, ವಿಕ್ರಾಳಾ ನನ್ನ ಆಜ್ಞಾಭಂಗ ಮಾಡಿದ ಒಕ್ಕಲಿಗರ ಎದೆಗಳಲ್ಲಿ ಶೂಲಗಳನ್ನು ಚುಚ್ಚಿರಿ. ಅವರ ರಕ್ತದಿಂದಲೇ ನನಗೆ ಅಭಿಷೇಕ ಮಾಡಿರಿ ಅಭಿಷೇಕ.

ಪ್ರಲ್ಹಾದ—ಬೇಡ, ಬೇಡ. ತಾತಾ, ಕೈಮುಗಿದು, ಕಾಲಿಗೆಬಿದ್ದು ಹೇಳಿಕೊಳ್ಳುವೆನು. ನಿಮ್ಮ ಸರ್ವನಾಶಕ್ಕೆ ಕಾರಣವಾಗುವ ಪಾಪಕಾರ್ಯ ಮಾತ್ರ ಮಾಡಬೇಡಿ.

ಹಿರಣ್ಯ—ನಾನು ಮಾಡುತ್ತಿರುವದು ಪಾಪಕಾರ್ಯವೆ?

ಪ್ರಲ್ಹಾದ— ಅದರಲ್ಲಿ ಸಂಶಯವೇ ಇಲ್ಲ. ಮಾತೃವಧಮಾಡಿದವರಿಗೆ, ಪಿತೃವಧಮಾಡಿದವರಿಗೆ, ದೇವದ್ರೋಹಮಾಡಿದವರಿಗೆ ಆ ಆ ಪಾಪಗಳನ್ನು ತೊಳೆದು ಬಿಡುವಂಥ ಪ್ರಾಯಶ್ಚಿತ್ತಗಳುಂಟು. ಆದರೆ ಒಕ್ಕಲಿಗರ ಅರ್ಥಾತ್ ಮಣ್ಣಿನಯೋಗಿಗಳನ್ನು ಅನ್ನದೇವರನ್ನು ಹಿಂಶಿಸಿ, ಹಿಂಶಿಸಿ ಅವರ ಕಣ್ಣೀರನ್ನುದರಿಸಲು ಕಾರಣರಾದ ಪಾಪಾತ್ಮರ ಪಾಪಗಳನ್ನು ತೊಳೆಯುವ ಪ್ರಾಯಶ್ಚಿತ್ತಗಳು ಯಾವದೇಶದ ಇತಿಹಾಸದಲ್ಲಿಯೂ ಸಿಕ್ಕುವದಿಲ್ಲ.

ಹಿರಣ್ಯ—ಒಕ್ಕಲಿಗರು ದೇವರೇ?

ಪ್ರಲ್ಹಾದ—ನಿಸ್ಸಂಶಯವಾಗಿ. ಹೊಲಗಳಲ್ಲಿಯೇ ಜೀವಿಸುವ, ಅಲ್ಲಿಯೇ ದುಡಿದುಡಿದು ಸಣ್ಣಾಗುವ, ಪರೋಪಕಾರಕ್ಕಾಗಿ ದೇಹಸವಿಸುವ ಮಣ್ಣಿನ ಯೋಗಿಗಳು ಅರ್ಥಾತ್ ಒಕ್ಕಲಿಗರು ನಾಡಿನಲ್ಲಿ ಒಕ್ಕಲಾಗಿರುವರೆಂದೇ, ಇರುವೆ ಆದಿಯಾಗಿ ಕ್ಷುಲ್ಲಕ ಪ್ರಾಣಿಗಳಿಂದ ಸಮ್ರಾಟ ಪದ, ಯೋಗಿಪದ, ದೇವಪದ ಈ ಎಲ್ಲ ಪದಗಳಲ್ಲಿರುವವರಿಗೆಲ್ಲ ಅನ್ನದಾನ ಮಾಡುವರೆಂದೇ, ಆ ಅನ್ನದೇವರ ಅನ್ನದಿಂದಾದ ರಕ್ತವು ಪ್ರತಿಯೊಂದು ಪ್ರಾಣಿಯ ರಕ್ತವಾಹಿನಿಯಲ್ಲಿ ಹರಿಯುತ್ತಿರುವದೆಂದೇ ರಾಜರು ವೈಭವದಿಂದ ಮೆರೆಯುವರು. ಸಂಸಾರಿ

ಕರು ಆನಂದದಿಂದ ಸಂಸಾರಮಾಡಿಕೊಂಡು ಇರುವರು. ಪ್ರಾಣಿಗಳು ಉಸಿರಾಡಿಸುವದು ಕೂಡ ಅನ್ನದೇವರ ಪುಣ್ಯದಿಂದಲೆ ಎಂದು ತಿಳಿಯಿರಿ. ಒಕ್ಕಲಿಗರ ನಾಶವೆಂದರೆ ಸರ್ವರ ನಾಶ, ಸರ್ವಜಗತ್ತುಗಳ ನಾಶ.

ಹಿರಣ್ಯ —ಸುಳ್ಳು ಸುಳ್ಳು. ನೀನು ಖಂಡಿತವಾಗಿಯೂ ಸುಳ್ಳು ಹೇಳುತ್ತಿರುವೆ.

ಪ್ರಲ್ಹಾದ—ನಾನೆಂದೂ ಸುಳ್ಳಾಡತಕ್ಕವನಲ್ಲ. ಗೋವುಗಳಲ್ಲಿ ಪರೋಪಕಾರಾರ್ಥವಾಗಿ ದೇಹಸವಿಸುವ ಮಹಾತ್ಮರಲ್ಲಿ, ವಿಪ್ರರಲ್ಲಿ, ಭಕ್ತರಲ್ಲಿ, ಅನ್ನದೇವರಲ್ಲಿ ದ್ವೇಷಮಾಡುವ ನೀಚಾತ್ಮರಾದ ರಾಜಾಧಿರಾಜರ ಸಿಂಹಾಸನವು ಎಷ್ಟೇ ಭದ್ರವಾಗಿದ್ದರೂ, ಅದರ ನಾಶವು ತೀವ್ರವೇ ಆಗುವದೆಂದು ವೇದವಾಣಿಯು, ದೇವವಾಣಿಯು ಹೇಳುತ್ತದೆ.

ಹಿರಣ್ಯ—ದೇವ ದೇವನಾದ ನನ್ನ ದೇವವಾಣಿಯ ಮುಂದೆ ವೇದವಾಣಿಯ ಆಟವು ಯಾರ ಆಟವೂ ನಡೆಯುವಹಾಗೆಯೇ ಇಲ್ಲ. ಅನ್ನದೇವರ ನಾಶಮಾಡಿಯೇ ಬಿಡುವೆನು.

ಪ್ರಲ್ಹಾದ—ಅನ್ನದೇವರನಾಶಮಾಡುವವರು, ಯಾಲೇ ಇರಲಿ, ಆ ಚಾಂಡಾಲರು ಅನ್ನವಿಲ್ಲದೆ ಮಣ್ಣುಗೂಡಿ ಹೋಗುವದೇ ಖಂಡಿತ. ರಾಜರು ಅನ್ನದೇವರ ಮನೆಗಳನ್ನು ಸುಲಿಯುವದೆಂದರೆ, ತಮ್ಮ ಅರಮನೆಗಳನ್ನು ತಾವೇ ಸುಲಿದುಕೊಂಡಂತೆ, ಅವರ ರಕ್ತಸುರಿಸುವದೆಂದರೆ ತಮ್ಮ ರಕ್ತ ತಾವೇ ಸುರಿಸಿಕೊಂಡಂತೆ, ಅವರನ್ನು ಕೊಲ್ಲುವದೆಂದರೆ ತಾವೇ ತಮ್ಮ ಕೊಲೆ ಮಾಡಿಕೊಂಡಂತೆ. ತಾತಾ, ಒಕ್ಕಲಿಗರು ದರಿದ್ರರಲ್ಲ, ಜಗತ್ತಿಗೆ ಅನ್ನದಾನ ಮಾಡುವ ತಾಯಿತಂದೆಗಳು, ಅನ್ನದೇವರು ಎಂದು ತಿಳಿದುಕೊಳ್ಳಿ.

ಹಿರಣ್ಯ—ಸಾಕುಮಾಡು, ಇಷ್ಟಕ್ಕೆ ಸಾಕುಮಾಡು. ಮೊನ್ನೆ ಮೊನ್ನೆ ಹುಟ್ಟಿ ಇಂದುಕಣ್ಣುತೆಗೆದ ನಿನಗೆ ನನ್ನಂಥ ಜಗದ್ವಂದ್ಯ ಅಜರಾಮರ ಸಮ್ರಾಟನಿಗೆ ಬುದ್ಧಿಹೇಳುವ ಅಧಿಕಾರವು ಇಲ್ಲವೇ ಇಲ್ಲ. ನಾನು ಹೇಳಿದಂತೆ ಕೇಳಿಕೊಂಡು, ರಾಜಸುಖಗಳನ್ನು ಭೋಗಿಸುವೆಯೋ? ರಾಜ್ಯವೈಭವಗಳನ್ನೆಲ್ಲ ನನಗೊಪ್ಪಿಸಿ, ಕಾಡಿಗೆ ಹೋಗುವೆಯೋ?

ಪ್ರಲ್ಹಾದ—ಪರಪೀಡೆಯಲ್ಲಿಯೇ ಪರಮಾನಂದಬಡುವ ಹಿಂಸಾಮಯ ಸಮ್ರಾಟ ಪಿಶಾಚಿಯ ಅಪವಿತ್ರ ಸಿಂಹಾಸನದ ಮೇಲೆ ಕುಳಿತು ಮೆರೆಯುವ

ಸಮ್ರಾಟನಾಗುವದಕ್ಕಿಂತ ಪರೋಪಕಾರಕ್ಕಾಗಿ ಜಗತ್ತಿನ ಹಿತಕ್ಕಾಗಿ ಇದ್ದವೈಭವಂಗಳನ್ನೆಲ್ಲ ಕಳೆದುಕೊಂಡು ತಿರಿದುಣ್ಣುವ ತಿರುಕರ ಧೊರೆಯು ಅರ್ಥಾತ್ ಮಹಾತ್ಮರ ಪರಮ ಪವಿತ್ರಪಾದದ ಪಾದರಕ್ಷೆಯಾಗುವಲ್ಲಿಯೂ, ಕಾಡಿನಲ್ಲಿಯ ಹರಿರಾಜ್ಯದಲ್ಲಿ ಹರಿ ಹರಿ ಎಂದೆನ್ನುತ್ತ ಆತನ ಗುಣಗಾನಮಾಡುವಲ್ಲಿಯೂ, ನನಗೆ ಹೆಚ್ಚಿನ ಪರಮಾನಂದವೆನಿಸುವದು. ರಾಜ್ಯವೈಭವಗಳು ನನಗೆ ಬೇಡವೇ ಬೇಡ. ತೆಗೆದುಕೊಳ್ಳಿ ನಿಮ್ಮ ರಾಜ ಉಡಿಗೆತೊಡಿಗೆಗಳನ್ನು. (ಉಡಿಗೆ ತೊಡಿಗೆಗಳನ್ನು ತೆಗೆಯುವದಾದಮೇಲೆ ಒಕ್ಕಲಿಗನ ಹುಡುಗನು ಉರುಟು ಬಟ್ಟೆಗಳನ್ನು ತಂದುಕೊಡುವನು.) ಅನ್ನದೇವರ ಹೆಂಡಂದಿರು ಅರ್ಥಾತ್ ಭೂದೇವತೆಯರು ತಮ್ಮ ಪರಮ ಪವಿತ್ರ ಕರದಿಂದ ನೂತು, ನೇದುಕೊಟ್ಟ ಈ ಉರಟುಬಟ್ಟೆಗಳೇ ನನ್ನ ವೈಭವ, ರಾಜವೈಭವ. ಅವರು ಉಣ್ಣುವ ನುಚ್ಚೇ ನನಗೆ ಪರಮಾನ್ನ, ಪರಮಾತ್ಮನ ಪ್ರಸಾದ. [ಬಟ್ಟೆ ಹಾಕಿಕೊಂಡು] ತಾತಾ, ನನ್ನ ಮಾತನ್ನು.

ಹಿರಣ್ಯ—ಕೇಳಿನು. ಇಷ್ಟಕ್ಕೇ ಸಾಕು. ನಿನ್ನ ಮರ್ಮಭೇದಕ ಮಾತನ್ನು ಕೇಳುವದೂ ಬೇಡ; ನಿನ್ನ ಅಮಂಗಲ ಮುಖ ನೋಡುವದೂ ಬೇಡ. ನೀನು ನನ್ನ ಕುಲತಾರಕನಲ್ಲ; ಕುಲಮಾರಕನು. ನಿನ್ನ ನಾಶದಿಂದಲೇ ನಮ್ಮ ದೈತ್ಯಕುಲಕ್ಕೆ ಕಲ್ಯಾಣವಾಗುವದು. ಅಕ್ರಾಳಾ-ವಿಕ್ರಾಳಾ, ನನ್ನ ಆಜ್ಞೆಗೆ ಅಪಮಾನಮಾಡಿದ ಒಕ್ಕಲಿಗರ ಗುಡಿಸಲುಗಳಿಗೆ ಬೆಂಕೆಹಚ್ಚಿರಿ. ಧಗಧಗ ಉರಿಯುವ ಉರಿಯಲ್ಲಿ ಈ ಪಾಪಾತ್ಮನನ್ನು ಎತ್ತಿ ಒಗೆಯಿರಿ. ಈ ಕಾರ್ಯವೆಲ್ಲವೂ ನನ್ನ ಕಣ್ಣೆದುರಿನಲ್ಲಿಯೇ ನಡೆಯಲಿ. ಇನ್ನೇಕೆ ವಿಲಂಬ. ನನ್ನ ಆಜ್ಞೆಯಂತೆ ನಡೆಯಿರಿ.

ಅಕ್ರಳ—ವಿಕ್ರಾಳ—ನಡೆಯುವೆವು. [ಗುಡಿಸಲುಗಳಿಗೆ ಬೆಂಕಿ ಹಚ್ಚಿ, ಧಗ ಧಗ ಉರಿಯುವ ಉರಿಯಲ್ಲಿ ಪ್ರಲ್ಹಾದನನ್ನು ಒಗೆಯುವರು. ಅವನು ಶ್ರೀ ಹರಿನಾರಾಯಣ ಹರಿನಾರಾಯಣ ಎನ್ನುತ್ತ ಅಗ್ನಿಮಧ್ಯದಲ್ಲಿ ಕುಣಿಯುತ್ತಿರುವನು.]

ಭಸ್ಮೀಭೂತನಾಗಿ ಹೋಗಿದ್ದಾನೆ.

ಅಕ್ರಾಳ—ಭಸ್ಮೀಭೂತನಾಗಿಲ್ಲ. ನಮ್ಮ ದೈತ್ಯ ಕುಲವನ್ನೇ ನುಂಗಿ ನೀರು ಕುಡಿಯುವ ಮಹಾ ಭೂತನಾಗಿದ್ದಾನೆ ಮಹಾಭೂತ.

ವಿಕ್ರಾಳ—ಹೀಗೆಂದರೇನಯ್ಯಾ, ಸ್ಪಷ್ಟವಾಗಿ ಹೇಳು.

ಅಕ್ರಾಳ—ಉರಿಯು ಅವನನ್ನು ಸುಡಲಿಲ್ಲ. ಉರಿಯು ದಗದಗ ಉರಿಯುತ್ತಿರುವಾಗ, ಆ ಅಧಮನು ಉರಿಯ ಮಧ್ಯದಲ್ಲಿ ಥೈ ಥೈ ತಕ ಥೈ ಎಂದು ಕುಣಿಯುತ್ತ ನಮ್ಮ ಕುಲವೈರಿಯ ಧ್ಯಾನಮಾಡುತ್ತಿದ್ದನು.

ವಿಕ್ರಾಳ—ಈಗ ಹೊಳೆಯಿತು; ಸಂಪೂರ್ಣವಾಗಿ ತಿಳಿಯಿತು.

ಅಕ್ರಾಳ—ಏನು ಹೊಳೆಯಿತು? ಏನು ತಿಳಿಯಿತು? ಹೊಳೆದದ್ದಾದರೂ ಏನು? ತಿಳಿದದ್ದಾದರೂ ಏನು? ಹೇಳು. ಹೂ, ಬೇಗಹೇಳು.

ವಿಕ್ರಾಳ—ನಾವು ಯುವರಾಜರನ್ನು ಉರಿಯಲ್ಲಿ ಒಗೆಯಲಿಲ್ಲ.

ಅಕ್ರಾಳ—ಹೀಗೇತರಮೇಲಿಂದ ಹೇಳುವೆ?

ವಿಕ್ರಾಳ—ನನಗೆ ತಲೆಯು ಇದೆ ಎಂದು ಮಿತ್ರಾ, ನಾವು ಯುವರಾಜರನ್ನು ಉರಿಯಲ್ಲಿ ಒಗೆದಿದ್ದರೆ, ಅವರು ಅಲ್ಲಿಯೇ ಬೆಂದು, ನೊಂದು, ಉರಿದು ಭಸ್ಮವಾಗಿ ಹೋಗುತ್ತಿದ್ದರು.

ಅಕ್ರಾಳ— ಹಾಗಾದರೆ, ನಾವು ಯಾರನ್ನು ಒಗೆದೆವು?

ವಿಕ್ರಾಳ—ಕಲ್ಲು ಬಂಡೆಯನ್ನು.

ಅಕ್ರಾಳ—ಕಲ್ಲು ಬಂಡೆಯನ್ನಲ್ಲವೋ? ನಮ್ಮ ಪ್ರಬಲ ಶತ್ರುವನ್ನೇ ಉರಿಯಲ್ಲಿ ಒಗೆದೆವು.

ವಿಕ್ರಾಳ— ಇಲ್ಲ ಇಲ್ಲ. ನೀನು ಖಂಡಿತವಾಗಿಯೂ ಸುಳ್ಳು ಹೇಳುತ್ತಿರುವೆ

ಅಕ್ರಾಳ— ನೀನು ವಿಕ್ರಾಳನು ಹೌದೋ, ಅಲ್ಲವೋ?

ವಿಕ್ರಾಳ—ಆ ವಿಷಯವಾಗಿಯೇ ನನಗೆ ಸಂಶಯ ಬಂದಿದೆ, ದೊಡ್ಡ ಸಂಶಯ.

ಅಕ್ರಾಳ—ನಿನಗೆ ಬಂದ ಸಂಶಯವು ಪರಿಹಾರ ಆಗುವದಾದರೂ ಹೇಗೆ?

ವಿಕ್ರಾಳ—ನನ್ನ ಹೆಂಡತಿಯು ನಾನೇ ವಿಕ್ರಾಳನಿರುವೆನೆಂದು ಹೇಳಿದರೆ ಮಾತ್ರ, ಈಗ ನನಗೆ ಬಂದ ದೊಡ್ಡ ಸಂಶಯವು ಪರಿಹಾರವಾಗುವದು.

ಅಕ್ರಾಳ—ನಿನ್ನ ಹೆಂಡತಿಯು ನಿನಗೆ ಹೆಣವೆಂದು ಹೇಳಿದರೆ?

ವಿಕ್ರಾಳ—ಅದಕ್ಕೆ ಒಪ್ಪಿಕೊಂಡು, ಸತ್ತಹಾಗೆ ಬೀಳುವೆನು.

ಅಕ್ರಾಳ—ಉರಿಯಲ್ಲಿ ಒಗೆದರೆ?

ವಿಕ್ರಾಳ—ಉರಿದು ಹೋಗುವೆನು.

ಅಕ್ರಾಳ—ಮಣ್ಣಲ್ಲಿ ಹುಗಿದರೆ?

ವಿಕ್ರಾಳ—ಮಣ್ಣುಗೂಡಿ ಹೋಗುವೆನು.

ಅಕ್ರಾಳ—ನೀರಿನಲ್ಲಿ ಒಗೆದರೆ?

ವಿಕ್ರಾಳ—ಮುಳುಗಿ ಹೋಗುವೆನು.

ಅಕ್ರಾಳ—ಉರಿದು, ಮಣ್ಣುಗೂಡಿ, ಮುಳುಗಿ ಹೋದರೆ ನಿನ್ನ ಗತಿಯೇನು? ನಿನ್ನ ಸಂಸಾರದ ಗತಿಯೇನು?

ವಿಕ್ರಾಳ—ದೆವ್ವನಾಗಿ ಬಂದು ಹೆಂಡತಿಯೊಡನೆ ಸಂಸಾರ ಹೂಡುವೆನು.

ಅಕ್ರಾಳ—ನೀನು ಗಂಡಸೋ? ಹೆಂಗಸೋ?

ವಿಕ್ರಾಳ—ಆ ವಿಷಯವನ್ನಾದರೂ ನನ್ನ ಹೆಂಡತಿಯೇ ಹೇಳಬೇಕಯ್ಯಾ?

ಅಕ್ರಾಳ—ಆಯಿತು. ನಿನ್ನ ತಲೆಯು ಸಂಪೂರ್ಣವಾಗಿಯೇ ಕೆಟ್ಟು ಹಾಳಾಗಿ ಹೋಗಿದೆ.

ವಿಕ್ರಾಳ—ಕೆಟ್ಟ ತಲೆಯು ಸುಧಾರಿಸಬೇಕಾದರೆ ಏನು ಮಾಡಬೇಕು?

ಅಕ್ರಾಳ—ಸುರಾಪಾನ ಮಾಡು. ಎಂದರೆ, ನಿನ್ನ ತಲೆಯು ಸುಧಾರಸದಿಂದ ಸುಧಾರಿಸಿ, ನೀನಾರನ್ನು ಉರಿಯಲ್ಲಿ ಒಗೆದಿರುವೆ ಎಂಬದರ ಅರಿವು ನಿನಗೆ ಬರುವದು.

ವಿಕ್ರಾಳ—ಭಲೆ, ಭಲೆ, ಬಹು ಸರಿಯಾದ ಯುಕ್ತಿಯು. ಮಿತ್ರಾ, ನಮಗೆ ಸುಧೆಯುಬದಲು ಸುರೆಯುಕೊಟ್ಟು, ನಮ್ಮ ಮೇಲೆ ಮಹದುಪಕಾರ ಮಾಡಿದ ಸುರರ ಗುಣಗಾನ ಮಾಡುತ್ತ ಸುರಾಲಯದ ಕಡೆಗೆ ಹೋಗುವ ನಡೆ

ಅಕ್ರಾಳ—ನಡೆ. ಸುರೆ ಕುಡಿದು, ಸುರಸುಂದರಿಯರೊಡನೆ ವಿಲಾಸ ಕೇಳಿಯಲ್ಲಿ ಮಗ್ನರಾಗಿ, ಆ ಆನಂದದಲ್ಲಿ ತಲ್ಲೀನರಾಗುವ. ಸುರಾಭಕ್ತರು

ಇಲ್ಲಿ ಯಾರಾದರೂ ಇದ್ದರೆ, ಅನುಮಾನಮಾಡದೆ ಬನ್ನಿ. ನೀವು ಬೇಡಿದಷ್ಟು, ಕುಡಿದಷ್ಟು ಸುರೆಯುದಾನ ಮಾಡುವೆವು, ಸುರೆಯುದಾನ. ಸುರಾಲಯದ ಕಡೆಗೆ ಬನ್ನಿ. ಸುರೆಯುದಾನ ಸ್ವೀಕರಿಸಿ ಪುಣ್ಯಪಡೆಯಿರಿ. ಮಿತ್ರಾ, ಸುರಾಪಾನ ಮಾಡುವವರಿಗೂ, ಸುರಾದಾನ ಮಾಡುವವರಿಗೂ ಮಹತ್ಪುಣ್ಯ ಬರುವ ಮಹಾ ಪರವಣಿಯೇ ಇಂದು ಬಂದಿದೆ.

ವಿಕ್ರಾಳ——ಅದರಲ್ಲಿ ಎಳ್ಳಷ್ಟುಕೂಡ ಸಂಶಯವಿಲ್ಲ. ಸಂಶಯ ತೆಗೆದುಕೊಳ್ಳಲಿಕ್ಕೂ ಕಾರಣವಿಲ್ಲ ನಾವು ಇರುವ ಭೂದೇವಿಯ ಭಾರವು, ಆದಿಶೇಷನ ತಲೆಯಮೇಲೆ ಇದ್ದಹಾಗೆ, ನಮ್ಮ ರಾಜ್ಯಲಕ್ಷ್ಮಿಯ ಭಾರವು, ಸುರಾದೇವಿಯ ತಲೆಯಮೇಲೆ ಇದೆ. ಸುರಾದೇವಿಯ ಗುಣಗಾನ ಮಾಡುತ್ತ ಸುರಾಲಯದ ಕಡೆಗೆ ನಡೆ, ಹೋಗುವ. ಬರುವವರು ಒಂದರಗಳಿಗೆ ಕೂಡ ತಡಮಾಡದೆ ಬನ್ನಿ. ಅಲ್ಲಿಯ ಸ್ವರ್ಗ ಸುಖದ ಅನುಭವ ತೆಗೆದುಕೊಳ್ಳಿರಿ.

ಅಕ್ರಾಳ——ಬರುವವರು, ತಾವೇ ಬರುವರು. ನಾವು ಮುಂದೆ ಹೋಗುವ.

ವಿಕ್ರಾಳ——ಇಷ್ಟೇಕೆ ಅವಸರ ಮಾಡುವೆ?

ಅಕ್ರಾಳ——ಕುಡಿಯುವ ಕಾಲವು ಸಮೀಪಿಸಿತೆಂದರೆ ನನಗೆ ನಿಲ್ಲುವದಕ್ಕಾಗುವದಿಲ್ಲ. ಮಿತ್ರಾ, ನನ್ನ ಪ್ರಾಣವು ಹಾರಿಹೋಗಬೇಕೆಂದು ನಿನ್ನ ಮನಸ್ಸಿನಲ್ಲಿದೆಯೇ?

ವಿಕ್ರಾಳ——ಹಾಗೇನೂ ಇಲ್ಲ ನೀನು ನನ್ನ ಪಂಚಪ್ರಾಣನೇ ಆಗಿರುವೆ.

ಅಕ್ರಾಳ——ಹಾಗಾದರೆ, ಮಾಡುಬೆಳಿಸದೆ ಅತ್ತಕಡೆಗೆ ಹೋಗುವ.

ವಿಕ್ರಾಳ——ಹೋಗುವಾಗ ಸುರಾದೇವಿಯ ಗುಣಗಾನ ಮಾಡುತ್ತ ಹೋಗುವ.

**೨೧ ಪದ ( ಧಾಟಿ.... ಮೋಹಬತ್ )**

ಸೇವಿಸಲ್ ವರಸುಧಾಪಾನಾ |
ಭವಪಾಶ ನಾಶ ಮಧುಪಾನಾ || ಪ ||

ಸವಿ ನೋಡಿ ನೋಡಿ | ಸವಿಯಾಗಿ ಕೂಡಿ ||
ಅವನಿ ಭಾಗದಿ ಪಾಡಿ ಪಾಡಿ | ಭವ ದೂಡಿ ದೂಡಿ ||೧||

---

## ೨ನೆಯ ಅಂಕ ಮುಗಿದುದು.

ಶ್ರೀ ಮಧ್ವೇಶಾರ್ಪಣಮಸ್ತು.



ಹರಿಃ ಓಂ

|| ಶ್ರೀ ಗುರುರಾಜ ಪ್ರಸನ್ನ ||

# ವೈಕುಂಠಕ್ಕೆ ಮುತ್ತಿಗೆ

ಅಥವಾ

## ವಿಶ್ವದ ಪ್ರಥಮ ಮಹಾತ್ಮಾ ನಾಟಕವು.

---

## ೩ನೆಯ ಅಂಕ

### ೧ ನೆಯ ಪ್ರವೇಶ

ಸ್ಥಳ....ಕಯಾಧುವಿನ ರಮಣೀಯವಾದ ಏಕಾಂತಮಂದಿರವು.

**ಪಾತ್ರಗಳು.... ಕಯಾಧು, ಮಂಜುಭಾಷಿಣಿಯು, ಪ್ರಲ್ಹಾದ, ಹಿರಣ್ಯಕಶಿಪು.**

ಬರುವರೀತಿಯು—[ ಮಂಜುಭಾಷಿಣಿಯು ಹೊರಗೆ ಹೋಗುತ್ತಿರುವ ಕಯಾಧುವನ್ನು ತಡೆದು ]

ಮಂಜುಭಾಷಿಣಿ—ದೇವಿಯವರೇ, ಎತ್ತ ಕಡೆಗೆಹೋಗುವಿರಿ?

ಕಯಾಧು——ಸ್ಮಶಾನದ ಕಡೆಗೆ.

ಮಂಜುಭಾಷಿಣಿ——ತುಂಬಿದ ಮನೆಯಲ್ಲಿ ಹೀಗೆ ನುಡಿಯಬಾರದು. ಅಂತಃಪುರದೊಳಗೆ ನಡೆಯಿರಿ.

ಕಯಾಧು—ಇನ್ನೆಲ್ಲಿಯ ಅಂತಃಪುರ! ಛತ್ರಚಾಮರಾದಿ ರಾಜವೈಭವಂಗಳ ಸುಖಭೋಗಿಸಲು ನನ್ನಲ್ಲಿ ಜನ್ಮತಾಳಿದ ನನ್ನ ಕುಲದೀಪಕನು, ನನ್ನ ಜೀವನ ಸರ್ವಸ್ವನು, ನನ್ನ ಕೈಬಿಟ್ಟುಹೋದಮೇಲೆ ನಾನಾವ ಆಶೆಯಿಂದ ಈ ಲೋಕದಲ್ಲಿ ಜೀವಧಾರಣ ಮಾಡಿಕೊಂಡು ಇರಲಿ. ಮಂಜುಭಾಷಿಣೀ, ನನ್ನ ಪ್ರಲ್ಹಾದನು ಅಂಥ ಇಂಥ ಬಾಲಕನಲ್ಲ. ಸುಂದರ ಸುಕುಮಾರ ಬಾಲಕನು, ನಿರ್ಮಲ ಹೃದಯನು, ಸಕಲ ಕಲಾಕೋವಿದನು, ಶಾಂತನು, ದಾಂತನು, ವಿಷವೆರಿದವರಿಗೆ ಹಾಲೆರೆವ ಮಹಾತ್ಮನು ಹೋದನು ಬಹುದೂರ ಹೋದನು.

ಮಂಜು—ತಿರುಗಿ ಬಾರದ ಊರಿಗೆ ಹೋದನು, ಮಾರಿಗೆ ತುತ್ತಾದನು.

ಕಯಾದು—ಇನ್ನು ಆ ಸುಕುಮಾರನ ಮುದ್ದು ಮುಖಚಂದ್ರ ಬಿಂಬವು ನನ್ನ ದೃಷ್ಟಿಗೆ ಬೀಳುವ ಆಶೆಯೇ ಇಲ್ಲ. ಎನ್ನ ಮೋಹದ ಮುದ್ದುಗಿಣಿಯೇ, ನೀನೇಕೆ ಕಠೋರ ಹೃದಯರಾದ ಯಮದೂತರ ಬೆನ್ನುಹತ್ತಿ ಹೋದೆ; ನನ್ನ ಹತ್ತಿರವೇ ಇರಬೇಕಾಗಿತ್ತು. ನೀನೆಲ್ಲಿ ಹೋದೆ? ತಲೆಬೀಳುವಲ್ಲಿ ಕಾಲು ತಾನೇ ಎಳೆದುಕೊಂಡು ಹೋಗುವದು. ಎನ್ನ ಮುದ್ದಿನಖಿಣಿಯೇ, ಮಾತನಾಡು. ನನ್ನಮೇಲೆ ಇಷ್ಟೊಂದೇಕೆ ನಿರ್ದಯನಾದೆ? ತಾಯಿಯನ್ನು ದುಃಖದ ಉರಿಯಲ್ಲಿ ಬೇಯಲು ಹಚ್ಚಿ, ನೀನೊಬ್ಬನೇ ಸ್ವರ್ಗಸುಖಭೋಗಿಸುವದು ಸರಿಯಲ್ಲ, ಧರ್ಮವಲ್ಲ. ಮಕ್ಕಳು ಮಾಡತಕ್ಕ ಕೆಲಸವಲ್ಲ ಬಾ, ಮಗೂ, ಬೇಗಬಾ. ಎಂಥ ಹುಚ್ಚಿಯೇ ! ಕಯಾಧು ನೀನು! ಸತ್ತವನು ಕರೆದರೆ ಬರುವದೆಂತು! ಧಗ ಧಗ ಉರಿಯುವ ಉರಿಯಲ್ಲಿ ಒಗೆದಾಗ, ನೀನು ಆ ಉರಿಯಲ್ಲಿ ಬೆಂದು ನೊಂದು ಪ್ರಾಣಬಿಡುವಾಗ ಎಷ್ಟೊಂದು ಒದಾಡಿದೆಯೋ ? ಸಾಯುವಕಾಲಕ್ಕೆ ತಾಯಿಯು ಹತ್ತಿರವಿಲ್ಲವೆಂದು, ಎಷ್ಟೊಂದು ನೊಂದುಕೊಂಡೆಯೋ? ಒಂಟಿಗಾಲಿನಿಂದ ನಿಂತು ಸಾವಿರವರ್ಷ ಘೋರ ತಪಮಾಡಿದರೂಕೂಡ ದೊರೆಯದಂಥ ಮಗನು ನನ್ನ ಹೊಟ್ಟೆಯಲ್ಲಿ ಮೂಡಿ, ಬೆಳೆದು ಹುಟ್ಟಿಬಂದೆ. ನಿನ್ನ ಕಡೆಗೆ ಎಳ್ಳಷ್ಟು ಕೂಡ ತಪ್ಪಿಲ್ಲ. ನಿನ್ನಂಥ ಕುಲದೀಪಕನನ್ನು ಇಟ್ಟುಕೊಂಡು, ಸುಖದಿಂದ ಇರುವದು ನನ್ನ ದೈವದಲ್ಲಿಯೇ ಇಲ್ಲ. ಈ ದುರ್ದೈವಿಯ ಲಿಖಿತವನ್ನು ಅಳಿಸುವವರಾರು? ಅಳಿಸುವವನೀನು, ಅಳುವವಳು ನಾನು.

ಮಂಜು—ದೇವಿಯವರೇ, ಶಾಂತರಾಗಿರಿ, ಅಳಬೇಡಿ.

ಕಯಾಧು—ಅತ್ತತ್ತು ಸಾಯಲು, ನಾನು ಹೇಡಿಯಲ್ಲ. ವೀರಪುತ್ರಿ, ವೀರಪತ್ನಿ, ವೀರಮಾತಾ ಆಗಿರುವೆನು. ಮಗೂ, ನಾನೂ ಉರಿಯಲ್ಲಿಯೇ ಹಾರಿ, ಭಸ್ಮೀಭೂತಳಾಗಿ ನೀನು ಹೋದತ್ತ ಬರುವೆನು. ನೀನಿಲ್ಲದ ಅರಮನೆಯೇ ಮಸಣವು. ನೀನಿದ್ದ ಸ್ಮಶಾನವೇ ಅರಮನೆಯು. ಮಂಜುಭಾಷಿಣೀ, ಏ, ಮಂಜುಭಾಷಿಣೀ, ಹುಚ್ಚಿಯಂತೆ ಹೀಗೇಕೆ ನಿಂತಿರುವೆ? ನನ್ನನ್ನು ಉರಿಯಲ್ಲಿ ಮಲಗಿಸಿ ಬಾ. ನಾನಿಲ್ಲಿ ಇರಲಾರೆ. ನನ್ನ ಬಾಲವೀರನು ಇದ್ದಲ್ಲಿಯೇ ನಾನು ಹೋಗುವೆನು ಏಳು, ನನ್ನೊಡನೆ ಬಾ.

ಮಂಜು—ಹುಚ್ಚಿಯಹಾಗೆ ಹೀಗೇಕೆ ಮಾತನಾಡುವಿರಿ ? ದೇವಿಯವರೇ, ಶಾಂತರಾಗಿರಿ.

ಕಯಾಧು—ನಾನು ಶಾಂತಳಾಗಬೇಕೆಂದು ನಿನ್ನ ಮನಸ್ಸಿನಲ್ಲಿದ್ದರೆ, ನನ್ನನ್ನು ನನ್ನ ಮಗನು ಮಲಗಿದ ಉರಿಯಲ್ಲಿ ಮಲಗಿಸಿ ಬಾ, ಹೂ, ಬೇಗ ಏಳು.

ಮಂಜು—ಮತ್ತೆ ಮತ್ತೆ ಹುಚ್ಚಿಯಹಾಗೆ ಮಾತನಾಡಿದರೆ, ನಾನೇನು ಹೇಳಲಿ?

ಕಯಾಧು—ಹುಚ್ಚಿಯೆಂದಿ ಅಲ್ಲವೆ? ಹೌದು; ಹೌದು. ನಾನು ನಿಜವಾಗಿಯೇ ಹುಚ್ಚಿಯಾಗಿರುವೆನು. ಮಂಜುಭಾಷಿಣೀ, ನೀನು ಹೇಳಿದ್ದೇ ಸತ್ಯವು, ಸತ್ಯವು, ಸತ್ಯವು. ಎಂದು ತ್ರಿವಾರ ಹೇಳುವೆನು. ನನ್ನ ಮೋಹದ ಮಾತಿನ ಗಿಳಿಯು ಜೀವಂತವಾಗಿರಲು, ಸತ್ತಿತೆಂದು ಭಾವಿಸಿ ಅಳುತ್ತಿರುವೆನು. ನನ್ನ ಮಗನು ಸತ್ತಿರುವದೇ ಇಲ್ಲ.

ಮಂಜು—ಸತ್ತಿದ್ದಾನೆ, ಇನ್ನೆಲ್ಲಿಯ ಮಗನು?

ಕಯಾಧು—ಮಗನು ಇದ್ದಾನೆ, ಖಂಡಿತವಾಗಿಯೂ ಸತ್ತಿಲ್ಲ. ಕ್ರಿಮಿಕೀಟಕಾದಿ ಸಕಲ ಜೀವಿಗಳಲ್ಲಿ, ನಿರ್ಜೀವ ಪದಾರ್ಥಗಳಲ್ಲಿಕೂಡ ಇರುವ ಜೀವಿತೇಶ್ವರನ ದೇವದೇವನ ಮೂರ್ತಿಮಂತ ನಾರಾಯಣನ ನಾಮಾಮೃತ ಪಾನ ಮಾಡಿದವರಿಗೆ ಸಾವೇ ಇಲ್ಲವೆಂದು, ನನ್ನ ಮುದ್ದುಮಗ ಪ್ರಲ್ಹಾದನುಹೇಳಿದ್ದು, ನನ್ನ ಸಂಪೂರ್ಣ ಧ್ಯಾನದಲ್ಲಿ ಇದೆ. ದೇವರಿಗೆ ಶರಣುಹೋಗಿ, ಮರಣಗೆದ್ದವನು. ಅರ್ಥಾತ್ ಸಾವಿಲ್ಲದವನು ಸತ್ತಮೇಲೆ, ಜಗತ್ತು ಹೇಗೆ ಉಳದೀತು?

ಜಗತ್ತಿನ ವಿಷಯವಿರಲಿ, ಪ್ರಲ್ಹಾದನು ಸತ್ತಿದ್ದರೆ, ನಾನೆಲ್ಲಿ ಜೀವದಿಂದ ಇರುತ್ತಿದ್ದೆನು? ಪ್ರಲ್ಹಾದನು ನನ್ನ ಪ್ರಾಣನು. ಅವನ ಹರಣ ಹಾರಿದೊಡನೆ, ನನ್ನ ಹರಣವೂ ಹಾರುತ್ತಿತ್ತು. ಮಗುವು ಸತ್ತಿಲ್ಲ, ಖಂಡಿತವಾಗಿಯೂ ಸತ್ತಿಲ್ಲ. ಅವನು ಇಲ್ಲಿಯೇ ಹತ್ತಿರದಲ್ಲಿಯೇ ಸುಳಿದಾಡುತ್ತಿರುವನು. ಹೀಗೆಂದೇ ಇಲ್ಲಿಯ ಹೂಗಳು ಆ ಸುಂದರ ಸುಕುಮಾರನ ಸುಂದರ ಮುಖ ನೋಡಿ, ಕುಲು ಕುಲು ಆನಂದದಿಂದ ನಗುತ್ತಲಿವೆ. ನಾನಾದರೂ ಸುಮ್ಮನೇಕೆ ಇರಲಿ? ಮಗೂ, ನಾನೂ ನಗುವೆನು, ನೀನೂ ನಗು. ಹೂ, ಬೇಗ ನಗು. ( ನಗುವಳು. )

ಮಂಜು——ಏನು ಕಂಡು ನಗುವಿರಿ?

ಕಯಾಧು——ನನ್ನ ಮಗನು ನಗುವನೆಂದು ನಗುವೆನು. (ನಗುವಳು.)

ಮಂಜು——ಇನ್ನೆಲ್ಲಿಯ ಮಗನು? ಉರಿಯಲ್ಲಿ ಸುಟ್ಟು ಬೂದಿಯಾಗಿ ಹೋದನು.

ಕಯಾಧು——ಸುಟ್ಟು ಬೂದಿಯಾಗಿಲ್ಲೇ, ಮಂಜುಭಾಷಿಣೀ, ಅದೋ, ಅಲ್ಲಿ ನೋಡು, ನನ್ನ ಮೋಹದ ಮುದ್ದುಗಿಣಿಯು, ನನ್ನ ಮೋಹದ ಖಣಿಯು, ನನ್ನ ಮುಖದ ಕಡೆಗೇನೇ ನೋಡುತ್ತ ಕುಲು ಕುಲು ನಗುತ್ತಿರುವನು. ಬಾ, ಬಾ, ಮಗೂ, ನನಗೊಂದು ಮುದ್ದು ಕೊಡು. ಸಕ್ಕರೆಯಗಿಂತ ಅಮೃತಕ್ಕಿಂತ ಸವಿಯಾದ ನಿನ್ನ ಮುದ್ದಿನ ಸವಿಯನ್ನುಂಡು ಆ ಆನಂದದ ಭರದಲ್ಲಿ ಕುಣಿಯುವೆನು, ನೀನೂ ಕುಣಿ. ( ಕುಣಿಯುವಳು. )

ಮಂಜು——ಹೀಗೇಕೆ ಕುಣಿಯುವಿರಿ? ಸತ್ತವನು ಕುಣಿಯುವದಾದರೂ ಹೇಗೆ?

ಕಯಾಧು——ಸತ್ತಿಲ್ಲೇ, ಅದೋ, ನನ್ನ ಕಡೆಗೆ ನೋಡಿ ನಗುತ್ತ ಕುಣಿಯುತ್ತಾನೆ. ಹೀಗೇಕೆ ಮಗೂ, ಒಮ್ಮೆಂದೊಮ್ಮೆ ಎಂದೂ ನನ್ನ ಮೇಲೆ ಸಿಟ್ಟಿಗೇಳದವನು ನನ್ನ ಕಡೆಗೇಕೆ ಕ್ರೂರ ದೃಷ್ಟಿಯಿಂದ ನೋಡತೊಡಗಿದೆ? ಇಷ್ಟೊಂದು ಸಿಟ್ಟಿಗೇಳಲಿಕ್ಕೆ ನಾನೇನು ಅಂಥ ತಪ್ಪನ್ನು ಮಾಡಿರುವೆನು ಹೇಳು? ಮಾತನಾಡು, ನಿರ್ದಯತೆಯಿಂದ ಕಠಿಣ ಯಾತನೆಗಳನ್ನು ಅನುಭವಿಸಲು ಹಚ್ಚಿದವರಮೇಲೆ ಸಹ ದಯೆಯನ್ನು ತೋರುವ ಶಾಂತ ಮೂರ್ತಿಯಾದ ನೀನು ಇಷ್ಟೊಂದು ಸಿಟ್ಟಿಗೇಳಲು, ಕಾರಣವೇನು? ಏನಿರಬ

ಹೂದು, ನೀನೇ ಹೇಳು, ಬೇಗ ಹೇಳು. ಹ! ಹ! ತಿಳಿಯಿತು, ಆ ಕಾರ ಣವೂ ತಿಳಿಯಿತು.

ಮಂಜು—ಏನು ತಿಳಿಯಿತು?

ಕಯಾಧು—ಸಿಟ್ಟಿಗೆದ್ದಕಾರಣವು ತಿಳಿಯಿತು. ನಾನೂ ಅವನಂತೆ ಭಜನೆಯನ್ನು ಮಾಡಲಿಲ್ಲವೆಂದು ನನ್ನಮೇಲೆ ಸಿಟ್ಟಿಗೆದ್ದಿದ್ದಾನೆ. ಶಾಂತ ನಾಗು, ಮಗೂ ಬಾ. ಮಗೂ ಬಾ. ಇಂದಿನಿಂದ ನಾನೂ ನಿನ್ನಹಾಗೆ ನಾರಾಯಣ, ಹರಿನಾರಾಯಣ, ದುರಿತ ನಿವಾರಣ. ಎಂದು ಭಜನೆ ಮಾಡುವೆನು. ತಾಳಕ್ಕೆ ಸರಿಯಾಗಿ ಹಾಡುತ್ತ ನಿನ್ನೊಡನೆ ಕುಣಿಯುವೆನು. ಬಾ, ಬೇಗ ಬಾ. ಹರಿನಾರಾಯಣ ಹರಿನಾರಾಯಣ. ಎಂದು ಭಜನ ಮಾಡು. ಹರಿನಾರಾಯಣ, ಹರಿ ನಾರಾಯಣ ಹರಿ.

ಪ್ರಲ್ಹಾದ—ಶ್ರೀಹರಿ ನಾರಾಯಣ, ಶ್ರೀಹರಿ ನಾರಾಯಣ. ಪಾಹಿ ಮಾಂ ಶ್ರೀಹರಿನಾರಾಯಣ.

ಮಂಜು—ಭೂತ! ಭೂತ! ದೇವಿಯವರೇ, ಭೂತ.

ಕಯಾಧು—ಭೂತ!! ಸುಂದರ ಸುಕುಮಾರನು ಬರುವದರ ಬದಲು ಸ್ಮಶಾನದಲ್ಲಿಯ ಭೂತಬಂದಿತೇ! [ನೋಡಿ] ಹೌದೇ, ಭೂತ; ಭೂತ! [ಬೆದರಿದಂತೆ ನಟಿಸುವಳು]

ಪ್ರಲ್ಹಾದ—ಭೂತವಲ್ಲ. ಬೆದರಬೇಡವಮ್ಮಾ, ನಾನು ಭೂತನಲ್ಲ. ನಿನ್ನ ಚರಣದಾಸನಾದ ಪ್ರಲ್ಹಾದನು. ಉರಿಯು ನನ್ನನ್ನು ಸುಡಲಿಲ್ಲ. ಅಮ್ಮಾ, ನನ್ನಕಡೆಗೆ ನೋಡು, ನಾನು ನಿನ್ನ ಮೋಹದ ಮಗು, ಭೂತನಲ್ಲ.

ಕಯಾಧು—ಭೂತನಲ್ಲವೋ?

ಹಿರಣ್ಯ—ಭೂತನಲ್ಲವೇಕೆ? ಈ ನೀಚನು ನಮ್ಮ ದೈತ್ಯಕುಲವನ್ನು, ನಿನ್ನನ್ನು ನನ್ನನ್ನು ಕೂಡ ನುಂಗುವ ಮಹಾಭೂತ, ಭಯಂಕರಭೂತ. (ಮಂಜುಭಾಷಿಣಿಯು ಹೋಗುವಳು )

ಕಯಾಧು—ಭೂತನಲ್ಲ ಮಗು, ನನ್ನ ಮುದ್ದುಮಗು. ಬದುಕಿ ಬಂದೆಯಾ, ಮಗೂ ಬಾ. (ಎಂದು ಅಪ್ಪಿ) ಮಗೂ.

ಹಿರಣ್ಯ—ಮಗನಲ್ಲ, ನಮ್ಮ ದೈತ್ಯಕುಲಕುಠಾರ. ಸುಂದರವಾಗಿ, ರಮ್ಯವಾಗಿ ಬೆಳೆದ ನಮ್ಮ ರಾಕ್ಷಸವಂಶ ವೃಕ್ಷವನ್ನು ಸುಟ್ಟು ಬೂದಿ ಮಾಡುವ

ಕೊಡುಗಿಚ್ಚು. ಈ ಮಹಾಭೂತದ ನಾಶವಾಗದಹೊರತು ನಮ್ಮ ರಾಕ್ಷಸ ಕುಲಕ್ಕೆ ಕ್ಷೇಮವಾಗುವದಿಲ್ಲ. ಈ ಕುಲಾಂಗಾರನ ರುಂಡವು ಮುಂಡದಿಂದ ಕಳಚಿಬಿದ್ದು ಮಣ್ಣುಮುಕ್ಕುತ್ತಿರುವಾಗ, ಸಾವಿನವೇದನೆಯನ್ನು ತಾಳದೆ ದುಃಖಾಶ್ರುಗಳನ್ನು ಧಾರೆ ಧಾರೆಯಾಗಿ ಸುರಿಸುತ್ತಿರುವಾಗ, ನಾನು ಆನಂದಾಶ್ರುಗಳನ್ನು ಸುರಿಸುತ್ತ, ಆ ಆನಂದದ ಭರದಲ್ಲಿ ಮದೋನ್ಮತ್ತನಾಗಿ ತಾಂಡವನೃತ್ಯ.

ಕಯಾಧು—ಹಾಗೆ ಮಾಡಬೇಡಿ ಮಗನ....

ಹಿರಣ್ಯ—ಅಲ್ಲ ಮಗನಲ್ಲ. ಇನ್ನೊಮ್ಮೆ ನೀನು ಈತನಿಗೆ ಮಗನು ಎಂದು ಕರೆದುದಾದರೆ, ನನ್ನ ನಿನ್ನ ಲಗ್ನಬಂಧನವೇ ಹರಿಯಿತೆಂದು ತಿಳಿ; ಜೋಕೆ, ಬಹು ಜೋಕೆ. ಮಗನೆಂಬ ವ್ಯಾಮೋಹ ಬಿಟ್ಟುಬಿಡು. ಈ ಪಾಪಾತ್ಮನು ನಿನ್ನಮಗನಲ್ಲ. ನಮ್ಮ ದಾನವರ ರಾಜ್ಯವೈಭವಂಗಳನ್ನೆಲ್ಲ ಮಣ್ಣುಗೂಡಿಸಲು, ನಮ್ಮ ಕುಲವನ್ನೇ ಮುರಿದು ನುಂಗಿ ಹಿರಿ ಹಿರಿ ಹಿಗ್ಗಲು ಪಣ ಮಾಡಿಯೇ ನಮ್ಮ ಪೂರ್ವಜನ್ಮದ ವೈರ ಸಾಧಿಸಿಕೊಳ್ಳುವ ದುರ್ಬುದ್ಧಿಯಿಂದಲೇ, ಮಗನ ರೂಪದಿಂದ ನಿನ್ನ ಹೊಟ್ಟೆಯಲ್ಲಿ ಹುಟ್ಟಿಬಂದ ವೈರಿಯೆಂದೇ ತಿಳಿ. ಗರ್ಭಿಣಿ ಸ್ತ್ರೀಯು ತನ್ನಹೊಟ್ಟೆಯ ಮಗನು ಹುಟ್ಟುವಾಗ ಅಡ್ಡಬಂದರೆ, ಅವನನ್ನು ಕೊಂದು ತಾನು ಬದುಕುವಂತೆ, ನೀನಾದರೂ ಈ ನೀಚಾತ್ಮನನ್ನು ಈ ಶಸ್ತ್ರದಿಂದ ಹೆಚ್ಚಿ-ಕೊಚ್ಚಿ-ಆ ಚೂರುಗಳನ್ನು ದಿಗ್ದೇವತೆಗಳಿಗೆ ಬಲಿಕೊಡು. ಎಂದರೆ, ನನ್ನದೊಂದು ಆತ್ಮಕ್ಕೆ ಶಾಂತಿಯು ಆಗುವದು. ಅನುಮಾನವೇಕೆ? ತೆಗೆದುಕೊ ಶಸ್ತ್ರವನ್ನು.

ಕಯಾಧು—ಬೇಡ; ಸರ್ವಥಾ ಬೇಡ. ಹಡೆದತಾಯಿಯು ಮಗನನ್ನು....

ಹಿರಣ್ಯ—ಮತ್ತೆ ಮತ್ತೆ, ಈ ಕುಲನಾಶಕನಿಗೆ ಮಗನೆನ್ನುವೆಯಾ? ಭ್ರಷ್ಟೇ. ಇಷ್ಟಕ್ಕೆ ಬಾಯಮುಚ್ಚು. ಮಗನೇ ನಿನಗೆ ಬೇಕಾಗಿದ್ದರೆ ನೀನು ಒಂದುಕ್ಷಣ ಸಹ ವಿಲಂಬಮಾಡದೆ ನನ್ನ ಶಿರಸ್ಸನ್ನು ಹಾರಿಸು. ನನ್ನ ಹೊಟ್ಟೆಯನ್ನು ಹರಿದು ಕೊರಳಿಗೆ ಕರುಳುಮಾಲೆಹಾಕಿಕೋ. ಕರುಳುದಂಡೆಯನ್ನು ಮುಡಿದುಕೊ ನನ್ನ ಎಲುಬುಗಳಿಂದಲೇ ತಾಳಕಟಿಯುತ್ತ ಶ್ರೀಹರಿ ನಾರಾಯಣ, ಶ್ರೀಹರಿ ನಾರಾಯಣ, ಹರಿ.

ಪ್ರಲ್ಹಾದ—ಆನಂದ, ಆನಂದ; ಮಹದಾನಂದ. ತಾತಾ, ಹೀಗೆಯೇ ಶ್ರೀಹರಿ ನಾರಾಯಣ, ಶ್ರೀಹರಿ ನಾರಾಯಣ. ಎಂದು ಭಜನ ಮಾಡುತ್ತ ಹೋಗಿರಿ. ನಿಮ್ಮ ಅಹಂಕಾರವು ಅಡಗುವದು. ಎನ್ನರಿ ಶ್ರೀಹರಿ ನಾರಾಯಣ, ಶ್ರೀಹರಿ ನಾರಾಯಣ ಹರಿ.

ಹಿರಣ್ಯ—ಹರಿ, ಹರಿ ಎಲ್ಲಿಯ ಹರಿಯೋ? ಮುಟ್ಠಾಳಾ, ಎಲ್ಲಿಯ ಹರಿ? ಕ್ರೋಧಾವೇಶದಿಂದ ನನ್ನ ಕಣ್ಣುಗಳಿಂದ ಹೊರಡುವ ಒಂದೇ ಒಂದು ಅಗ್ನಿಯ ಕಿಡಿಯಲ್ಲಿ ಸರ್ವಜಗತ್ತುಗಳನ್ನು ಎದುರಿಗೆ ಬರುವ ಎಲ್ಲ ಪ್ರಾಣಿಗಳನ್ನು ಸುಟ್ಟು ಭಸ್ಮಮಾಡುವ ಅಗಾಧಶಕ್ತಿಯು ಇದೆಯೆಂದೇ ನಿನ್ನ ಹರಿ ಹರ ಬ್ರಮ್ಹರು ನನ್ನೆದುರಿಗೆ ಬಾರದೆ, ಕಳ್ಳರಹಾಗೆ ಎಲ್ಲಿಯೋ ಗುಪ್ತ ಸ್ಥಳದಲ್ಲಿ ಅಡಗಿಕೊಂಡು ಕುಳಿತಿದ್ದಾರೆ. ಹರಿ ಹರ ಬ್ರಮ್ಹರು ಎಲ್ಲಿದ್ದಾರೆ ಕರೆ; ಅವರನ್ನು. ಅವರೊಡನೆ ಮನದಣಿಯುವವರೆಗೆ ಮಲ್ಲಯುದ್ಧಮಾಡಿ, ನನ್ನ ತೋಳತಿಂಡೆಯನ್ನು ತೀರಿಸಿಕೊಳ್ಳುವೆನು. ಅವರ ರಾಣಿಯಂದಿರನ್ನು ನನ್ನ ಸೇವೆಗೆ ಇಟ್ಟುಕೊಳ್ಳುವೆನು. ಮೊದಲು ನಿನ್ನ ಹರಿಯನ್ನು ಕರೆ. ಅವನ ಹೊಟ್ಟೆಹರಿಯಲು, ಅವನ ರಕ್ತದಿಂದಲೇ ನನ್ನ ಬಂಧುವಿಗೆ ತಿಲತರ್ಪಣ ಬಿಡಲು, ಬಹು ಆತುರನಾಗಿದ್ದೇನೆ. ಕುಲಘಾತಕಾ! ಎಲ್ಲಿದ್ದಾನೆ? ಎಷ್ಟು ದೂರದಲ್ಲಿದ್ದಾನೆ? ಆ ನಿನ್ನ ಹರಿಯು.

ಪ್ರಲ್ಹಾದ—ಅವನಷ್ಟು ದೂರವೂ ಯಾರಿಲ್ಲ. ಹತ್ತಿರವೂ ಯಾರಿಲ್ಲ

ಹಿರಣ್ಯ—ಎಲ್ಲಿದ್ದಾನೆತೋರಿಸು.

ಪ್ರಲ್ಹಾದ—ಈ ಕಣ್ಣಿಗೆ ಕಾಣುವದಿಲ್ಲ.

ಹಿರಣ್ಯ—ಎಂದಮೇಲೆ, ಆತನು ಇಲ್ಲವೇ ಇಲ್ಲ.

ಪ್ರಲ್ಹಾದ—ಇದ್ದಾನೆ. ಆ ಮಹಾಮಹಿಮನು ಇದ್ದಾನೆಂದೇ ಸೂರ್ಯ ಚಂದ್ರರು ಮೂಡಿ ಮುಳುಗುವರು, ಜೀವಿಗಳು ಜೀವಿಸುವರು.

ಹಿರಣ್ಯ—ಹಾಗಲ್ಲವೋ, ಮೂರ್ಖಾ, ಹಾಗಲ್ಲ. ನಾನು ಇರುವೆನೆಂದೇ ಸೂರ್ಯ ಚಂದ್ರರು ಮೂಡಿ, ಬೆಳಗಿ ಮುಳುಗುವರು. ಜೀವಿಗಳು ಜೀವಿಸುವರು.

ಪ್ರಲ್ಹಾದ—ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನು ದೇವರು ಇದ್ದಾನೆ. ಎಂದು ಸರ್ವಜಗತ್ತು ಒಪ್ಪುತ್ತಿರುವಾಗ ತಾವು ಇಷ್ಟೊಂದು ಅಹಂ

ಕಾರ ತಾಳುವದು ಸರಿಯಲ್ಲ.

ಹಿರಣ್ಯ—ನಾನು ಅಹಂಕಾರಿಯೇ?

ಪ್ರಲ್ಹಾದ—ತಮಗೆ ಅಮರಪದ ಕೊಟ್ಟ, ಬ್ರಹ್ಮದೇವನನ್ನು ಒಂದು ದಿನವಾದರೂ ಭಜಿಸದೆ, ಪೂಜಿಸದೆ ಮರೆಯುವದಾವ ಲಕ್ಷಣವು, ತಾವೇ ಕೇಳಿ; ವಿಚಾರಮಾಡಿಹೇಳಿ?

ಹಿರಣ್ಯ—ತಂದೆಗೆ ಹೀಗೆ ಎದುರುತ್ತರ ಕೊಡುವದು ನ್ಯಾಯವೆ?

ಪ್ರಲ್ಹಾದ—ನಾನೇನು ಎದುರುತ್ತರ ಕೊಡುವದಿಲ್ಲ. ಅಹಂಕಾರದಿಂದ ಸರ್ವಸ್ವೀ ನಾಶವಾಗುವದು. ಆ ಗುಣವು ಇರುವದು ಸರಿಯಲ್ಲ. ಎಂದು ತಮಗೆ ಸವಿನಯ ಪ್ರಾರ್ಥನೆ ಮಾಡಿಕೊಳ್ಳುವೆನು.

ಹಿರಣ್ಯ—ಇಂಥ ಬಣ್ಣದ ಮಾತುಗಳಿಗೆ ನಾನು ಮೋಸ ಹೋಗತಕ್ಕವ ನಲ್ಲ. ನೀನೂ ಬೇಡ; ನಿನ್ನ ಮಾತೂ ಬೇಡ.

ಪ್ರಲ್ಹಾದ—ನನ್ನ ಮಾತಿಗೆ ಅಮರ್ಯಾದೆ ಮಾಡಬೇಡಿ. ಆ ದುರ್ಗು ಣವೇ ಕೊನೆಗೆ ತಮ್ಮ ಮರಣಕ್ಕೆ ಕಾರಣವಾದೀತು.

ಹಿರಣ್ಯ—ಅಜೇಯ ಅಜರಾಮರ ಸಮ್ರಾಟನಾದ ನನಗೆಲ್ಲಿಯ ಮರ ಣವೋ, ಹುಚ್ಚಾ. ಆ ಹಾಳು ವಿಷಯವಿರಲಿ, ನೀನು ಯಾರದಯದಿಂದ ಬದುಕಿ ತಿರುತಿರುಗಿ ಬರುತ್ತಿರುವೆ ಹೇಳು.

ಪ್ರಲ್ಹಾದ—ಶ್ರೀಹರಿಯ ದಯದಿಂದ.

ಹಿರಣ್ಯ—ಎಲ್ಲಿರುವನೋ, ಆ ನಿನ್ನ ಸುಟ್ಟಹರಿ. ಆತನು ನನಗಂತೂ ಎಲ್ಲೆಲ್ಲಿಯೂ ಕಾಣುವದಿಲ್ಲ. ನಿನ್ನಲ್ಲಿ ಇರುವನೇನೋ ಆ ಹರಿಯು?

ಪ್ರಲ್ಹಾದ—ಎಲ್ಲಕಡೆಯಲ್ಲಿದ್ದವನು ನನ್ನಲ್ಲಿ ಇಲ್ಲದೆ ಏನು? ತಾತಾ, ಆ ಶ್ರೀಹರಿಯು ನನ್ನಲ್ಲಿ ಖಂಡಿತವಾಗಿಯೂ ಇದ್ದಾನೆ.

ಹಿರಣ್ಯ—ಒಳಿತಾಯಿತು, ಇಷ್ಟುದಿವಸ ಹುಡುಕಬೇಕೆಂದು ಕಾಯ್ದು ಕೊಂಡಿದ್ದ ನನಗೆ ನಿನ್ನ ಹರಿಯು ತಾನಾಗಿಯೇ ನನ್ನ ಕೈಯಲ್ಲಿ ಸಿಕ್ಕಂತಾ ಯಿತು ನಿನ್ನ ಹೊಟ್ಟೆಯನ್ನೂ, ನಿನ್ನ ಹರಿಯ ಹೊಟ್ಟೆಯನ್ನೂ ಈ ಖಡ್ಗ ದಿಂದ ಹರಿದು ಬಿಡುವೆನು.

ಕಯಾಧು—ಮಹಾರಾಜ, ಮಗನಮೇಲೆ ದಯದೋರರಿ.

ಹಿರಣ್ಯ—ಶಕ್ಯವಿಲ್ಲ, ಸರ್ವಥಾ ಶಕ್ಯವಿಲ್ಲ.

ಕಯಾಧು—ಹಾಗಾದರೆ, ಮಗನಕರಳು ಬಗೆಯುವದರ ಮೊದಲೇ ನನ್ನ ಕರುಳು ಬಗೆಯಿರಿ.

ಹಿರಣ್ಯ—ಆಗಲಿ, ಹಾಗೇ ಆಗಲಿ. ಆ ನನ್ನ ವೈರಿಯ ಹೊಟ್ಟೆಯನ್ನು, ಈ ವೈರಿಯನ್ನು ಹೆತ್ತ ನಿನ್ನ ಹೊಟ್ಟೆಯನ್ನೂ ಈ ನೀಚನಿಗೆ ತಾರಕನಾದ ಹರಿಯಹೊಟ್ಟೆಯನ್ನು ಹರಿಯುವೆನು. ಎಂದರೆ ನನ್ನ ಆತ್ಮಕ್ಕೆ ಶಾಂತಿ, ಅಖಂಡಶಾಂತಿ .

ಕಯಾಧು—ತಮ್ಮ ಆತ್ಮಕ್ಕೆ ಅಖಂಡ ಶಾಂತಿಯು ದೊರೆಯಲಿ. ಮೊದಲು ನನ್ನ ಸಂಹಾರ ಮಾಡಿರಿ.

ಹಿರಣ್ಯ—ಸಂಹಾರ ಮಾಡಿಯೇ ಬಿಡುವೆನು. ಮೊದಲು ನಿನ್ನ ನಾಶ, ಆಮೇಲೆ ಈ ನೀಚನ ನಾಶ, ಕೊನೆಗೆ ನನ್ನ ಮಹಾವೈರಿಯ ನಾಶ. (ತ್ರಿಶೂಲ ಚುಚ್ಚಲು ಹೋಗುವಾಗ )

ಪ್ರಲ್ಹಾದ—ತಾತಾ, ಬೇಡಿ, ದಯವಿಟ್ಟು ಮಾತೃವಧ ಮಾಡಬೇಡಿ. ತಮಗೆ ನಾನು ವೈರಿಯೋ? ಏನು ನನ್ನ ತಾಯಿಯು ವೈರಿಯೋ?

ಹಿರಣ್ಯ—ಭ್ರಷ್ಟನಾದ ನೀನೇ ನನ್ನ ಕುಲಕಂಟಕ ವೈರಿಯು.

ಪ್ರಲ್ಹಾದ—ನನ್ನ ನಾಶಮಾಡಿಯೇ ಆನಂದಬಡರಿ. ಅನುಮಾನವೇಕೆ?

ಹಿರಣ್ಯ—ಅನುಮಾನವೇನೂ ಇಲ್ಲ. ನಿನ್ನ ನಾಶ ಮಾಡಿಯೇ ಬಿಡುವೆನು. [ ತ್ರಿಶೂಲ ಚುಚ್ಚಲು ಹೋಗಲು ]

ಕಯಾಧು—ಬೇಡಿ, ಬೇಡಿ, ಹಾಗೆ ಮಾಡಬೇಡಿ. ( ತ್ರಿಶೂಲ ಹಿಡಿಯುವಳು. )

ಹಿರಣ್ಯ—ಮತ್ತೆ, ಮತ್ತೆ, ನನ್ನ ಪವಿತ್ರಕಾರ್ಯಕ್ಕೆ . ಪ್ರತಿಬಂಧಮಾಡುವೆಯಾ? ನೀಚಾತ್ಮಳೇ. ( ಹೊಡೆಯುವನು. )

ಕಯಾಧು—ಹೊಡೆಯಿರಿ, ಕಡಿಯಿರಿ, ಮಗನ ಮೈಗೆ ಮಾತ್ರ ಕೈಹಚ್ಚಬೇಡರಿ. ಮಗನ ಕೊಲೆ ಮಾಡುವದೇನೂ ಪವಿತ್ರ ಕಾರ್ಯವಲ್ಲ. ವಿಚಾರ ಮಾಡಿನೋಡಿರಿ. ಈ ಆಲ್ಹಾದದಾಯಕ ಪ್ರಲ್ಹಾದನು ನಮ್ಮ ಪರಮ ಪವಿತ್ರ ಕುಲದ ಬಳ್ಳಿಯ ಮಿಡಿಯು. ಬಳ್ಳಿಯನ್ನು ಹಚ್ಚಿದವರೇ ಬಳ್ಳಿಯ ಮಿಡಿಯನ್ನು ಕೊಯ್ಯುವದು ಮಹತ್ಪಾಪದ ಕಾರ್ಯವಾಗಿದೆ. ಈ ಚಿತ್ತಾಕರ್ಷಕ ಮಿಡಿಯನ್ನು ನೋಡಿ, ಆನಂದಬಡರಿ. ಶಾಂತರಾಗಿರಿ. ಹೊಲ ಕಾಯುವ

ಬೇಲಿಯೇ ಹೊಲವನ್ನು ನುಂಗಿದಂತೆ ಎಂದರೆ ಹಡೆದ ತಾಯಿ–ತಂದೆಗಳೇ ಮಗನನ್ನು ಕುತ್ತಿಗೆ ಹಿಚಗಿ ಕೊಲ್ಲಲು ಸಿದ್ಧರಾದರೆ, ಅವನ ರಕ್ಷಕರಾರು? ಉಪಾಯವಿಲ್ಲ ಮಾಡುವದೇನು? ಕಾಯಕೊಟ್ಟು ಕಾಯುವವರೇ ಆ ಕಾಯದ ಕೊಲೆಮಾಡಲು, ಹಟತೊಟ್ಟಮೇಲೆ ಮರಣದಬಾಯಿಗೆ ತುತ್ತಾಗಲೇ ಬೇಕು.

ಹಿರಣ್ಯ—ತುತ್ತಾಗು.

ಕಯಾಧು——ಸಾವಿಗೆ ತುತ್ತಾಗಬೇಕೆಂದೇ ಎದುರಿಗೆ ನಿಂತಿದ್ದೇನೆ. ಯುದ್ಧದಲ್ಲಿ ಹೋರಾಡುವ ವೀರನು ಸತ್ತು ವೀರಸ್ವರ್ಗಕ್ಕೆ ಹೋಗುವಂತೆ, ನನ್ನ ಆರಾಧ್ಯ ದೇವರಾದ ತಮ್ಮ ಕೈಯಿಂದ ಮರಣಹೊಂದಿ, ಹಣೆಗೆ ಪಟ್ಟೆ ಕುಂಕುಮ ಹಚ್ಚಿಕೊಂಡು, ಮುಡಿಗೆ ದಂಡೆಯನ್ನು ಮುಡಿದುಕೊಂಡು, ಉಡಿ ತುಂಬಿಸಿಕೊಂಡು, ಕಂಕಣಕ್ಕೆ ಮೇಲ್ಮಾಡಿಕೊಂಡು ಸ್ವರ್ಗಕ್ಕೆ ಹೋಗಿ, ಆ ವೈಭವಸಂಪನ್ನ ಸ್ವರ್ಗದ ಸಾಮ್ರಾಜ್ಞಿಯಾಗುವೆನು ಮಂಗಲಾತ್ಮರಾದ ಪತಿದೇವರಿಂದ ನನಗೆ ಬರುವ ಮಂಗಲ ಯೋಗಕ್ಕೆ ಎರವಾಗಿ, ನನ್ನ ಪದರಿನಲ್ಲಿ ಪಾಪವನ್ನೇಕೆ ಕಟ್ಟಿಕೊಳ್ಳಲಿ? ಮೊದಲು ನನ್ನ ವಧವಾಗಲಿ. ಮಗನ ಕೋಮಲ ಶಿರಕಮಲವು ಕಳಚಿ ಬೀಳುವದನ್ನೂ, ಆತನ ದೇಹದಿಂದ ಹರಿದು ಬರುವ ರಕ್ತವನ್ನೂ ನೋಡುವದು ನನ್ನಿಂದ ಸರ್ವಥಾ ಆಗದು. ಪ್ರಲ್ಹಾದನು ನಮ್ಮ ಕರಳು. ನಮ್ಮ ಕರುಳುಗಳನ್ನು ನಾವೇ ಹರಿದುಕೊಂಡರೆ ನಮಗೆಂದಾದರೂ ಆನಂದವಾಗುವದೇ? ಹೇಳಿ. ಕರುಣೆಯಿಂದ ಕೂಗುವ ಕುರಿಗಳ ಕೊರಳುಗಳನ್ನು ಕರುಣೆಯಿಲ್ಲದೆ ಕರ, ಕರ ಕೊಯ್ಯುವ ಕಠೋರ ಹೃದಯದ ಕಟುಕನ ಆ ಹೃದಯವು ತನ್ನ ಕರುಳಿನ ಮೊರೆಗೆ ಕರಗಿ ಹರಿಯುತ್ತಿರುವಾಗ ತಾವೇಕೆ ತಮ್ಮ ಕರುಳಿನ ಕರಳು ಹರಿಯುವದಕ್ಕೆ ಹಾತೊರೆಯುತ್ತಿರುವಿರಿ ? ಕಟುಗರಕಿಂತ ಕಟುಗರಾಗಬೇಡಿರಿ , ತರಳನಮೇಲೆ ಕರುಣದೋರಿರಿ.

ಹಿರಣ್ಯ——ಇಷ್ಟಕ್ಕೆ ಸಾಕುಮಾಡು. ನನಗೆಲ್ಲವೂ ತಿಳಿಯುತ್ತದೆ. ನನ್ನ ಆಜ್ಞೆಯು ನಿನಗೆ ಮಾನ್ಯವೋ, ಅಮಾನ್ಯವೋ ಮೊದಲು ಹೇಳು.

ಕಯಾಧು——ಮಾನ್ಯವು. ನನಗೂ, ತಮಗೂ ಹಿತದಾಯಕವಾಗಿರುವ ನನ್ನ ಕೊನೆಯ ಮಾತನ್ನೊಂದು ದಯವಿಟ್ಟು ಕೇಳುವಿರಾ?

ಹಿರಣ್ಯ—ಅದಾವದು ಹೇಳು?

ಕಯಾಧು—ನಾನೂ ಪ್ರಲ್ಹಾದನೂ ತಮಗೆ ಬೇಡಾದರೆ, ನಮ್ಮೀರ್ವರನ್ನೂ ಕಾಡಿಗಟ್ಟಿರಿ. ಬಳ್ಳಿಯುಕಾಯಿ ಬಳ್ಳಿಗೆ ಭಾರವಲ್ಲ. ನಾನೇ ಅವನ ರಕ್ಷಣ ಮಾಡುತ್ತ ಕಾಡಿನಲ್ಲಿ ಆನಂದದಿಂದ ಇರುವೆನು ಈ ನನ್ನ ಮುದ್ದು ಮಗುವು ಇರುವ ಕಾಡೇ ನನಗೆ ನಾಡಾಗುವದು. ಈ ಮುದ್ದು ಪ್ರಲ್ಹಾದನೇ ನಮ್ಮ ಮನೆ ಬೆಳಗುವ ದೀಪವು ಮನೆಯುವರಾದ ತಾವೇ ತಮ್ಮ ಮನೆಯ ದೀಪವನ್ನು ತಮ್ಮ ಕೈಯಿಂದಲೇ ಆರಿಸುವ ಹಟ ಹಿಡಿಯಬೇಡಿ. ತುಂಬಿದ ಮುಖವು ಚಂದ್ರಬಿಂಬವನ್ನು ಹುಬ್ಬುಗಳು ಕಾಮನಬಿಲ್ಲುಗಳನ್ನು ಮುಖ ಕಮಲದ ಸುತ್ತಲೂ ಸುಳಿದಾಡುವ ಸುಳಿಗುರುಳು ಭ್ರಮರ ಪಂಗ್ತಿಗಳನ್ನು ಮರೆಸುವವು. ನೋಡಿನೋಡಿದಂತೆ, ಮತ್ತೆ ಮತ್ತೆ ನೋಡಿ ನೋಡಿ ನಲಿಯುವಹಾಗೆ ಮಾಡುವ ಈ ಸುಂದರ ಸುಕುಮಾರನ ದೇಹವು ಮಣ್ಣುಗೂಡಲಿಕ್ಕಲ್ಲ; ನಮ್ಮ ವೈಭವ ಸಂಪನ್ನ ಸಾಮ್ರಾಜ್ಯದ ಸಿಂಹಾಸನವನ್ನು ಧರ್ಮದಿಂದ, ನ್ಯಾಯದಿಂದ ಆಳಿ, ನಮ್ಮ ಕೀರ್ತಿಪ್ರಕಾಶವನ್ನು ಜಗತ್ತಿನಲ್ಲೆಲ್ಲ ಬೆಳಗುವಹಾಗೆ ಮಾಡಲಿಕ್ಕೆ ಹುಟ್ಟಿದೆ.

ಹಿರಣ್ಯ—ಕುಟಿಲೇ, ಧರ್ಮಶ್ರವಣವು ನನಗೇನೂ ಬೇಡ; ನಾನು ನಿನ್ನನ್ನು ಕೊಲ್ಲತಕ್ಕವನು

ಕಯಾಧು—ಕೊಲ್ಲಿರಿ . ನಾನು ಸಾಯುಲು ಸಿದ್ಧಳಾಗಿಯೇ ನಿಂತಿರುವೆನು. ಈ ಮುದ್ದು ಪ್ರಲ್ಹಾದನನ್ನು ಮಾತ್ರ ರಕ್ಷಿಸಿ. ಹೇಳುವದರಲ್ಲಿ ತಪ್ಪಿದೆ, ಆಕಳು ತಾನು ಸಾಯುವಾಗ ತನ್ನ ಕರುವಿಗಾಗಿ ಬಣವಿಯನ್ನು ಒಟ್ಟಿ ಸಾಯುವದಿಲ್ಲ .

ಹಿರಣ್ಯ—ಹೀಗೆಂದರೆ?

ಕಯಾಧು—ಪ್ರಲ್ಹಾದನನ್ನು ನನ್ನ ಗರ್ಭದಲ್ಲಿ ಕಾಯ್ದ ದೇವದೇವನೇ ಇನ್ನು ಮುಂದಾದರೂ ಅವನನ್ನು ಕಾಯತಕ್ಕವನು ಎಂದು ಹೇಳಿದೆ.

ಪ್ರಲ್ಹಾದ—ಮಾತೇ, ಮುತಿನಂಥ ಮಾತನಾಡಿದೆ. ಮಾತೇ, ಮಾತುಗಳಲ್ಲಿವು. ದೇವರ ಸತ್ಯತೆಯ ವಿಷಯುವಾಗಿ ಸರ್ವವ್ಯಾಪಕತ್ವದ ವಿಷಯುವಾಗಿ ಹೋರಾಡುತ್ತಿರುವ ಪ್ರತಿಯೊಬ್ಬ ಭಕ್ತನು ನೆನಪಿನಲ್ಲಿಡತಕ್ಕದ್ದೆಂದು ಶಿಲಾಪಟದ ಮೇಲಲ್ಲ, ಹೃತ್ಪಟದಮೇಲೆ ಕೆತ್ತಿಸಿಡತಕ್ಕ ಸುವರ್ಣಾಕ್ಷರಗಳೇ

ಆಗಿವೆ. ನಿನ್ನ ಹೊಟ್ಟೆಯಲ್ಲಿ ನನ್ನನ್ನು ರಕ್ಷಿಸಿದವನೆಂದರೆ, ಈ ಸರ್ವ ಜಗತ್ತುಗಳಲ್ಲಿರುವ ಪ್ರಾಣಿಗಳ ಪ್ರಾಣ ರಕ್ಷಣಮಾಡುವ ಶ್ರೀಹರಿಯೇ ನನ್ನನ್ನು ಕಾಯತಕ್ಕವನು. ನೀನು ದುಃಖಿಸದೆ ಸುಮ್ಮನಿರು, ನನ್ನನ್ನು ಕೊಲ್ಲುವದು ಯಾರಿಂದಲೂ ಆಗದು ಶ್ರೀಹರಿ.

ಹಿರಣ್ಯ——ಆ ಭ್ರಷ್ಟಹರಿ.

ಪ್ರಲ್ಹಾದ——ಭ್ರಷ್ಟನಲ್ಲ ಶ್ರೇಷ್ಠ ಹರಿ ಎನ್ನಿ

ಹಿರಣ್ಯ——ಹರಿನಾಮ ಬಿಡುವಿಯೋ ಇಲ್ಲವೋ?

ಪ್ರಲ್ಹಾದ——ಸುಧೆಯ ಸಾರದ ಸಾರಕ್ಕಿಂತ ಸವಿಯಾದ ಶ್ರೀಹರಿನಾಮ ಪಾನಮಾಡದಿರುವದು ಮಾತ್ರ ನನ್ನಿಂದ ಸಾಧ್ಯವೇ ಇಲ್ಲ. ಶ್ರೀಹರಿಯೇ ನನ್ನ ಪಂಚಪ್ರಾಣ. ಶ್ರೀಹರಿಯನ್ನು ಸ್ಮರಿಸದವರು ಉಸಿರಾಡಿಸುವ ಹೆಣಗಳೇ ಸರಿ. ಪ್ರಾಣಬಿಟ್ಟರೂ ಬಿಟ್ಟೇನು, ಶ್ರೀ ಹರಿನಾಮಸ್ಮರಣ ಬಿಡುವದಿಲ್ಲ.

ಹಿರಣ್ಯ——ಅದೇನೇ ಇರಲಿ, ನೀನು ನನ್ನ ಆಜ್ಞೆಗೆ ಮಾನಕೊಡದಿದ್ದರೆ ನಿನ್ನ ಪ್ರಾಣವನ್ನೇ ತೆಗೆಯುವೆನು.

ಪ್ರಲ್ಹಾದ——ನಾನು ಶ್ರೀಹರಿಯ ಪ್ರಾಣಪದಕ. ನನ್ನ ಪ್ರಾಣಕ್ಕೆ ಭಯವೇ ಇಲ್ಲವೆಂಬುದರ ಅನುಭವವು ತಮಗನೇಕಸಲ ಬಂದಿದೆಯಲ್ಲ. ತಾತಾ, ನನ್ನನ್ನು ಕೊಲ್ಲಲು, ಕೊಲ್ಲಿಸಲು ಪ್ರಯತ್ನ ಮಾಡುವದೆಂದರೆ ಗಾಳಿಯನ್ನು ಗುದ್ದಿ, ಗುದ್ದಿ ಕೈಯನ್ನು ನೋಯಿಸಿಕೊಂಡಹಾಗೆಯೇ.

ಹಿರಣ್ಯ——ಕೊಲ್ಲಿಸಲಿಕ್ಕೇಕೆ ಹೋಗಲಿ? ಇಂದು ನಾನೇ ನಿನ್ನನ್ನು ಕೊಲ್ಲತಕ್ಕವನು. ಚಾಂಡಾಲಾ, ( ಪ್ರಲ್ಹಾದನನ್ನು ಮೇಲಕ್ಕೆ ತೂರುವನು. ಅವನು ನೆಲಕ್ಕೆ ಬಿದ್ದಮೇಲೆ, ಅವನ ಎದೆಗೆ ತ್ರಿಶೂಲ ಚುಚ್ಚುವನು. ಕಯಾಧುವು ಮೂರ್ಛಿತಳಾಗಿ ಬೀಳುವಳು. )

---

# ೨ನೆಯ ಪ್ರವೇಶ

ಸ್ಥಳ....ಹಾದಿ, ಪರ್ವತ, ಸಮುದ್ರ.

**ಪಾತ್ರಗಳು.... ಮೇಘನಾದ ಸಿಂಹನಾದ ಪ್ರಲ್ಹಾದ, ಭೂದೇವಿ.**

ಬರುವರೀತಿಯು—ಮೇಘನಾದನು ಸಿಂಹನಾದನೊಡನೆ ಬರುವನು.

ಮೇಘನಾದ—ಸಿಂಹನಾದಾ, ಹೋಯಿತಯ್ಯಾ ಹೋಯಿತು ಹಾರಿ ಹೋಯಿತು.

ಸಿಂಹನಾದ—ಏನು ಹಾರಿಹೋಯಿತು?

ಮೇಘನಾದ—ಪಕ್ಷಿಯೋ ಪಕ್ಷಿ. ( ಸಿಂಹನಾದನು ನಗಲು ) ಹುಚ್ಚನಹಾಗೆ ಹೀಗೇಕೆ ನಗುವೆ?

ಸಿಂಹನಾದ—ನಿನ್ನ ಹುಚ್ಚುಚ್ಚು ಮಾತಿಗೋ ಮೇಘನಾದಾ!

ಮೇಘನಾದ—ನಾನೇನಂಥ ಹುಚ್ಚುಚ್ಚು ಮಾತನಾಡಿದೆ?

ಸಿಂಹನಾದ—ಪಕ್ಷಿಯು ಹಾರದೇ ನಮ್ಮ ಹಾಗೆ ನಡೆಯುವದೇನು? ನೀನೇ ಹೇಳು.

ಮೇಘನಾದ—ಮುಗಿಲಲ್ಲಿ ಹಾರಾಡುವ ಪಕ್ಷಿಯಲ್ಲ. ಮಾತನಾಡುವ ಪಕ್ಷಿ, ನೆಲದಮೇಲೆ ಹೀಗೆ ಒಯ್ಯಾರಮಾಡುತ್ತ ಓಡಾಡುವ ಪಕ್ಷಿ. ಈಗಲಾದರೂ ತಿಳಿಯಿತೇ. ಆ! ಪಕ್ಷಿಯು ಯಾವದೆಂಬದು?

ಸಿಂಹನಾದ—ಓಹೋ; ತಿಳಿಯಿತು.

ಮೇಘನಾದ—ಆ ಪಕ್ಷಿಯು ಯಾವದಿದೆ ಹೇಳು? ನಿನ್ನ ತಲೆಯ ಪರಿಕ್ಷೆಯು ಆಗಿಯೇ ಹೋಗಲಿ.

ಸಿಂಹದಾದ—ಸ್ವರ್ಗದಿಂದ ಹಾರಿಸಿಕೊಂಡು ಬಂದಸುಂದರಪಕ್ಷಿ ರಂಭಾರಾಣಿ. ನಾನೂ ಆವಳೂ ಕೂಡಿಯೇ ಬಂದಿರುವೆವು.

ಮೇಘನಾದ—ನನ್ನ ಹೆಂಡತಿಯನ್ನು ನೀನೇಕೆ ಕರೆದುಕೊಂಡು ಬಂದೆ?

ಸಿಂಹನಾದ—ಅಂದು ಅವಳು ನಮ್ಮಿರ್ವರ ಹೆಂಡತಿಯು ಆಗುವೆನೆಂದು ವಚನ ಕೊಟ್ಟಿದ್ದಿಲ್ಲವೆ?

ಮೇಘನಾದ—ಹೇಸಿ, ವೇಶ್ಯೆಯರ ವಚನ ಎಲ್ಲಿಯು ವಚನ ಗೋರೋಚನ. ನಾಳೆ ನಿನ್ನ ಹೆಂಡತಿಯಾಗುವೆನು, ನಾಳೆನಿನ್ನ ಹೆಂಡತಿಯಾಗುವೆನು. ಎಂದು ಹೀಗೆಯೇ ಹೇಳುತ್ತ ಹೋಗುವಳು. ಮಿತ್ರಾ, ನಾವು ಈರ್ವರೂ ಸಾಯುವವರೆಗೆ ಹೀಗೆ ಹೇಳುತ್ತ ಹೋದರೆ, ನಾವು ಅವಳ ಸುಖ ಕಾಣದೆ ಸಾಯಬೇಕಾದೀತು. ಎಲ್ಲಿದ್ದಾಳವಳು?

ಸಿಂಹನಾದ—ಅದೋ, ಆ ಗಿಡದಡಿಯಲ್ಲಿ ಮಾಲೆಯನ್ನು ಕಟ್ಟುತ್ತಿದ್ದಾಳೆ.

ಮೇಘನಾದ—ಒಂದೇ, ಎರಡೇ?

ಸಿಂಹನಾದ—ಇಬ್ಬರಿಗೂ ಒಂದೇಮಾಲೆ ಹಾಕತಕ್ಕವಳು. ನಿಷ್ಕಾರಣ ಸಂಶಯವೇಕೆ? ಅವಳನ್ನೇ ಕರೆದು ಕೇಳು. ಏನನ್ನುವಳು?

ಮೇಘನಾದ—ನನ್ನ ರಗಿಣಿ, ಚಿನ್ನದಖಣಿ, ರನ್ನದಖಣಿ ಬಾ. ಬೇಗಬಾ.

ರಂಭಾ—ಬಂದೆ ಮನೋಹರಾ ಬಂದೆ.

ಸಿಂಹನಾದ—ಮನೋಹರರಾರೇ ನಾನೋ ಅವನೋ?

ರಂಭಾ—ಈರ್ವರೂ ಮನೋಹರರೆ. ನಿಮ್ಮಲ್ಲಿರುವಂಥ ಸೌಂದರ್ಯವು ಕಾಮದೇವನಲ್ಲಿ ಕೂಡ ಇಲ್ಲ.

### ೨೨ಪದ [ಧಾಟಿ ರುಪಸುಂದರಾ]

ಮಧುಪೀಯುಷಾ ಮುದವೀವ ಹಾಸಾ |
ಮಧುರಾ ಸುಹಾಸಾ ತಮ್ಮಯ ವಿಲಾಸಾ || ಪ ||
ಸುಖಧಾಮವಾಸಾ ತಮ್ಮ ಸಹವಾಸಾ|
ಸುಖವೀವತೋಷಾ ಮಧುಪೀಯುಷಾ || ೧ ||

ಮೇಘನಾದ-ಸಿಂಹನಾದ—ಭಲೆ ಭಲೆ. (ಎನ್ನುವರು)

ಮೇಘನಾದ—ನಮ್ಮಿರ್ವರ ರೂಪವು ನಿನ್ನ ಮನಸ್ಸಿಗೆ ಬಂದಿದೆಯೋ? ಇಲ್ಲವೋ?

ರಂಭಾ—ಮನಸ್ಸಿಗೆ ಬಂದಿದೆಯೆಂದೇ ನೀವೀರ್ವರು ಹೋದ ಹೋದಲ್ಲಿ ನಿಮ್ಮ ಬೆನ್ನುಹತ್ತಿ ಸುಳಿದಾಡುತ್ತಿರುವೆನು.

ಮೇಘನಾದ—ಹಾಗಾದರೆ, ಮಾಲೆಹಾಕಲು ವಿಲಂಬವೇಕೆ?

ರಂಭಾ—ಮಾಲೆ ಹಾಕಬೇಕೆಂದೇ ಬಂದಿರುವೆನು.

ಮೇಘನಾದ-ಸಿಂಹನಾದ—ಮಾಲೆ ಹಾಕಿಯೇ ಬಿಡು; ಅನುಮಾನ ವೇಕೆ?

ರಂಭಾ—ನನ್ನ ತಲೆಯಲ್ಲಿ ಒಂದು ಪ್ರಬಲ ಸಂಶಯವು ಬಂದದ್ದರಿಂದ, ಸ್ವಲ್ಪ ಅನುಮಾನಿಸಬೇಕಾಯಿತು.

ಮೇಘನಾ-ಸಿಂಹನಾದ—ಅದಾವ ಸಂಶಯವು?

ರಂಭಾ—ಒಬ್ಬರನ್ನು ಮದುವೆಯಾಗಬೇಕೋ, ಇಬ್ಬರನ್ನು ಮದುವೆ ಯಾಗಬೇಕೋ? ಎಂದು ವಿಚಾರ ಮಾಡಿ, ಮಾಡಿ ನನ್ನ ತಲೆಯು ಕೆಟ್ಟೇ ಹೋಗಿದೆ.

ಮೇಘನಾದ—ತಲೆಕೆಡಿಸಿಕೊಳ್ಳುವ ಕಾರಣವಿಲ್ಲ. ನಮ್ಮ ವರ್ಣದವ ರಲ್ಲಿ ಹಾದರಕ್ಕೆ ದೋಷವಿಲ್ಲ; ಧರ್ಮಬಂಧನವಿಲ್ಲ; ಜಾತಿ-ನೀತಿಗಳಿಲ್ಲ ರಂಭಾ ಸಾನಿ, ನೀನಂತೂ ವೇಶ್ಯೆಯು. ಸರ್ವಜಾತಿಯವರೊಡನೆ ನಾಚಿಕೆ ಬಿಟ್ಟು ವ್ಯವಹಾರಮಾಡುವದು ನಿಮ್ಮ ಪರಮ ಪವಿತ್ರ ವೇಶ್ಯಾಜಾತಿಯ ಮೇಲಾದ ನಿರ್ಮಲ ಧರ್ಮವೇ ಆಗಿದೆಯಲ್ಲ.

ಸಿಂಹನಾದ—ಇಷ್ಟೇ ಅಲ್ಲ. ರಂಭಾಸಾನೀ, ಆಗಾಧ ತಪೋಬಲದಿಂದ ಅಮರಪದ, ಸಮ್ರಾಟಪದ ಪಡೆದ ನಮ್ಮ ಸಮ್ರಾಟರು ಗೋಮಾಂಸಭಕ್ಷಣ ಸುರಾಪಾನ ಆದಿಯಾಗಿ ನೀಚಕರ್ಮಗಳನ್ನು ಮಾಡುವ ನೀಚಾತ್ಮರನ್ನು ಸ್ವರ್ಗಕ್ಕೆ ಕಳಿಸುವ ಸಂಕಲ್ಪ ಮಾಡಿಯೇ ಸಿಂಹಾಸನವನ್ನೇರಿದ್ದಾರೆ.

ರಂಭಾಸಾನಿ—ಹೀಗಿದ್ದರೂ ಸಂಶಯ ಬಂದಿದೆ.

ಸಿಂಹನಾದ—ನಾವು ಸಾಯುವವರೆಗೆ, ಹೀಗೆ ಸಂಶಯ ಮಾಡುತ್ತ ಹೋದರೆ ನಮ್ಮ ಗತಿಯೇನು?

ಮೇಘನಾದ—ಅಧೋಗತಿ, ಎಲ್ಲಿಯಗತಿ. ಸತ್ತಮೇಲಾದರೂ ಮಾಲೆ ಹಾಕು.

ಸಿಂಹನಾದ—ಈ ಜಾತಿ ಈ ಲೋಕದಲ್ಲಿದ್ದವರಿಗೆ, ಮಾಲೆಹಾಕುವದಿಲ್ಲ. ಸತ್ತು ಸ್ವರ್ಗಕ್ಕೆ ನಡೆದ ಪುಣ್ಯಾತ್ಮರಿಗಷ್ಟೇ, ಮಾಲೆಹಾಕತಕ್ಕ ಅಪ್ಸರಾ ಜಾತಿ ಯಹೆಣ್ಣಿದು.

ರಂಭಾ—ಛೇ, ಛೇ. ನಿಮ್ಮಂಥ ಸುಂದರರು ಸತ್ತರೆ ನಾನು ಲಗ್ನ ಕಾಣದೆ, ಗುಬ್ಬಿಯಹಾಗೆ ಬಾಯ್ ಬಾಯ್ ಬಿಡಬೇಕಾದೀತು.

ಮೇಘನಾದ—ಬಂದ ಸಂಶಯವು ಪರಿಹಾರವಾಗಬೇಕಲ್ಲ.

ರಂಭಾ—ನಾನು ಹೇಳಿದಹಾಗೆ ಕೇಳಿದರೆ ಈಗ ಬಂದಸಂಶಯದ ಪರಿಹಾರವಾಗುದದು.

ಮೇಘನಾದ-ಸಿಂಹನಾದ ಕೇಳುವೆವು.

ರಂಭಾ—ನೀವಿಬ್ಬರೂ ಮಲ್ಲಯುದ್ಧ ಮಾಡಬೇಕು.

ಮೇಘನಾದ-ಸಿಂಹನಾದ ಆಗಲಿ, ನಿನ್ನೊಡನೆಯೋ? ಯಾರು ಬೇಡವೆನ್ನುವರು.

ರಂಭಾ—ನನ್ನೊಡನೆ ಅಲ್ಲ. ನೀವು ನಿಮ್ಮ ನಿಮ್ಮಲ್ಲಿ ಮಲ್ಲಯುದ್ಧ ಮಾಡಬೇಕು. ನಾನು ಗೆದ್ದವರಿಗೆ ಮಾಲೆ ಹಾಕತಕ್ಕವಳು.

ಮೇಘನಾದ-ಸಿಂಹನಾದ—ಆಗಲಿ, ನಿನ್ನಂತೆಯೇ ಆಗಲಿ. [ಮಲ್ಲಯುದ್ಧಮಾಡುವಾಗ ಮೇಘನಾದನು ಸಿಂಹನಾದನನ್ನು ನೆಲಕ್ಕೆ ಕೆಡವಿ] ರಂಭಾ ಸಾನೀ, ನಾನು ಗೆದ್ದಿದ್ದೇನೆ. ಬೇಗ ಮಾಲೆಹಾಕಲಿಕ್ಕೆ ಬಾ; ಬೇಗ ಬಾ. ನಾನು ಗೆದ್ದಿದ್ದೇನೆ.

ಮಂಜುಭಾಷಿಣಿ—[ಪ್ರಲ್ಹಾದನೊಡನೆ ಬಂದು] ನೀನು ಗೆದ್ದಿಲ್ಲ.

ಮೇಘನಾದ—ಗೆದ್ದಿರುವೆನೆಂದೇ, ಸಿಂಹನಾದನ ಎದೆಯ ಮೇಲೆ ಕುಳಿತಿದ್ದೇನೆ.

ಮಂಜುಭಾಷಿಣಿ—ಮೇಘನಾದಾ-ಸಿಂಹನಾದಾ ಏಳಿರಿ.

ಮೇಘನಾದ-ಸಿಂಹನಾದ—ನಮ್ಮಕಡೆಗೆ ನಿನ್ನದೇನು ಕೆಲಸ?

ಮಂಜುಭಾಷಿಣಿ—ನನ್ನ ಕೆಲಸವಿಲ್ಲ. ಈ ಯುವರಾಜರನ್ನು ಪರ್ವತದಮೇಲಿಂದ ಕೆಳಕ್ಕೆ ಹಾಸುಬಂಡೆಯಮೇಲೆ ನೂಕಿಬರಲಿಕ್ಕೆ, ತಮಗೆ ನಮ್ಮ ಸಮ್ರಾಟರ ಆಜ್ಞೆಯಾಗಿದೆ.

ಮೇಘನಾದ—ಉರಿಯಲ್ಲಿ ಬಿದ್ದವನು ಎದ್ದು ಹೇಗೆಬಂದನು?

ಸಿಂಹನಾದ—ನಮ್ಮ ರಾಕ್ಷಸಕುಲದ ಗಂಟಲಿಗೆ ಗಾಣನಾಗಬೇಕೆಂದು.

ಮೇಘನಾದ—ಹಾಸುಬಂಡೆಯಮೇಲೆ ಬಿದ್ದಾಗಲೂ ಸಾಯದಿದ್ದರೇನು ಮಾಡಬೇಕು?

ಸಿಂಹನಾದ—ಸಮುದ್ರದ ತೆರೆಗಳು ಬಂದು ಅವನನ್ನು ಕೊಚ್ಚಿಕೊಂಡು ಹೋಗುವವು.

ಮಂಜುಭಾಷಿಣಿ—ಸಮ್ರಾಟರ ಆಜ್ಞೆಯಂತೆ ವರ್ತಿಸುವಿರೋ? ಹೀಗೆಯೇ ತರ್ಕ ವಿತರ್ಕ ಮಾಡುತ್ತ ವ್ಯರ್ಥ ವೇಳೆಕಳೆಯುವಿರೋ?

ಸಿಂಹನಾದ–ಮೇಘನಾದ—ವರ್ತಿಸುವೆವು. ಹೋಗು ಮಹಾರಾಯಳೇ.

ಮಂಜುಭಾಷಿಣಿ— ಇಲ್ಲಿಯ ಪರಿಣಾಮವನ್ನು ಆದಷ್ಟು ಬೇಗನೆ ಮಹಾರಾಜರಿಗೆ ತಿಳಿಸಬೇಕಾಗಿ ಅಪ್ಪಣೆಯಾಗಿದೆ.

ಸಿಂಹನಾದ—ಅಪ್ಪಣೆಯ ಪ್ರಕಾರವೇ ನಡೆಯುವೆವು. ಹೋಗು, ಮಹಾರಾಯಳೇ. ( ಮಂಜುಭಾಷಿಣಿಯು ಹೋದಮೇಲೆ ) ಯುವರಾಜರೇ, ನಮ್ಮ ಮಹಾರಾಜರ ಆಜ್ಞೆಗೆ ಮರ್ಯಾದೆಕೊಟ್ಟು ಹರಿಗುಣಗಾನ ಬಿಡಿರಿ, ವ್ಯರ್ಥ ಸಾಯಬೇಡಿರಿ.

ಪ್ರಲ್ಹಾದ—ಇಲ್ಲದ ಚರ್ಚೆ ಮಾಡಬೇಡರಿ. ಮಹಾರಾಜರ ಆಜ್ಞೆಯಂತೆ ಶಾಸನಗಳನ್ನು ಶಾಂತರೀತಿಯಿಂದ ಅನುಭವಿಸಲು, ನಾನು ಸಿದ್ಧನೇ ಇರುವೆನು.

ಸಿಂಹನಾದ—ಪರ್ವತಾರೋಹಣಕ್ಕೆ ಅನುಮಾನವೇಕೆ ಬನ್ನಿ. (ಪರ್ವತದ ನೋಟ. )

ಪ್ರಲ್ಹಾದ—ಶ್ರೀಹರಿ ಗುಣಗಾನ ಮಾಡುವೆನು. ಸ್ವಲ್ಪ ನಿಲ್ಲಿ.

ಮೇಘನಾದ—ಮಾಡಿ, ಬೇಗಮಾಡಿ. ಕೊನೆಯಕಾಲದ ಸ್ಮರಣೆಗೆ ಪ್ರತಿಬಂಧವೇಕೆ? ಮಾಡಿ, ಗುಣಗಾನಮಾಡಿ. ನಾವು ಕಿವಿಗಳನ್ನು ಮುಚ್ಚಿಕೊಳ್ಳುವೆವು. ( ಕಿವಿ ಮುಚ್ಚಿಕೊಳ್ಳುವರು. )

**ಪ್ರಲ್ಹಾದ—೨೩ ಪದ ರಾಗನಂದ ತಾಳ ಜಲದ ಏಕಾಕ್ಕ.**

ಕಾಯ್ವುದೆನ್ನ ತೋರಿ ಪ್ರೇಮ | ಭಯನಿವಾರಿ ಪೂರ್ಣಕಾಮ ||
ದಯಾಪೂರ್ಣನೀ ಸುಪ್ರೇಮ || ಪ ||
ಪದಕೊಂದಿಪೆ ಪಾಡುತ ಚರಿತ |
ಮುದದಿಸಲುಹೊ ರಮಾನಾಥ | ಬಾಧೆಯ ಕಳೆಯುತ ವಿಧಾತಾ ||೧||

ನಾರಾಯಣ, ನಾರಾಯಣ. ಮೇಘನಾದಾ, ಸಿಂಹನಾದಾ, ನಡೆಯಿರಿ. ಸಮ್ರಾಟರ ಆಜ್ಞೆಯಂತೆ ನನ್ನನ್ನು ಪರ್ವತದ ಮೇಲಿಂದ ಕೆಳಕ್ಕಿರುವ ಹಾಸು ಬಂಡೆಯಮೇಲೆ ಬೀಳುವಹಾಗೆ ತಳ್ಳಿರಿ. ನನ್ನೊಡನೆ ಬನ್ನಿ. ಶ್ರೀಹರಿ ನಾರಾಯಣ ಶ್ರೀಹರಿನಾರಾಯಣ ಪಾಹಿಮಾಂ ಶ್ರೀಹರಿನಾರಾಯಣ. (ರಾಕ್ಷಸರೊಡನೆ ಪರ್ವತವನ್ನೇರಿ ಹೋಗುವನು. ರಾಕ್ಷಸರು ಪ್ರಲ್ಹಾದನನ್ನು ಪರ್ವತದ ಮೇಲಿಂದ ಕೆಳಕ್ಕೆ ನೂಕುವರು. ಗರುಡವಾಹನನಾದ ಶ್ರೀಹರಿಯು ಬಂದು ಪ್ರಲ್ಹಾದನನ್ನು ಕೆಳಕ್ಕೆ ನಿಂತ ಭೂದೇವಿಗೆ ಒಪ್ಪಿಸಿ ಮಾಯವಾಗುವನು.)

ಭೂದೇವಿಯು—(ಸ್ವಗತ) ಪಾಪ! ಮಗುವಿಗೆ ಬ್ರಬಲ ಮೂರ್ಛೆ ಬಂದಿದೆ. ಮೂರ್ಛೆಯಲ್ಲ, ಶ್ರೀಹರಿ ನಾಮಾಮೃತ ಪಾನಮಾಡಿದಾನಂದದ ಭರದಲ್ಲಿ ಮೈಮರೆತು ಸಮಾಧಿಸ್ಥನಾಗಿದ್ದಾನೆ. ಇವನ ಸಮಾಧಿ ಸುಖಕ್ಕೆ ಭಂಗ ಬಾರದಹಾಗೆ, ನಾನೇ ಇವನನ್ನು ಕಯಾಧುದೇವಿಯವರ ಮಂದಿರದ ಮುಂದಿನ ಅಂಗಳದಲ್ಲಿ ಮಲಗಿಸಿ ಬರುವೆನು. ಎಲವೋ, ದೈತ್ಯಕುಲಾಧಮಾ, ಪರಮ ಪಾಪಿಷ್ಠಾ, ನೀತಿ-ಧರ್ಮಗಳನ್ನು ಹೇಳುವ ಹೀನ-ದೀನ ಬಾಲ ಭಕ್ತನಿಗೆ ನಿಷ್ಕಾರಣ ತಾಪಕೊಡುತ್ತಿರುವ ನೀಚಾತ್ಮಾ, ತಪೋಮದದಿಂದ, ಶೌರ್ಯಮದದಿಂದ, ಭಾಗ್ಯಮದದಿಂದ ಎಚ್ಚರದಪ್ಪಿ ನಿನ್ನ ಹಾಗೆ ಅನೀತಿಯಿಂದ, ಅಧರ್ಮದಿಂದ ನಡೆಯುತ್ತ ಲೋಕಕಂಟಕರಾಗಿದ್ದ ಎಷ್ಟೋ ಮದಾಂಧರಾಜರು, ಸಮ್ರಾಟರು, ತಮ್ಮ ತಮ್ಮ ಅಹಂಕಾರದುರಿಯಲ್ಲಿ ನೊಂದು, ಬೆಂದು, ಉರಿದು, ಸುಟ್ಟು ಹಾಳಾಗಿಹೋಗಿದ್ದಾರೆ. ಇನ್ನು ಮುಂದಾದರೂ ಅಧರ್ಮದಿಂದ ಆಳುವ ಪರಮ ನೀಚ ರಾಜರು, ನೀಚ ಸಮ್ರಾಟರು ಜಗತ್ತನ್ನು ಪರಿಪರಿಯಿಂದ ಕಾಡಿದ ಭಯಂಕರ ಪಾಪಕ್ಕಾಗಿ, ತಮ್ಮ ಸರ್ವಸ್ವವನ್ನೆಲ್ಲ ಕಳೆದುಕೊಂಡು, ಬೆಂಕಿಯ ಬಾಯಿಗಾಗಲಿ ಶಸ್ತ್ರಾಸ್ತ್ರಗಳ ಬಾಯಿಗಾಗಲಿ ಬಿದ್ದು ನನ್ನಲ್ಲಿಯೇ ಲಯವಾಗಿ ಹೋಗುವರು, ಎಂದರೆ ಮಣ್ಣುಗೂಡಿ ಹೋಗುವರು. ಈ ಭೂದೇವಿಯು ಸಕಲರಾಜರೂ ಸಕಲ ಪ್ರಜರೂ ತಿಳಿದುಕೊಂಡಿರುವಂತೆ ಯಾರ ದಾಸಿಯೂ ಅಲ್ಲ. ಧರ್ಮದಿಂದ ಆಳುತ್ತಿರುವ ರಾಜರ, ಧರ್ಮದಿಂದ ನಡೆಯುತ್ತಿರುವ ಪ್ರಜರ ರಕ್ಷಣ ಮಾಡುವ ಜಗನ್ಮಾತೆಯು ಆಗಿರುವಂತೆ, ಅಧರ್ಮದಿಂದ ನಡೆವ ಲೋಕಕಂ

ಟಕ ರಾಜರನ್ನು, ಅಧರ್ಮದಿಂದ ನಡೆವ ತಾಪದಾಯಕ ಪ್ರಜರನ್ನು ಕೂಡ ಮುರಿದುಕೊಂಡು ನುಂಗುವ ಕಾಲಿಕಾಮಾತೆಯು ಆಗಿರುವಳು. ತಪೋಬಲ ದಿಂದ ಸಿಕ್ಕ ವರದಿಂದ, ಮದಾಂಧನಾಗಿ ಮದ್ದಾನೆಯಂತೆ ಮೆರೆಯುವ ನೀಚಾತ್ಮಾ, ದೈತ್ಯಕುಲಾಧಮಾ, ಹಿರಣ್ಯಕಶಿಪೋ. ನಿನ್ನ ದುಷ್ಕರ್ಮಗ ಳಿಂದ ನಿನ್ನ ಪುಣ್ಯದ ಕೊಡವು ತೆರವಾಗಿ, ಪಾಪದ ಕೊಡವು ತುಂಬುತ್ತ ಬಂದಿದೆ. ನಿನ್ನ ಆಯುಷ್ಯವೂ ತೀರಿದೆ. ದೇವದ್ರೋಹಿಯಾದ ನಿನ್ನ ದೇಹವು ಕೂಡ ಮಣ್ಣುಗೂಡಿ ಹೋಗುವಕಾಲವು ಬಂದಿದೆ. ಯಾವಲೋಕ ದಲ್ಲಿಯೇ ಆಗಲಿ, ಕಾಲನಬಾಯಿಗೆ ತುತ್ತಾಗದವರೇ ಇಲ್ಲ. ಇನ್ನು ಲೋಕ ಕಂಟಕ ಸಮ್ರಾಟನ ವಿಷಯವಾಗಿರುವ ಮಾತು ಸಾಕು. ನಾನು ಈ ಮಗು ವನ್ನು ಇವನ ತಾಯಿಯ ಮಂದಿರದಲ್ಲಿರುವ ಲತಾಮಂಟಪದಲ್ಲಿ ಮಲಗಿಸಿ ಅಂತರ್ಧಾನಳಾಗುವೆನು. ದೇವಾ!

### ೨೪ ಪದ.

ಸುರನಮಿತಾ ಕಾಮಪಿತಾ | ಸರೋಜಾಕ್ಷ ನೀ ತ್ರಾತಾ ||
ನಿರ್ಮಲ ಚರಿತಾ ನೇತಾ || ಪ ||
ನಾರಾಯಣ ತವ ಪದವ |
ನಿರುತಾ ಮನದಿ ಭಜಿಸಿ |
ಹರುಷ ಬಿಡುವ ನಿನ್ನ ಸುತಾ | ಧರಣಿಸುತಾ ಪ್ರೇಮಯುತಾ ||೧||

## ೩ ನೆಯ ಪ್ರವೇಶ

ಸ್ಥಳ ...ರಾಜಬೀದಿಯು.

**ಪಾತ್ರಗಳು.... ಹಿರಣ್ಯಕಶಿಪು ನಾರದ.**

ಬರುವರೀತಿಯು—( ನಾರದನು ಶ್ರೀಹರಿ ಗುಣಗಾನಮಾಡುತ್ತ ಬರುವನು. )

ನಾರದ—೨೫ ಪದ ರಾಗ ಪಹಾಡಿ ತಾಲಯುಕಾ್ಕ.

ಮಧುಮಧುರಾ ದೇವನಾಮಾ |
ಮುದವೀಯುವಾ ಹರಿಯುನಾಮಾ || ಪ ||
ನಾನಾವ್ಯಥೆಯು ಕಳೆವ ನಾಮಾ |
ಗುಣಪೂರ್ಣನಾ ತಾರಕ ನಾಮಾ |
ಚಿನ್ಮಯನ ಮೇಲಾದ ಆನಾಮಾ || ೧ ||

ನನ್ನ ಪ್ರಾಣನು, ವಿಶ್ವದ ಪ್ರಾಣನು, ಭಕ್ತಶ್ರೇಷ್ಠನಾದ ದೀನ ಬಾಲಕನು ಮುದ್ದು ಪ್ರಲ್ಹಾದನು ನೀಚಾತ್ಮನಾದ ಹಿರಣ್ಯಕಶಿಪುವಿನ ಆಜ್ಞೆಯಂತೆ ಅನೇಕತರದ ಕಷ್ಟಗಳನ್ನು ಅನುಭವಿಸುವದನ್ನು ನೋಡಿ ನೋಡಿ, ಸರ್ವಜಗತ್ತು ಮರಮರ ಮರಗುತ್ತಿರುವದು. ಆ ಮಹಾನುಭಾವನ ತಾಪ ಪರಿಹಾರ ಮಾಡುವದಕ್ಕಾಗಿ, ದಾನವೇಂದ್ರನ ನಾಶಕ್ಕಾಗಿ, ಅವನ ಅರಮನೆಯ ಕಡೆಗೇನೇ ಹೊರಟಿರುವೆನು. ದೈತ್ಯಸಿಂಹನನ್ನು ಕೆರಳಿ ಸಿಟ್ಟಿಗೆಬ್ಬಿಸುವೆನು, ಎಂದರೆ ಸ್ವಕಾರ್ಯದಲ್ಲಿ ರಾಷ್ಟ್ರಕಾರ್ಯವಾಗಿ ಸರ್ವರಿಗೂ ಮಂಗಲವಾಗುವದು. ಶ್ರೀಹರಿ ನಾರಾಯಣ ಹರಿ,

ಹಿರಣ್ಯ—ಹರಿ! ( ಗದಾಪಾಣಿಯಾಗಿ ಬಂದು ) ಹರಿ! ಎಲ್ಲಿದ್ದಾನೆ! ಭ್ರಷ್ಟಹರಿ.

ನಾರದ—ದೈತ್ಯೇಂದ್ರಾ ಇಷ್ಟೇಕೆ ಶಿಟ್ಟಿಗೆದ್ದಿರುವೆ?

ಹಿರಣ್ಯ—ಪ್ರಲ್ಹಾದ, ಅಲ್ಲ. ನಮ್ಮ ಕುಲವೈರಿಯನ್ನು ಗುಪ್ತವಾಗಿ ನಿಂತು ರಕ್ಷಿಸುವ ಪುಂಡಹರಿಯ ಪುಂಡಾಟವನ್ನು ಕ್ಷಣಸಹ ವಿಲಂಬಮಾಡದೆ ಬಗ್ಗುಬಡೆಯುವದಕ್ಕಾಗಿಯೇ ಹೊರಟಿರುವೆನು. ನಾರದರೇ, ವೈಕುಂಠದ ಹಾದಿಯು ಎತ್ತ ಕಡೆಗೆ ಇದೆ?

ನಾರದ—ವೈಕುಂಠವಾಸಿಯಾಗಬೇಕೆಂದು ಮಾಡಿರುವೆಯಾ? ಇಲ್ಲಿಯ ಆಳಿಕೆಯು ಸಾಕಾಯಿತೆ?

ಹಿರಣ್ಯ—ವೈಕುಂಠವಾಸಕ್ಕಲ್ಲ. ಹರಿಯಹೊಟ್ಟೆಯನ್ನು ಹರಿಯುವದಕ್ಕೆ ವೈಕುಂಠಕ್ಕೆ ಮುತ್ತಿಗೆ ಹಾಕಬೇಕಾಗಿದೆ.

ನಾರದ—ನೀನು ವೈಕುಂಠವಾಸಿಯಾಗದೆ ಆ ಕಾರ್ಯವಾಗದು.

ಹಿರಣ್ಯ—ಚೇಷ್ಟೆಮಾಡಬೇಡರಿ.

ನಾರದ—ಚೇಷ್ಟೆಯಲ್ಲ. ಹರಿಯ ಹೊಟ್ಟೆ ಹರಿಯ ಬೇಕೆಂಬುವವರು ವೈಕುಂಠಕ್ಕೆ ಹೋಗಲೇ ಬೇಕಲ್ಲ.

ಹಿರಣ್ಯ—ಹೌದು. ಹೋಗಲೇಬೇಕು, ವೈಕುಂಠದ ಹಾದಿಯು ಎತ್ತಕಡೆಗೆ ಇದೆ?

ನಾರದ—ಆ ಹಾದಿಯನ್ನು ನಿನಗೆ ತೋರಿಸಬೇಕೆಂದೇ ನಿನ್ನ ಕಡೆಗೆ ಧಾವಿಸಿ ಬಂದೆನು.

ಹಿರಣ್ಯ—ಹೀಗೋ, ಸಂತೋಷ; ಪರಮಸಂತೋಷ. ನಿಜವಾಗಿ ಹೇಳಿ ಈ ಜಗತ್ತಿನಲ್ಲಿ ಯಾರು ಶ್ರೇಷ್ಠರು; ಯಾರು ಮಹಾತ್ಮರು?

ನಾರದ—ಕೇವಲ ಪರೋಪಕಾರಕ್ಕಾಗಿ ಸರ್ವಸ್ವೀ ದಾನ ದೇಹದಾನ ಪ್ರಾಣದಾನ ಮಾಡಿದ ಜಗತ್ತಿನ ಉಪಾಸಕನು, ಅತ್ಯಂತ ಶಾಂತನು, ದಾಂ-ತನು, ವೈರರಹಿತನು, ನೀಚ ಕುಲದವನಿರಲಿ, ಉಚ್ಚಕುಲದವನಿರಲಿ, ಅವನೇ ಪೂಜ್ಯನು, ಅವನೇ ಮಹಾತ್ಮನು. ಜಗತ್ತನ್ನು ಆಳುವದೇವನು ಸಹ ಆ ಮಹಾತ್ಮನ ಗುಣಕ್ಕೆ ಲುಬ್ಧನಾಗಿ, ಹುಚ್ಚನಂತೆ ಅವನ ಮುಂದೆ ಕುಣಿಯುವನು. ದೈತ್ಯೇಂದ್ರಾ, ಸಮ್ರಾಟನು ನಾಶವಾಗುವ ಸಿಂಹಾಸನದ ಮೇಲೆ ಮೆರೆದರೆ, ಮಹಾತ್ಮನು ಪ್ರತಿಯೊಬ್ಬರ ಹೃದಯ ಸಿಂಹಾಸನದ ಮೇಲೆ ಮೆರೆಯುವನು.

ಹಿರಣ್ಯ—ಅವನಲ್ಲ; ನಾನು ಮೆರೆಯುವೆನು. ನಾರದರೇ, ನನಗಿಂತ ಹೆಚ್ಚಿನ ಮಹಾತ್ಮರೇ ಇಲ್ಲ.

ನಾರದ—ನನಗೆ ಹಾಗೆ ಕಾಣುವದಿಲ್ಲ.

ಹಿರಣ್ಯ—ಅದೇಕೆ?

ನಾರದ—ನೀನು ಹೆಚ್ಚಿನವನಾಗಿದ್ದರೆ, ನೀನಿದ್ದಲ್ಲಿಯೇಹರಿಯು ಹರಿದು ಬರುತ್ತಿದ್ದನು.

ಹಿರಣ್ಯ—ನನ್ನಕಡೆಗೇನೇ ಹರಿಯು ಹರಿದುಬರುವ ಬಲವಾದ ಯುಕ್ತಿ ಯು ತಮಗೆ ಗೊತ್ತಿದ್ದರೆ ಹೇಳಿ, ಬೇಗಹೇಳಿ.

ನಾರದ—ಆ ಯುಕ್ತಿಯನ್ನು ನಿನಗೆ ಹೇಳುವದಕ್ಕಾಗಿಯೇ ನಾನು ಇಲ್ಲಿಗೆ ಬಂದದ್ದು.

ಹಿರಣ್ಯ—ಆ ಯುಕ್ತಿಯಾದರೂ ಯಾವದಿದೆ ಹೇಳಿ?

ನಾರದ—ಈಸಲ ಶ್ರೀಹರಿಯು ಪ್ರಕಟವಾಗುವ ಹಾಗೆ ನಾನು ಮಹಾ ಮಂತ್ರ ಜಪಿಸುವೆನು. ನಿನ್ನ ಪಟ್ಟಮಹಿಷಿಯಾದ ಕಯಾಧುವಿನ ಕೈಯಿಂದಲೇ ಅವಳಮಗ ಪ್ರಲ್ಹಾದನಿಗೆ ಕಾಲಕೂಟ ವಿಷಪಾನ ಮಾಡಿಸಬೇಕು.

ಹಿರಣ್ಯ—ಆಮೇಲೆ?

ನಾರದ—ಇಷ್ಟುದಿವಸ ಮರೆಯಲ್ಲಿದ್ದು ಪ್ರಲ್ಹಾದನನ್ನು ರಕ್ಷಿಸುತ್ತಿದ್ದ ಹರಿಯು ಭಕ್ತನ ರಕ್ಷಣೆಗಾಗಿ ಪ್ರಕಟನಾಗುವನು. ಆಗ ನೀನು ಹರಿಯ ಹೊಟ್ಟೆಯನ್ನು ಹರಿದುಬಿಡು.

ಹಿರಣ್ಯ—ಆಗಲಿ, ಹಾಗೇ ಆಗಲಿ. ತಾವು ಹೇಳಿದಹಾಗೆ ಮಾಡುವೆನು. ದೇವಿಯ ಮಂದಿರದ ಕಡೆಗೆಹೋಗುವೆನು. ನಾರದರೇ, ತಂದೆ-ತಾಯಿಗಳಿಲ್ಲದ ದಿಕ್ಕೇಡಿ ಅನಾದಿಯಾದ ಹರಿಯು ನರಿಯಾಗಿ ಈ ದೈತ್ಯಸಿಂಹನ ಕೈಯಲ್ಲಿ ಸಿಕ್ಕು ಪ್ರಾಣಬಿಡುವಾಗ ಸಂಕಟಪಡುತ್ತ ಚಟಪಟ ಒದ್ದಾಡುವ ಆನಂದ ಮಯ ನೋಟವನ್ನು, ಅದೇಕಾಲಕ್ಕೆ ನಾನು ಆ ಅಧಮಾಧಮನ ಹೊಟ್ಟೆಯನ್ನು ಹರಿದು, ಕೊರಳಲ್ಲಿ ಕರುಳುಮಾಲೆ ಹಾಕಿಕೊಂಡು, ನನ್ನ ಬಂಧುವಿನ ಆತ್ಮಶಾಂತತೆಗಾಗಿ ಆ ಹರಿಯ ರಕ್ತದಿಂದಲೇ ಆ ನನ್ನ ಭಂಧುವಿಗೆ ತಿಲತರ್ಪಣ ಕೊಡುವ ಅಟ್ಟಹಾಸವನ್ನು ಹಾಗೂ ನಾನು ನನ್ನ ಬಹುದಿನದ ಇಚ್ಛೆಯು ಪೂರ್ಣವಾಯಿತೆಂದು ಆ ಆನಂದದ ಭರದಲ್ಲಿ ವೀರಗರ್ಜನೆ ಮಾಡುತ್ತ ತೋರುವ ಅದ್ಭುತ ಕಾರ್ಯವನ್ನೂ ಆಗಿನ ಆರ್ಭಟವನ್ನೂ ನೋಡುವದಕ್ಕೆ ಬನ್ನಿ

ನಾರದ—ನಾಶವಾಗುವದನ್ನು ನೋಡಲಿಕ್ಕೆ ಬರುವೆನು.

ಹಿರಣ್ಯ—ಯಾರ ನಾಶ?

ನಾರದ—ಯಾರ ನಾಶವಾಗುವದೋ ಅವರನಾಶ.

ಹಿರಣ್ಯ—ಅನ್ಯರದೇಕೆ, ಹರಿಯನಾಶವೇ ಆಗುವದು ಜಗದ್ವಿಖ್ಯಾತ ವೀರಾಧಿವೀರನಾಗಿದ್ದರೂ, ನನ್ನ ಮಗ ಅಲ್ಲ, ಆ ನೀಚನ ನೆನಪಾದೊಡನೆ ನನ್ನ ಮೈಯಲ್ಲವೂ ಉರಿಯುತ್ತದೆ.

## ೨೬ ಪದ (ಈತನೇ ನೀಚ)

ಮೂಢನೇ ಆತ ಛಲರಹಿತಾ |
ಬೇಡವನ ಚರಿತ ದನುಜಕುಲಜಾತಾ|
ನೋಡಲು ಕಂದನ ಒಡಲಾಗ್ನಿ ಜನಿಸಿ ದಹಿಪುದುಯನ್ನಾ|| ಪ||
ಎನ್ನನು ಸಲಹುವ ದೈತ್ಯವಂಶವನೇ|
ತನುಜಾತ ನಾಗಿದ್ದರು ಸುಡುವನು||
ಮನದೋಳಾಲೋಚಿಸಿ ಹರಿನಾಮುವನ್ನೆ ಭಜಿಸಿ|
ಜನಕನ ಕೊಲ್ಲುವ ವೈರಿಯೆ ಮಗನು|| ೧ ||

ನಾರದರೇ, ಅಜೇಯ, ಅಜರಾಮರ, ವೀರಾಧಿವೀರ ಸಮ್ರಾಟ, ದೇವಾಧಿದೇವನಾದ ನನ್ನೆದುರಿಗೆ ಆ ಹರಿಯು ನರಿಯೇ ಸರಿ, ನರಿಯು. (ಎಂದು ನಗುತ್ತ ಹೊಗುವನು. ನಾರಾಯಣ ನಾರಾಯಣ ಎಂದು ವೀಣೆಯ ನಾದದೊಡನೆ ಎನ್ನುತ್ತ ನಾರದರು ಹೋಗುವರು. )

---

## ೪ ನೆಯ ಪ್ರವೇಶ - (ನರಸಿಂಹಘಟ್ಟ)

ಸ್ಥಳ—ಹಿರಣ್ಯಕಶಿಪುವಿನ ರಮಣೀಯವಾದ ಮಂದಿರವು.

**ಪಾತ್ರಗಳು—ಹಿರಣ್ಯಕಶಿಪು, ಕಯಾಧು, ಪ್ರಲ್ಹಾದ, ನಾರದ, ಭೂದೇವಿ, ಶ್ರೀ ನರಸಿಂಹ.**

ಬರುವರೀತಿಯು—( ಕಯಾಧುವು ಕೈಯಲ್ಲಿ ವಿಷದ ಬಟ್ಟಲವನ್ನು ಹಿಡಿದುಕೊಂಡು ಬರುವಳು. )

ಕಯಾಧು—( ಸ್ವಗತ ) ಪತಿಯಾಜ್ಞೆಯವೇರೆಗೆ ನನ್ನ ಮಗ ಪ್ರಲ್ಹಾದನಿಗೆ ವಿಷಬೇಡ ಸರ್ವಥಾ ಬೇಡ. ಆ ದುಷ್ಟ ಕಲ್ಪನೆಯನ್ನು ಮನಸ್ಸಿನಲ್ಲಿ ತರುವದುಕೂಡ ಬೇಡ ಮರಣ ದೇವತೆಯೇ, ಈ ಅಭಾಗಿನಿಯಿಂದ ಜಗತ್ತಿಗೆ ಯಾವ ವಿಧದಿಂದಲೂ ಕಲ್ಯಾಣವಾಗುವ ಹಾಗಿಲ್ಲ. ಸಂತಪ್ತ ಹೃದ

ಯಕ್ಕೆ ಅಖಂಡಶಾಂತಿಯನ್ನು ಕೊಡುವ ದಯಾಮಯ ದೇವೀ, ಮೃತ್ಯುದೇವಿ, ಈ ನನ್ನ ದೀನವಾಣಿಗೆ ಮಾನಕೊಟ್ಟು, ಹೊಟ್ಟೆಯ ಮಗನಿಗೆ ವಿಷಕೊಡಲು ಸಿದ್ಧಳಾದ ಈ ಕಠೋರ ಹೃದಯಳ ಪ್ರಾಣಹರಣ ಮಾಡು. ಬಾ, ಬೇಗ ಬಾ. ಬರುವದಿಲ್ಲವೇ, ಬರುವದಿಲ್ಲ. ಬಂಗಾರದಂಥ ಮಗನಿಗೆ ವಿಷಕೊಡುವ ಪಾಷಾಣಹೃದಯಳ ಮುಟ್ಟಮುಖ ನೋಡಕೂಡದೆಂದು ಕರೆದರೂ ಬಾರದಾದೆಯಾ? ಹೌದು, ಹಾಗೆಯೆ ಇರಬಹುದು. ಇರಬಹುದೇಕೆ? ಈ ಪಾಪಿಯ ಪರಮ ಪಾತಕಿಯ ಕಡೆಗೆ ನೋಡುವದು ಮಹತ್ಪಾಪದ ಪರಮಾವಧಿಯಾಗಿದೆ. ದುಷ್ಟೇ, ಕಯಾಧು, ಅಮ್ಮಾ, ಅಮ್ಮಾ, ಎಂದು ನಿನ್ನ ಕಡೆಗೆ ಉಲ್ಲಾಸದಿಂದ ಬರುವ ಮಗನನ್ನು ಆನಂದದ ಭರದಲ್ಲಿ ಅಪ್ಪಿಕೊಂಡು ಅವನನ್ನು ಮುದ್ದಾಡುವದು ಬಿಟ್ಟುಕೊಟ್ಟು, ಆ ಮಗುವು ವಿಷ ನುಂಗಿ ಉರಿದುಹೋಗುವ ಹೃದಯದ್ರಾವಕ ನೋಟ, ನೋಡುವದು ಬೇಡ. ಮತ್ತೇಕೆ ಆ ದುಷ್ಟಮಯ ವಿಚಾರವು. ಪ್ರಲ್ಹಾದಾ!

**೨೭ ಪದ ರಾಗಮಾಲಕಂಸ ತಾಳ ದಾದರಾ.**

ನಿನ್ನ ಮರಣ ಎನ್ನ ಮರಣ।
ನೀನೆ ದುಃಖಕಾರಣ॥ ಎನ್ನ ಹೊಟ್ಟೆಯಲ್ಲಿ ನಿನ್ನ।
ಜನನವಾದಕಾರಣ ॥ ಪ ॥
ಇಳೆಯ ಭೋಗ ದುಃಖ ಭೋಗ।
ಬಾಲ ನೀ ಸಾಯಲಾಗಿ॥
ಎಲ್ಲಸಿರಿಯು ನೀನೆ ಎನಗೆ।
ಒಲ್ಲೆನು ನಾನೀ ಜಗ ॥ ೧ ॥

ನಾನಂತೂ ನನ್ನ ಸಂಕಲ್ಪದ ಮೇರೆಗೆ ವಿಷಪಾನ ಮಾಡಿ ಪ್ರಾಣಬಿಡುವೆನು.(ತೆರೆಯಲ್ಲಿ-ಪ್ರಲ್ಹಾದ-ಅಮ್ಮಾ, ಎಂದು ಕೂಗಲು) ಬಂದಿತು, ನನ್ನ ಪ್ರೇಮದ ಖಣಿಯು ಬಂದಿತು. ಸಾಯುವಕಾಲಕ್ಕೆ ಮುದ್ದುಮಗುವಿನ ಮುಖದಂದವನ್ನು ನೋಡುವದಾದಮೇಲೆ, ಮುದ್ದಿನ ಸವಿಯನ್ನುಂಡು ಉಂಡು ತೃಪ್ತಳಾಗಿ, ಆಮೇಲೆ ಆನಂದದಿಂದ ವಿಷಕುಡಿದು ಅವನ ಮುಖ

ಚಂದ್ರನನ್ನು ನೋಡುತ್ತ, ಅವನ ಆರಾಧ್ಯ ದೇವನಾದ ಶ್ರೀಮನ್ನಾರಾಯಣ ನನ್ನು ನೆನೆಯುತ್ತ ಪ್ರಾಣಬಿಡುವೆನು. ಹೀಗೆ ಮಾಡಲೇ? ಬೆಡ, ಬೇಡ. ಮಗನ ಮುದ್ದುಮುಖ ನೋಡಿದೊಡನೆ, ಕಠೋರ ಹೃದಯಿಯಾದ ನನಗೆ ಮತ್ತೆ ಬದುಕಬೇಕೆಂಬ ದುರಾಶೆಯು ಹುಟ್ಟೀತು. ಛೀ ಹುಚ್ಚೀ! ಇನ್ನೇಕೆ ಆ ದುರಾಶೆ, ಮೇಲಾಗಿ ಪ್ರಲ್ಹಾದನಿಗೆ ಮುದ್ದುಕೊಡುವಅಧಿಕಾರವು ನಿನಗಿಲ್ಲ. ನೀನು ಅವನನ್ನು ಕಾಯುವ ತಾಯಿಯಲ್ಲ, ಕೊಲ್ಲುವ ಮಾರಿಯು. ( ಪ್ರಲ್ಹಾದ—ಅಮ್ಮಾ, ಅಮ್ಮಾ, ಎನ್ನಲು ) ಮಗನು ಇತ್ತಕಡೆಗೇನೇ ಬರುತ್ತಿರುವನು. ಪ್ರಲ್ಹಾದಾ, ಈ ಮಾರಿಗೆ ಅಮ್ಮಾ ಎನ್ನಬೇಡ. ಆತನು ಬರುವದರೊಳಗೆ ವಿಷಪಾನ ಮಾಡಿ ಸಾಯುವೆನು. ಮಗನನ್ನು ಕೊಲ್ಲುವ ಈ ರಾಕ್ಷಸಿಯು ಬದುಕಿಯಾದರು ಮಾಡುವದೇನು? ಹಡೆದ ಮಕ್ಕಳನ್ನು ನುಂಗುವದು, ಪಾಪದ ಬೆಟ್ಟಗಳನ್ನು ಒಟ್ಟುವದು, ಮಹತ್ಪಾಪಗಳಮೇಲೆ ಮಹತ್ಪಾಪಗಳನ್ನು ಮಾಡಿದ್ದಕ್ಕಾಗಿ, ನರಕ ಕುಂಡದಲ್ಲಿ ಹುಳವಾಗಿ, ಅನಂತ ಕಾಲ ಆ ನರಕದಲ್ಲಿ ಕೊಳೆಯುತ್ತ ಹೊರಳಾಡುತ್ತ ಇರುವದು. ನಾನು ಬದಕುವದರಲ್ಲಿ ಅರ್ಥವಿಲ್ಲ. ವಿಷಕುಡಿದು ಸಾಯುವೆನು. ( ವಿಷವನ್ನು ಕುಡಿಯುವಾಗ )

ಪ್ರಲ್ಹಾದ—ನನಗಿಷ್ಟು ಕೊಡಮ್ಮಾ

ಕಯಾಧು—ನಿನಗೇನು ಕೊಡಲಿ?

ಪ್ರಲ್ಹಾದ—ನೀನು ಕುಡಿಯುವದನ್ನು

ಕಯಾಧು—ಇದು ಕುಡಿಯುವದಲ್ಲ ನಿನ್ನ ಆಯುಷ್ಯದ ಎಳೆ ಯನ್ನೇ ಕಡಿಯುವದು

ಪ್ರಲ್ಹಾದ—ಹೀಗೆಂದರೆ?

ಕಯಾಧು—ಇದು ವಿಷವು

ಪ್ರಲ್ಹಾದ—ತಾಯಿಯು ಕೈಮುಟ್ಟಿ ಕೊಡುವ ವಿಷವೇ ಅಮೃತವಾ ಗುವದು.

ಕಯಾಧು—ವಿಷವು ಅಮೃತವಾಗುವದೇ

ಪ್ರಲ್ಹಾದ—ತಾಯಿಯ ಪ್ರೇಮಪೂರ್ಣದೃಷ್ಟಿಯಲ್ಲಿ ವಿಷವನ್ನು ಅಮೃತ ವನ್ನಾಗಿ ಮಾಡುವ ಅಮೋಘಶಕ್ತಿಯಿದೆ. ಅಮ್ಮಾ, ಶ್ರೀಹರಿಯಂಥ ದೈವ

ತವಿಲ್ಲ; ಮಾತೃದೇವಿಯಂಥ ಬಂಧುವಿಲ್ಲ.

ಕಯಾಧು—ನಾನು ಮಾತೃದೇವಿಯಲ್ಲ; ನಿನ್ನನ್ನು ಹರಿದುತಿನ್ನುವ ಮೃತ್ಯುದೇವಿಯು.

ಪ್ರಲ್ಹಾದ—ಮೃತ್ಯುದೇವತೆಯಲ್ಲ. ನನ್ನನ್ನು ಕಾಯುವ ಆರಾಧ್ಯ ದೇವತೆಯು. ಅಮ್ಮಾ, ನಾನು ಜೀವಿಸಬೇಕೆಂಬ ಆಶೆಯು ನಿನಗಿದೆಯೋ, ಇಲ್ಲವೋ?

ಕಯಾಧು—ನೀನು ಜೀವಿಸಬೇಕು. ನಾನು ಸಾಯಬೇಕು.

ಹಿರಣ್ಯ— ಹಾಗಲ್ಲ. ( ಬಂದು ) ನೀನು ಜೀವಿಸಬೇಕು. ಈ ಪಾಪಾತ್ಮನು ಸಾಯಬೇಕು.

ಕಯಾಧು—ಮಗ.

ಹಿರಣ್ಯ—ಅಲ್ಲ ಇನ್ನೊಮ್ಮೆ ಆ ಶಬ್ದ ಉಚ್ಚರಿಸಬೇಡ. ಹೆಚ್ಚು ಮಾತ ನಾಡುವದರಲ್ಲಿ ಅರ್ಥವೇನಿದೆ? ನಿನಗೆ ಮಗನುಬೇಕೋ, ನಾನು ಬೇಕೋ?

ಕಯಾಧು—ಇಬ್ಬರೂ ಬೇಕು. ( ತೆರೆಯಲ್ಲಿ ಮಹಾರಾಜ! ಮಹಾ ರಾಜ ಎನ್ನಲು )

ಹಿರಣ್ಯ—ಯಾರವರು?

ಅಕ್ರೂರ—ಅಕ್ರೂರನು. [ ಬಂದು ನಮಿಸಿ ] ಮಹಾಪ್ರಭೋ, ನಮ್ಮ ಗುರುಗಳಾದ ಶುಕ್ರಾಚಾರ್ಯರ ಸಂದೇಶವಿದೆ

ಹಿರಣ್ಯ—ಅದಾವ ಸಂದೇಶವು ಹೇಳು?

ಅಕ್ರೂರ—ನಮ್ಮ ಗುರುಗಳು ಯುವರಾಜರ ನಾಶಕ್ಕಾಗಿ ನಾಗಲೋಕ ದಲ್ಲಿಯ ಭಯಂಕರ ವಿಷಯುಕ್ತ ಸರ್ಪವನ್ನು ಕಳಿಸಿದ್ದಾರೆ

ಹಿರಣ್ಯ—ಆ ಸರ್ಪವನ್ನು ಇತ್ತಕಡೆಗೆ ಕಳಿಸಿಕೊಡು

ಹಾವಾಡಿಗ—( ಬಂದು ಪುಂಗಿಯನ್ನು ಊದಲು, ಹಾವು ಉತ್ಸಾಹ ದಿಂದ ಹೆಡೆತೆಗೆದು, ಆಡತೊಡಗುವದು ) ಮಹಾರಾಜ! ಈ ಸರ್ಪವು ಚಿಕ್ಕ ದಾದರೂ ಇದರ ವಿಷವು ಬಹು ಪ್ರಖರ

ಹಿರಣ್ಯ—ಮಗೂ, ನನ್ನ ಆಜ್ಞೆಯು ನಿನಗೆ ಮಾನ್ಯವೋ, ಅಮಾ ನ್ಯವೋ?

ಪ್ರಲ್ಹಾದ—ಮಾನ್ಯವು

ಹಿರಣ್ಯ—ಹಾವಿನ ಹೆಡೆಯಮೇಲೆ ಕಾಲಿಡು.

ಕಯಾಧು—ಬೇಡ ಮಗೂ, ಬಹು ಭಯಂಕರ ಸರ್ಪ.

ಪ್ರಲ್ಹಾದ—ಸರ್ಪವಲ್ಲ, ಭಯಪಡಬೇಡ. ಇದು ನನ್ನ ತಾರಕ ಮಂತ್ರೋಪದೇಶಕ ಗುರುವಾದ ಹರನ ಕೊರಳ ಹಾರವು. ನನ್ನ ತಂದೆಯಾದ ಶ್ರೀಹರಿಯ ಮಂಚವು. ಈ ಹಾವು ನನಗೇನೂ ಮಾಡುವಹಾಗಿಲ್ಲ. (ಹಾವನ್ನು ತೆಗೆದುಕೊಂಡು ಕೊರಳಲ್ಲಿ ಧರಿಸುವನು.)

ಹಿರಣ್ಯ—ಹಾವು ಹಾರವಾಯಿತೇ! ಇನ್ಹ್ಯಾಗೆ ಮಾಡಲಿ, ಇನ್ಯಾವ ಉಪಾಯದಿಂದ ಈ ಭ್ರಷ್ಟನನ್ನು ಕೊಲ್ಲಲಿ?

ಪ್ರಲ್ಹಾದ—ನಾನು ಸಾಯಲು ಸಿದ್ಧನೇ ಇದ್ದೇನೆ.

ಹಿರಣ್ಯ—ಸಾವಿಗೆ ಹೆದರುವದಿಲ್ಲವೇ ?

ಪ್ರಲ್ಹಾದ—ಇಲ್ಲ. ರಣಹೇಡಿಗಳು ಸಾವಿಗೆ ಹೆದರುವರು. ನಾನು ಸಾವಿನ ಗಂಟಲವನ್ನೇ ಹಿಚಕಿ ಕೊಲ್ಲುವ ವೀರಪುತ್ರನು. ಮೇಲಾಗಿ, ತಾತಾ, ಸಾವೆಂದರೆ, ಈ ದೇಹಕ್ಕೆ ಹೊಸದೇಹಬಂದಂತೆ! ಕೊಳಕಬಟ್ಟೆಯು ಹೋಗಿ ಝಗಝಗಿಸುವ ಹೊಸಬಟ್ಟೆ ಸಿಕ್ಕರೆ ಹಿಗ್ಗಬೇಕೋ, ತಗ್ಗಬೇಕೋ ತಾವೇ ಹೇಳಿರಿ?

ಹಿರಣ್ಯ—ವಾದವಿವಾದ ಮಾಡಬೇಡ. ವಿಷಪಾನಮಾಡು.

ಪ್ರಲ್ಹಾದ—ತಮ್ಮ ಆಜ್ಞೆಯು ಶಿರಸಾವಂದ್ಯವು. ಅಮ್ಮಾ ವಿಷ ಕೊಡಮ್ಮಾ.

ಹಿರಣ್ಯ—ವಿಷಕೊಡಲು ವಿಲಂಬವೇಕೆ, ಕೊಡು ವಿಷವನ್ನು.

ಕಯಾಧು—ವಿಷವೇ, ಬೇಡ ನಾಥಾ! ಹಾಡಿ ಹರಿಸಿ ಆಡಿಸಿದ ಕೈಯಿಂದ, ಉಣಿಸಿ-ತಿನಿಸಿ ಹಾಲೆರದ ಕೈಯಿಂದ ವಿಷವೆರಿಯಲೇ? ಬಗೆ-ಬಗೆಯ ಉಡಿಗೆ-ತೊಡಿಗೆಗಳನ್ನು ಉಡಿಸಿ-ತೊಡಿಸಿ ಶೃಂಗರಿಸುವ ಕೈಯಿಂದ ವಿಷಕೊಡಲೇ? ಮನೆಯಲ್ಲಿ ಆನಂದದಿಂದ ನಲಿದಾಡುವ ಮಗನ ವೈಭವವನ್ನು ನೋಡಿ, ಆನಂದಾಶ್ರುಗಳನ್ನು ಸುರಿಸುವದು ಬಿಟ್ಟುಕೊಟ್ಟು, ಕೊನೆಯಸಂಸ್ಕಾರದ ಹೀನ ದೀನ ನೋಟವನ್ನು ನೋಡಿ ದುಃಖಾಶ್ರುಗಳನ್ನು ಸುರಿಸಲೇ! ಬೇಡ, ಬೇಡ. ಪ್ರಾಣೇಶ್ವರಾ, ಕೈಮುಗಿದು ಕಾಲಿಗೆಬಿದ್ದು ಹೇಳಿಕೊಳ್ಳುವೆನು. ವಿಷಕೊಡಿಸುವ ಹಟಬೇಡ. ವಿಷಕೊಟ್ಟೇತೀರಬೇಕೆಂದು ತಮ್ಮ

ಮನಸ್ಸಿನಲ್ಲಿದ್ದರೆ, ನನಗೆ ವಿಷಕೊಡಿ. ವಿಷಕೊಟ್ಟು, ಮಗನನ್ನು ಕೊಲ್ಲ ಲಾರೆ. ಆಮೇಲೆ ನಾನೂ ಬದುಕಿರಲಾರೆ.

ಹಿರಣ್ಯ—ಪ್ರಲ್ಹಾದನು ಜೀವದಿಂದ ಇರಲಿ, ನನ್ನನ್ನು ಕೊಲ್ಲಿರಿ.

ಪ್ರಲ್ಹಾದ--ಅಮ್ಮಾ, ನನಗೆ ಕಲ್ಯಾಣವಾಗಬೇಕೆಂದು ನಿನ್ನ ಮನ ಸ್ಸಿನಲ್ಲಿ ಇದೆಯೋ, ಇಲ್ಲವೋ?

ಕಯಾಧು—ನಿನ್ನ ಕಲ್ಯಾಣವೇ ನನ್ನ ಕಲ್ಯಾಣವು.

ಪ್ರಲ್ಹಾದ—ತಾವು ಇಷ್ಟೊಂದು ನೊಂದುಕೊಳ್ಳುವದೇಕೆ?

ಹಿರಣ್ಯ—ನೀನು ಸಾಯುದಹೊರತು ನನಗೆ ಶಾಂತಿಯಿಲ್ಲ.

ಪ್ರಲ್ಹಾದ—ತಮ್ಮ ಶಾಂತಿಗಾಗಿಯೇ ಈ ದೇಹವು. ಅಮ್ಮಾ, ನೀನು ನನಗೆ ವಿಷಕೊಡದಿದ್ದರೆ, ನಾನೇ ನನ್ನ ಕೊಲೆಮಾಡಿಕೊಳ್ಳಬೇಕಾ ಗುವದು.

ಕಯಾಧು—ಆತ್ಮಹತ್ಯವು ಪಾಪದಾಯಕವಲ್ಲವೇ?

ಪ್ರಲ್ಹಾದ— ಪತಿಯಾಜ್ಞೆಮೀರ ನಡೆಯುವ ಪಾಪಾತ್ಮಳ ಮಗನಾಗುವ ಷ್ಟೇನೂ ಪಾಪದಾಯಕವಲ್ಲ. ಸತಿಗೆ ಪತಿಯಾಜ್ಞೆ, ದೇವರಾಜ್ಞೆ. ಅನು ಮಾನಮಾಡದೆ ವಿಷಕೊಡಮ್ಮಾ. ಮೇಲಾಗಿ ಈ ವಿಷವು ನನ್ನ ತಾಯಿ ಯಾದ ಶ್ರೀ ಲಕ್ಷ್ಮೀದೇವಿಯ ಬಂಧುವು, ನನ್ನ ಸೋದರಮಾವನು. ಈ ವಿಷದಿಂದ ನನಗಾವ ಭಯವೂ ಇಲ್ಲ. ವಿಷಕೊಡು.

ಕಯಾಧು—( ಕೊಡಲುಹೋಗಿ ಕೈಯನ್ನು ಹಿಂದಕ್ಕೆ ತಗೆದುಕೊಳ್ಳು ವಳು ). ವಿಷ ಕೊಡಲೋ ಬೇಡೋ? ತೆಗೆದುಕೋ, ಬೇಡ.

ಪ್ರಲ್ಹಾದ—ಅನುಮಾನವೇಕೆ? [ ತಾನೇ ಆ ವಿಷದ ಬಟ್ಟಲವನ್ನು ತೆಗೆದುಕೊಂಡು ] ಆನಂದ, ಮಹದಾನಂದ! ತಂದೆ-ತಾಯಿಗಳ ಹಿತಕ್ಕಾಗಿ ಈ ದೇಹದಾನ, ಈ ಪ್ರಾಣದಾನ ಮಾಡುವ ನಾನೇ ಪುಣ್ಯಶಾಲಿಯು. ವೈಶ್ವಾನರ ರೂಪದಿಂದ ಉಂಡದ್ದನ್ನು ಅರಗಿಸುವ ನನ್ನ ತಂದೆ ಅರ್ಥಾತ್ ಜಠರಾಗ್ನಿಯಲ್ಲಿರುವ ಶ್ರೀಮನ್ನಾರಾಯಣನಿಗೆ ಈ ವಿಷವು ಅರ್ಪಣವಾಗಲಿ. [ ವಿಷಕುಡಿದು ] ತಾತಾ, ವಿಷವಲ್ಲ ಅಮೃತವಿದು! ಬಲುಸವಿ. ಇನ್ನಿ ಷ್ಟಿದ್ದರೆ ಕೊಡಮ್ಮಾ.

ಹಿರಣ್ಯ—ವಿಷವು ಅಮೃತವಾಯಿತೇ!

ಪ್ರಲ್ಹಾದ—ಅಹುದು . ತಾಯಿಯ ಪ್ರೇಮಕಟಾಕ್ಷದ ಬಲದಿಂದ ಶ್ರೀ ಹರಿಯ ಅನುಗ್ರಹದಿಂದ ವಿಷವು ಅಮೃತವಾಯಿತು .

ಹಿರಣ್ಯ—ತಾಯಿಯ ಪ್ರೇಮಕಟಾಕ್ಷದ ಬಲವಂತೆ! ಶ್ರೀಹರಿಯ ಅನುಗ್ರಹವಂತೆ! ಮೂರ್ಖಾ, ನೀನು ನನ್ನ ಸಲುವಾಗಿ ನಿನ್ನ ದೇಹದಾನ ಮಾಡಲು ಸಿದ್ಧನಾಗಿರುವಿಯೋ, ಇಲ್ಲವೋ?

ಪ್ರಲ್ಹಾದ—ನಾನು ಯಾವಾಗಲೂ ಸಿದ್ಧನಾಗಿದ್ದೇನೆ . ಈ ದೇಹವು ತಮ್ಮಿಂದಾಗಿದೆ . ಇದರಮೇಲೆ ತಮ್ಮದೇ ಸಂಪೂರ್ಣ ಅಧಿಕಾರ ಇದೆ . ಈ ದೇಹವನ್ನು ತಮ್ಮ ಪಾದಕ್ಕೆ, ನನ್ನ ಪ್ರಾಣಪುಷ್ಪವನ್ನು ಶ್ರೀಹರಿಯ ಪರಮ ಪವಿತ್ರ ಹಾಗು ಪೂಜ್ಯ ಪಾದಕ್ಕೆ ಅರ್ಪಣಮಾಡಿದ್ದೇನೆ .

ಹಿರಣ್ಯ—ನಾನೇ ಈ ಖಡ್ಗದಿಂದ ನಿನ್ನ ಶಿರ ಹಾರಿಸಿಬಿಡುವೆನು . ( ಖಡ್ಗದಾಟವು ಶಿರದಮೇಲೆ ನಡಿಯುದಾಗಲು ) ಹದನವಾದ ಖಡ್ಗದಾಟವು ಕೂಡ ಶಿರದಮೇಲೆ ನಡೆಯುದಾಯಿತಲ್ಲ! ಹೀಗೆ ಹೇಗಾಯಿತು?

ಪ್ರಲ್ಹಾದ—ನನ್ನ ಅಹಿಂಸಾವ್ರತದ ವರ್ತನೆಗೆ ಮೆಚ್ಚಿದ ಶ್ರೀಹರಿಯ ಅನುಗ್ರಹದಿಂದ ಅಗ್ನಿಯು ಚಂದನದಂತೆ ಶೀತಲವಾಯಿತು . ಕಲ್ಲು ಹಾಸಿಗೆಯಾಯಿತು . ಹಾವು ಮಲ್ಲಿಗೆಹಾರವಾಯಿತು . ಸಮುದ್ರವು ಆಡುವ ಅಂಗಳವಾಯಿತು . ಅದರಂತೆ ಈ ಖಡ್ಗವು ಮೊಂಡಾಯಿತು .

ಕಯಾಧು—ಪತಿದೇವಾ, ಶ್ರೀ ಹರಿಭಕ್ತರನ್ನು ಕಾಡುವ ಛಲವು ಸಾಕಿನ್ನು .

ಹಿರಣ್ಯ—ಮಧ್ಯೆ ಮಧ್ಯೆ, ನೀನು ಮಾತನಾಡುವದು ಸಾಕಿನ್ನು . ನನ್ನ ಹಾದಿಗೆ ಬರಬೇಡ . ಇನ್ನು ನಿನ್ನ ಹಾದಿ ನಿನಗೆ . ನನ್ನ ಹಾದಿ ನನಗೆ. ಹೋಗು; ಇನ್ನು ಇಲ್ಲಿ ನಿಲ್ಲಬೇಡ ಹೋಗು. ಹೋಗಿಯೇಬಿಡು. ನಾನೂ ಹೋಗುವೆನು.

ಕಯಾಧು—ಹೋಗಲೇ?

ಹಿರಣ್ಯ—ಹೋಗು, ಹೋಗು. (ಕಯಾಧುವು ನಮಿಸಿ ಹೋದಮೇಲೆ) ಮಗೂ, ನಿನ್ನ ವಿಷಯವಾಗಿ ಹಗಲಿರುಳು ಕಳವಳ ಬಡುತ್ತಲಿದ್ದೇನೆ.

ಪ್ರಲ್ಹಾದ—ನನಗೂ ತಮ್ಮವಿಷಯವಾಗಿ ಬಹು ಕನಿಕರ ಬರುತ್ತದೆ. ತಾತಾ, ಮಗನೆಂಬ ಭ್ರಾಂತಿಯಿಂದ ಹೊಲಸಿನ ಗುಂಡಿಯಲ್ಲಿ ಹುಟ್ಟಿ ಬೆಳೆದು

ಬಂದ ಈ ಮಾಂಸದ ಮುದ್ದಿಯಮೇಲೆ ಕಾಗೆ ರಣಹದ್ದುಗಳಹಾಗೆ ಆಶೆಮಾಡು ತ್ತಿರುವ ಹುಚ್ಚ ತಾಯಿತಂದೆಗಳನ್ನು ನೋಡಿ ನನಗೆ ಬಹು ನಗೆಯು ಬರು ತ್ತದೆ.

ಹಿರಣ್ಯ—ನಗೆಹೋಗಿ ಹೊಗೆಯಾದೀತು. ನೀನು ಹೇಳುವದಾದರೂ ಏನು?

ಪ್ರಲ್ಹಾದ—ಆಶೆತೋರಿಸಿ ತಿರುತಿರುಗಿ ನರಕದ ಗುಂಡಿಯಲ್ಲಿ ದಬ್ಬಿ, ನರಳುವಹಾಗೆ ಮಾಡುವ ಈ ಮಾಂಸದ ಕರಣಿಗೆ ಮರುಳಾಗದೆ, ನರಕದಲ್ಲಿ ನರಳುವವರನ್ನು ಮೇಲಕ್ಕೆತ್ತಿ, ಆನಂದಸಾಗರದಲ್ಲಿ ತೇಲಿಬಿಡುವ ಶ್ರೀ ಹರಿ ನಾಮವೆಂಬ ಪ್ರೇಮದ ಸವಿಕರಣಿಯನ್ನು ಸವಿಸವಿದು ಆನಂದದಿಂದ ನಲಿದಾ ಡಿರಿ. ಆ ದೇವನ ಭಜನಮಾಡಿರಿ. ಎಂದು ಪುನಃ ಪುನಃ ತಮಗೆ ಬೇಡಿ ಕೊಳ್ಳುವೆನು.

ಹಿರಣ್ಯ—ಎಲವೋ, ಭ್ರಮಿಷ್ಟಾ, ಪ್ರಲ್ಹಾದಾ, ಸ್ವರ್ಗಪದ, ಹರ ಪದ, ಹರಿಪದ ನೀನು ಬೇಡಿದ ಪದಕೊಡಲಿಕ್ಕೆ ಈ ದೇವನು ಸಮರ್ಥ ನಿರುವಾಗ, ಅನ್ಯ ದೇವನನ್ನು ಭಜಿಸುವ ಹುಚ್ಚು ನಿನಗೇಕೆ ಹಿಡಿಯಿತು?

ನಾರದ—(ಬಂದು) ನಿನ್ನ ಹುಚ್ಚು ಬಿಡಿಸಬೇಕೆಂದು, ಅವನಿಗೆ ಹುಚ್ಚು ಹಿಡಿದದೆ.

ಹಿರಣ್ಯ—ಹೀಗೆಂದವರಾರು? (ನಾರದರನ್ನು ನೋಡಿ) ನಾರದರೇ, ನನಗೆ ಹುಚ್ಚು ಹಿಡಿದಿರುವದೇ?

ನಾರದ—ಹುಚ್ಚು ಹಿಡಿದಿರುವದೆಂದೇ ರಾಜಧರ್ಮವನ್ನು ಕಾಲಿನಿಂದ ತುಳಿಯುತ್ತ ಮನ ಬಂದಂತೆ ಆಳುವ ರಾಜ ಕೋಣನಾಗಿರುವೆ.

ಹಿರಣ್ಯ—ನ್ಯಾಯಾಧೀಶರ ನ್ಯಾಯಾಧೀಶನೂ, ಸಮ್ರಾಟರ ಸಮ್ರಾ ಟನೂ ಆದ ನನ್ನ ಕೃತಿಗೆ ಹೆಸರಿಡುವವರಾರು?

ನಾರದ—ಶ್ರೀಹರಿಯು. ದೈತ್ಯೇಂದ್ರಾ, ಆ ಶ್ರೀಹರಿಯೇ ನ್ಯಾಯಾಧೀ ಶರ ನ್ಯಾಯಾಧೀಶನು; ಸಮ್ರಾಟರ ಸಮ್ರಾಟನು; ದೇವದೇವನು ಕೂಡ ಆಗಿ ರುವನು. ಶಾಂತತಾಮಯನು, ಅಹಿಂಸಾಮಯನು ಆದ ಪ್ರಲ್ಹಾದನ ಅರ್ಥಾತ್ ಈ ಮಹಾತ್ಮನ ಎದುರಿಗೆ, ನಿನ್ನ ಕಠೋರ ರಾಜ ಸತ್ತೆಯ ಆಟವು ನಡೆಯುವ ಹಾಗೆಯೇ ಇಲ್ಲ. ನೀ ನಿನ್ನ ವೈಕುಂಠಕ್ಕೆ ಹೋಗು.

ಹಿರಣ್ಯ——ನಾನು ಸಾಯಲಿ?

ನಾರದ——ನೀನು ಸಾಯುದ ಹೊರತು, ನಿನ್ನ ಜೀವಕ್ಕೆ ಸಮಾಧಾನ ವಾಗುವ ಹಾಗಿಲ್ಲ.

ಹಿರಣ್ಯ——ನನ್ನನ್ನು ಕೊಲ್ಲಲು ಬಂದಿರುವಿರಾ?

ನಾರದ——ನಾನೇನು ಕೊಲ್ಲುವವನಲ್ಲ. ಕೊಲ್ಲಿಸಲು ಬಂದಿರುವೆನು.

ಹಿರಣ್ಯ——ನಿಮಗೆ ಹುಚ್ಚು ಹಿಡಿದಿರುವದೇ?

ನಾರದ——ನನಗಲ್ಲ. ನಿನಗೆ ಹುಚ್ಚು ಹಿಡಿದದೆ.

ಹಿರಣ್ಯ——ಅದೇತರಮೇಲಿಂದ ಹೀಗೆ ಹೇಳುವಿರಿ ?

ನಾರದ——"ನಾರದರೇ, ವೈಕುಂಠಕ್ಕೆ ಹೋಗುವ ಹಾದಿಯನ್ನು ತೋರಿಸರಿ. ನಾನು ವೈಕುಂಠಕ್ಕೆ ಮುತ್ತಿಗೆ ಹಾಕಿ, ನನ್ನ ವೈರಿಯನ್ನು ಕೊಲ್ಲಬೇಕಾಗಿದೆ" ಎಂದು ನೀನು ನನ್ನ ಮುಂದೆ ಹೇಳಿದ್ದಿಲ್ಲವೆ?

ಹಿರಣ್ಯ——ಹೇಳಿದ್ದೆ, ಹೇಳಿದ್ದೆ. ಈಗಲೂ ಹಾಗೆಯೇ ಹೇಳುವೆ.

ನಾರದ——ನಿನ್ನ ಹೇಳಿಕೆಯ ಪ್ರಕಾರವೇ, ನಾನು ನಿನ್ನನ್ನು ವೈಕುಂಠಕ್ಕೆ ಕಳಿಸಲು ಬಂದಿದ್ದೇನೆ.

ಹಿರಣ್ಯ——ಶ್ರೀಹರಿ ಎಲ್ಲಿದ್ದಾನೆ ಹೇಳಿ? ಭಗವನ್, ನೀವು ಮೇಲಿಂದ ಮೇಲೆ ಹರಿ-ಹರಿ ಎಂದು ಬೊಗಳುವಿರಲ್ಲ. ಆ ಹರಿಯು ಎಲ್ಲಿದ್ದಾನೆ ಹೇಳಿ? ಕಣ್ಣಿಗೆ ಕಾಣದಹಾಗೆ ಇರುವ ಆ ಕಳ್ಳನು ಬ್ರಹ್ಮಾಂಡದಲ್ಲಿದ್ದರೆ ಆ ಬ್ರಹ್ಮಾಂಡವನ್ನು ಭೇದಿಸುವೆನು, ಭೂಗರ್ಬದಲ್ಲಿ ಇದ್ದರೆ, ಭೂಗರ್ಭವನ್ನು ಭೇದಿಸುವೆನು. ಅಂತರಿಕ್ಷದಲ್ಲಿದ್ದರೆ ಅಂತರಿಕ್ಷಕ್ಕೆ ಹಾರುವೆನು. ಸಮುದ್ರದಲ್ಲಿದ್ದರೆ ಸಮುದ್ರವನ್ನೇ ಬತ್ತಿಸಿ ಬಿಡುವೆನು. ಪರ್ವತಗಳಲ್ಲಿದ್ದರೆ ಈ ವಜ್ರ ಮುಷ್ಟಿಯ ಒಂದೇ ಒಂದು ಪ್ರಹರದಿಂದ ಪರ್ವತಗಳನ್ನು ಪುಡಿ ಪುಡಿ ಮಾಡಿ ಬಿಡುವೆನು. ಸಾರಾಂಶ ನನ್ನ ಅರಿಯಾದ ಹರಿಯನ್ನು ಇದ್ದಲ್ಲಿಂದ ಎಳ ತಂದು ಆ ಹರಿ....

ನಾರದ——ಹರಿ, ಹರಿ, ಎಂದು ಬೊಗಳಿಯೇ ಸಾಯುವೆ.

ಹಿರಣ್ಯ——ನಾನು ಸಾಯುವೆನೆ?

ನಾರದ——ಸಾಯುಬೇಕಾದರೆ ಸಾಯಿ.

ಹಿರಣ್ಯ——ನಾನು ಸಾಯುವವನಲ್ಲ, ಕೊಲ್ಲುವವನು. ಏ! ಭ್ರಮಿ-

ಷ್ಟ್ರಾ, ಪ್ರಲ್ಹಾದಾ, ಮೇಲಿಂದ ಮೇಲೆ ಹರಿ, ಹರಿ, ಎಂದು ಬೊಗಳುವೆಯಲ್ಲ, ಆ ಹರಿಯು ಎಲ್ಲಿದ್ದಾನೆ?

ಪ್ರಲ್ಹಾದ—ಎಲ್ಲಕಡೆಯಲ್ಲಿಯೂ ಇದ್ದಾನೆ.

ಹಿರಣ್ಯ—ಹಾಗಾದರೆ ಕಾಣುವದಿಲ್ಲವೇಕೆ?

ಪ್ರಲ್ಹಾದ—ನನ್ನ ಶ್ರೀಹರಿಯು ಜ್ಞಾನದ ಬೆಳಕಿನಲ್ಲಿಯೂ ಉದಯಿಸಿ ಬರುವ ಅನಂತಾನಂತಕೋಟಿ ಸೂರ್ಯರ ಬೆಳಕಿನಲ್ಲಿಯೂ ಕೂಡ ಕಾಣುವವನಲ್ಲ; ಭಕ್ತಿಯ ಬೆಳಕಿನಲ್ಲಿ ಮಾತ್ರ ನನ್ನ ನರಹರಿಯು ಹರಿದಾಡುವದೂ, ನಗುವದೂ, ಕುಣಿಯುವದೂ ಕಾಣುವದು. ತಾತಾ, ಯೋಗಿಗಳ ಮನೋವೇಗಕ್ಕೆ, ವೇದಗಳ ನಿರ್ಮಲ ಮತಿಗೆ ಸಿಲುಕದ ಸಿಲುಕದ ಹರಿಯು ನಿರ್ಮಲ ಭಕ್ತರು ಹರಿ ಹರಿ ಎಂದು ಕರುಣೆಯಿಂದ ಕರೆದೊಡನೆಯೇ, ಸಪ್ತಪಾತಾಳದಾಚೆಯಲ್ಲಿ ಕಗ್ಗತ್ತಲೆಯಲ್ಲಿ ಇದ್ದರೂ, ಒಂದರಗಳಿಗೆಯಲ್ಲಿ ಕಣ್ಮುಚ್ಚಿ ಕಣ್ತೆರೆಯುವಷ್ಟರಲ್ಲಿ ಓಡಿಬಂದು ಭಕ್ತರಮುಂದೆ ಕುಣಿಯುವನು.

ಹಿರಣ್ಯ—ಆ ಹಾಳುವಿಷಯವಿರಲಿ. ಈ ಸಭಾಸ್ತಂಭದಲ್ಲಿ ನಿನ್ನ ಹರಿಯು ಇರುವನೋ ಇಲ್ಲವೋ?

ಪ್ರಲ್ಹಾದ—ಎಲ್ಲ ಕಡೆಯಲ್ಲಿ, ನಾವು ಇಲ್ಲದಲ್ಲಿ, ನಾವು ನೋಡುವಲ್ಲಿ, ನನ್ನಲ್ಲಿ ನಿನ್ನಲ್ಲಿ ಇರುವ ಶ್ರೀಹರಿಯು ಈ ಸಭಾಸ್ತಂಭದಲ್ಲಿ ಖಂಡಿತವಾಗಿಯೂ ಇರುವನು.

ಹಿರಣ್ಯ—ಬಹು ಒಳಿತಾಯಿತು. ನಾನು ಬಹುದಿನಗಳಿಂದ ಕೊಲ್ಲಬೇಕೆಂದು ಹವಣಿಸುತ್ತಿದ್ದ ಹರಿಯು ತಾನಾಗಿಯೇ ಬಂದು ಈ ದೈತ್ಯಸಿಂಹನ ಕೈಯಲ್ಲಿ ಸಿಕ್ಕಂತಾಯಿತು.

ನಾರದ—ಅಯ್ಯೋ! ಪಾಪ; ಬಡಪ್ರಾಣಿಯಾದ ಚಿಗರಿಯು ಆಡತಾ ಆಡತಾ ತಾನೇ ಹೋಗಿ ಸಿಂಹದ ಬಾಯಿಯಲ್ಲಿ ಬಿದ್ದಂತಾಯಿತು.

ಹಿರಣ್ಯ—ಸಿಂಹನಾರು; ನಾನೋ; ಅವನೊ?

ನಾರದ—ಸಿಂಹನಾರು–ನರಸಿಂಹನಾರು? ಎಂಬುದನ್ನು ಇನ್ನುಮೇಲೆ ನಿರ್ಣಯಿಸಬೇಕಾಗಿದೆ.

ಹಿರಣ್ಯ—ಈ ದೈತ್ಯಸಿಂಹನೆದುರಿಗೆ ಯಾವ ಸಿಂಹನ ಆಟವೂ ನಡೆ

ನಡೆಯುವ ಹಾಗಿಲ್ಲ. ಪ್ರಲ್ಹಾದಾ, ಪ್ರಬಲ ಶಸ್ತ್ರವನ್ನು ತರಲಿಕ್ಕೆ ಶಸ್ತ್ರಾಗಾರಕ್ಕೆ ಹೋಗುವೆನು. ನಾನು ಬಂದೊಡನೆಯೇ ನಿನ್ನ ಹರಿಯನ್ನು ನನಗೆ ಒಪ್ಪಿಸು.

ನಾರದ—ನಿನ್ನನ್ನೇ ಹರಿಗೆ ಅರ್ಪಿಸುವನು. ದೈತ್ಯಸಿಂಹಾ, ನೀನು ನನ್ನ ನರಸಿಂಹನೆದುರಿಗೆ ಸರಿಯಾಗಿರುವೆ, ಸರಿ.

ಹಿರಣ್ಯ—ಶಕ್ಯವಿಲ್ಲ. ನಾನೇ ಸಿಂಹ, ಪ್ರಬಲಸಿಂಹ. ಯಾರು ಸಿಂಹರು ಯಾರು ನರಸಿಂಹರು ಎಂಬದು ತಾನೇ ನಿರ್ಣಯವಾಗುವದು. ನಾನೇ ನನ್ನ ಶಸ್ತ್ರಾಗಾರಕ್ಕೆ ಹೋಗಿ, ನನ್ನ ಪ್ರೀತಿಯ ಚಂದ್ರಾಯುಧವನ್ನು ತಂದು, ಹರಿಯ ಶಿರ ಹಾರಿಸುವೆ ಹರಿಯ ಶಿರ, ಶಿರ. ( ಹೋಗುವನು )

ನಾರದ—ನಿನ್ನ ಶಿರವೇ ಹಾರಿಹೋಗುವದು.

ಪ್ರಲ್ಹಾದ--ದೇವಾ, ಭಕ್ತರಕ್ಷಕಾ, ಇನ್ನು ನನ್ನ ಪರೀಕ್ಷೆಯ ಕಾಲವಲ್ಲ. ನಿನ್ನ ಪರೀಕ್ಷೆಯ ಕಾಲವು ಬಂದಿತು. ಈ ನನ್ನ ಗುರುವರ ಮಹಾತ್ಮರು ನನಗೆ ಹೇಳಿಕೊಟ್ಟ ಅಹಿಂಸಾತತ್ವದ ಮಂತ್ರದಲ್ಲಿ ದುಷ್ಟ ಸಮ್ರಾಟರ ಹಿಂಸಾಮಯ ಶಕ್ತಿಯ ನಾಶಮಾಡುವ ಶಕ್ತಿಯಿದ್ದರೆ, ದುಷ್ಟರನ್ನು ಸಂಹರಿಸಿ, ಶಿಷ್ಟರನ್ನು ರಕ್ಷಿಸಿ, ಧರ್ಮಸ್ಥಾಪಿಸುವ ಧರ್ಮಪ್ರಭುವು ನೀನಾಗಿದ್ದರೆ, ನಿನಗೆ ಭಕ್ತರು ಬೇಕಿದ್ದರೆ ನನ್ನಮೊರೆಗೆ ಕರಗಿ ಓಡಿಬಾ, ಭಕ್ತರಧೊರೆಯೇ, ನಾನು ನನ್ನ ಸಲುವಾಗಿ ನನ್ನಹಿತಕ್ಕಾಗಿ ಹಲಬುವದಿಲ್ಲ. ನಿನ್ನ ಸಾಮರ್ಥ್ಯದ ಸತ್ಯ ತತ್ವಕ್ಕಾಗಿ, ನೀನುಎಲ್ಲೆಲ್ಲಿಯೂ ಇರುವೆಯೆಂಬ ನಿನ್ನ ವಿಶ್ವವ್ಯಾಪಕತ್ವದ ತತ್ವಕ್ಕಾಗಿ, ಈ ಪ್ರಲ್ಹಾದನು ಅಹಿಂಸಾ ಎಂಬ ಪ್ರಥಮ ಪುಷ್ಪವನ್ನು ನಿನ್ನ ಪವಿತ್ರಪಾದಕ್ಕೆ ಅತ್ಯಂತ ಭಕ್ತಿಪೂರ್ವಕ ಅರ್ಪಿಸಿದ್ದಾನೆ. ಬಿಸಲಿಗೆ ಕಮರುವ ಬಾಡುವ ಹೂವು ನಿನ್ನ ಪ್ರಭುತ್ವಕ್ಕೆ ಸರಿಯಾದದ್ದಲ್ಲವೆಂದು, ಎಂದೆಂದೂ ಬಾಡದ ಈ ಹೃದಯಪುಷ್ಪವನ್ನೇ ನಿನ್ನ ಪರಮ ಪಾವನತರ ಪಾದಕ್ಕೆ ಅರ್ಪಿದ್ದೇನೆ. ದೇವಾ, ನಾರಾಯಣಾ, ಶ್ರೀಮನ್ನಾರಾಯಣಾ.

**೨೮ ಪದ ರಾಗ ಸಾರಂಗ ತಾಲ ಏಕ್ತಾ.**

ಹರ ನಮಿತಾ ಬಾಸದಯಾ ನಮಿಪೆ ವಂದಿತಾ || ಪ ||
ನಳಿನ ನಯನ ವಿಮಲಮೂರ್ತಿ |

ನಲಿನಲಿದುಲಿವಾ ಶ್ರೀ ಮನೋಹರ ||
ವಲಿಯೆ ಸುಖಾ ಇಳೆಗೆ ಸಖಾ |
ಕೇಳಿ ಮರೆಯ ಮಮಸಖಾ ||
ಬಾಲವಚನ ನಡಿಸೆ ಸುಖಾ |
ಸಲಹೋ ನೀ ತಾರಕಾ ||
ಇಳೆಯ ನಾಯಕಾ ನಾನು ಬಾಲಕಾ |
ಉಳಿಯಲಾರೆ ತೋರು ಸುಮುಖ ||
ಘಳಿಗೆಯೊಳಗೆ ಕಂಬದಿಂದ ಬಂದು ನರಹರಿ || ೧ ||

ದೇವಾ, ನೀನು ಭಕ್ತರಕ್ಷಕ ವಿಶ್ವರಕ್ಷಕ ವಿಶ್ವವ್ಯಾಪಕ ಪ್ರಭುವು ಹೌದೋ, ಅಲ್ಲವೋ ಎಂಬುದನ್ನೇ ಪರೀಕ್ಷಿಸುವಕಾಲ ಬಂದಿದೆ. ಕರುಣಾಸಾಗರಾ, ಇಲ್ಲಿಯವರೆಗೆ ನನ್ನನ್ನು ಅನೇಕ ಸಂಕಟಗಳಿಂದ ರಕ್ಷಿಸಿದ ನೀನೇ ಇನ್ನುಮೇಲಾದರೂ ನನಗೆ ತಾರಕನೂ ಪೋಷಕನೂ ಆಗಿರುವೆ. ನನ್ನ ಸರ್ವಭಾರವು ನಿನ್ನ ಮೇಲಿಯೇ. ದೇವಾ, ಹರಿ.

ಹಿರಣ್ಯ—(ಚಂದ್ರಾಯುಧವನ್ನು ಹಿಡಿದುಕೊಂಡು ಕಯಾಧುವಿನೊಡನೆ ಬಂದು) ಹರಿ, ಹರಿ, ಹರಿ ಎಲ್ಲಿದ್ದಾನೆ; ಹರಿ, ನಿನ್ನ ಹರಿ. ಎಲ್ಲಿಯು ಹರಿ? ನಾನು ಬಂದೊಡನೆಯೇ ನಿನ್ನ ಹರಿಯು ನರಿಯಾದನು, ನರಿಯು. ಬಾ, ನಿನ್ನನ್ನೇ ಈ ಚಂದ್ರಾಯುಧಕ್ಕೆ ಆಹುತಿಕೊಟ್ಟು, ನಿನ್ನನ್ನು ನಿನ್ನ ಹರಿಯ ಕಡೆಗೆ ಕಳಿಸುವೆನು.

ಪ್ರಲ್ಹಾದ— ನಾನು ಹರಿಯಕಡೆಗೆ ಹೋಗಲು ಸಿದ್ಧನಾಗಿಯೇ ಇರುವೆನು.

ಹಿರಣ್ಯ—ಹೋಗುವಕಾಲಕ್ಕೆ ನಿನ್ನ ಇಚ್ಛೆಯಾದರೂ ಏನಿದೆ?

ಪ್ರಲ್ಹಾದ—ಹರಿಯಕಡೆಗೆ ಕಳಿಸರಿ. ಇನ್ನಾವ ಬೇರೆ ಇಚ್ಛೆಯೇ ಇಲ್ಲ.

ಹಿರಣ್ಯ—ವ್ಯರ್ಥಸಾಯಬೇಡ. ಮಗೂ, ನಾನು ಹೇಳಿದಂತೆ ಕೇಳಿ ರಾಜ್ಯವನ್ನಾಳು.

ಪ್ರಲ್ಹಾದ—ನನಗೆ ರಾಜ್ಯಬೇಡ, ಸ್ವರಾಜ್ಯಬೇಡ. ಭಕ್ತಿಯೇ ನನ್ನ ಸ್ವರಾಜ್ಯ, ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು. ತಾತಾ, ನಾನು ಶ್ರೀಹರಿನಾ

ರಾಯಣ ನಾರಾಯಣ ಎನ್ನುತ್ತ ಶ್ರೀ ಹರಿಧ್ಯಾನದಲ್ಲಿ ಮುಳುಗಿ, ಆನಂದಾ ಶ್ರುಗಳನ್ನು ಸುರಿಸುತ್ತಿರುವಾಗ ನನ್ನ ಶಿರವನ್ನು ಛೇದಿಸಿರಿ. ಇಷ್ಟೇ ತಮ್ಮ ಪರಮ ಪೂಜ್ಯಪಾದ ಸನ್ನಿಧಾನದಲ್ಲಿ ನನ್ನ ಸವಿನಯ ಪ್ರಾರ್ಥನೆಯು ಇದೆ. ಕ್ಷಣಶಃ ವಿಲಂಬಮಾಡದೆ, ನನ್ನನ್ನು ಈ ಚಂದ್ರಾಯುಧಕ್ಕೆ ಆಹುತಿಕೊಟ್ಟು ಆದಷ್ಟು ಬೇಗ ನನ್ನನ್ನು ಶ್ರೀಹರಿಯಕಡೆಗೆ ಕಳಿಸಿಕೊಡರಿ. ಗುರುವರಾ, ನಿದರ್ಶನಕ್ಕೆ ಬಂದಿತು

ಹಿರಣ್ಯ—ಏನು ನಿದರ್ಶನಕ್ಕೆ ಬಂದಿತೋ ಮೂರ್ಖಾ.

ಪ್ರಲ್ಹಾದ—ಲೋಕಕಂಟಕನಾದ ಕ್ರೂರ ವಿಶ್ವಶಕ್ತಿಯ ಅರ್ಥಾತ್ ಹಿಂಸಾಮಯ ಸಮ್ರಾಟನ ಕ್ರೂರ ರಾಜಸತ್ತೆಯನ್ನು ಸಮೂಲ ನಾಶಮಾಡುವ ಶಕ್ತಿಯು ಈ ಮಹಾತ್ಮರ ಅಹಿಂಸಾಮಯ ಶಾಂತಿ ತತ್ವದಲ್ಲಿದೆ ಎಂಬುದು ನಿದರ್ಶನಕ್ಕೆ ಬಂದಿತು.

ನಾರದ—ಇನ್ನು ಅಧಿಕಾರಯುಕ್ತ ಸಮ್ರಾಟ ಶಕ್ತಿಯು ಹಿಂಸಾಮಯ ಶಸ್ತ್ರಗಳನ್ನು ಬೀಸಾಕಿ, ಮಹಾತ್ಮರ ಅಹಿಂಸಾಮಯ ಶಾಂತಿ ಶಕ್ತಿಗೆ ಶರಣು ಬರಬೇಕು, ಛಲ ಬಿಡಬೇಕು.

ಹಿರಣ್ಯ—ಛಲಬಿಡುವದಿಲ್ಲ. ಛಲಕ್ಕಾಗಿ ಸಾಯುವೆನು. ಛಲಕ್ಕಾಗಿ ಬದುಕುವೆನು. ಎಲೋ ಪ್ರಲ್ಹಾದಾ, ಅವಿನಾಶಿಯಾದ ವಜ್ರಾಂಗಿಯಾದ ಈ ವಿಶ್ವಶಕ್ತಿಯ ಸಮೂಲ ನಾಶಮಾಡುವಶಕ್ತಿಯು ಯಾವ ಶಸ್ತ್ರದಲ್ಲಿದೆ?

ಪ್ರಲ್ಹಾದ—ಅಹಿಂಸಾಮಯ ಶಾಂತಿಶಸ್ತ್ರದಲ್ಲಿದೆ; ಶಾಂತಿ ಶಸ್ತ್ರದಲ್ಲಿ.

ನಾರದ—ಸತ್ಯವಾದಮಾತು. ಅಹಿಂಸಾಪ್ರಿಯ ಶಾಂತತಾಪ್ರಿಯ ಮಹಾತ್ಮರನ್ನು ಕಾಡುವ ನಿನ್ನಂಥ ಬಹು ಬಲಾಢ್ಯ ನೀಚ ಸಮ್ರಾಟರು ತಮ್ಮನ್ನು ಕೊಲ್ಲುವ ಪ್ರಬಲ ಶಕ್ತಿಯನ್ನು ತಾವೇ ತಮ್ಮ ನೀಚ ಕೃತಿಯಿಂದ ಹುಟ್ಟಿಸಿಗೊಂಡು ಆ ಶಕ್ತಿಗೆ ಆಹುತಿಯಾಗುವರೆಂಬುದು ಇನ್ನೊಂದರಗಳಿಗೆಯಲ್ಲಿ ನಿನ್ನ ನಿದರ್ಶನಕ್ಕೆ ಬರುವದು ದೈತ್ಯಸಮ್ರಾಟಾ, ಎಲ್ಲರಮೇಲೆಯೂ ಒಬ್ಬನೇ ಒಬ್ಬ ಧೊರೆಯಾಗಿರುವ ಶ್ರೀಹರಿಯು ಧರ್ಮಪ್ರಭುವು. ಆತನ ಮೇಲೆ ಪ್ರಭುವೇ ಇಲ್ಲ. ಆ ಮಹಾಮಹಿಮನಿಗೆ ಅನ್ಯಾಯವು ಯಳ್ಳಷ್ಟುಸಹ ಸಹನವಾಗುವದಿಲ್ಲ. ಅನ್ಯಾಯಮಾಡಿದವರು ರಾಜರೇ ಇರಲಿ, ಸಮ್ರಾಟರೇ ಇರಲಿ, ಕೈಹಿಡಿದ ಲಕ್ಷ್ಮಿಯೇ ಇರಲಿ. ಯಾರೇ ಇರಲಿ ಅವರೆಲ್ಲರೂ ಧರ್ಮ

ಪ್ರಭುವಿನ ಆಜ್ಞೆಯಂತೆ ತಮ್ಮ ತಮ್ಮ ತಪ್ಪುಗಳಿಗೆ ತಕ್ಕ ಶಿಕ್ಷೆ ಹೊಂದಿ ಅನಂತಕಾಲ ದುಃಖಬಡಬೇಕಾಗುವದು.

ಪ್ರಲ್ಹಾದ—ಸತ್ಯವಾದ ಮಾತು. ಅಧರ್ಮದ ನಾಶಕ್ಕಾಗಿ, ಧರ್ಮ ಸ್ಥಾಪನೆಗಾಗಿ ಮೇಲಿಂದಮೇಲೆ ಅವತಾರತಾಳಿ, ಮನುಷ್ಯರೂಪದಿಂದ ಭೂಮಿಗಿಳಿದುಬರುವ ಧರ್ಮಪ್ರಭುವುಕೂಡ ತಾನು ಅವತಾರ ತಾಳಿದಾಗ ಜಗತ್ತಿನ ದೃಷ್ಟಿಯಿಂದ ತಪ್ಪುಮಾಡಿದಲ್ಲಿ, ಲೋಕವಿಡಂಬನಾರ್ಥ ತನ್ನ ತಪ್ಪಿಗೆ ತಕ್ಕ ಶಿಕ್ಷೆ ತಾನೇ ಮಾಡಿಕೊಂಡು ದುಃಖಬಡುವಂತೆ ನಟಿಸಿ, ಧರ್ಮವೇ ಜಗತ್ತಿನಲ್ಲಿ ಎಲ್ಲಕ್ಕಿಂತ ಹೆಚ್ಚಿನದೆಂದು ಸರ್ವ ಜಗತ್ತುಗಳಿಗೆ ಸಾರಿಸಾರಿ ಹೇಳಿದ್ದಾನೆ. ದೇವರು ರತ್ನಕೆಚ್ಚಿದ ಅಮೌಲ್ಯ ಬಂಗಾರದ ಹೂವುಗಳಿಗೆ ಮರುಳಾಗುವದಿಲ್ಲ. ತಾತಾ, ಅಹಿಂಸಾಪ್ರಿಯ ಮಹಾತ್ಮನು ತನ್ನ ಆರಾಧ್ಯ ದೇವರಿಗೆ ಯಾವಬಗೆಯ ಸೇವೆಯಿಂದ ಆನಂದವಾಗುವದೆಂಬುದನ್ನು ಈರೀತಿಯಾಗಿ ವರ್ಣಿಸಿದ್ದಾನೆ.

### ೨೯ ಶ್ಲೋಕ

ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯ ನಿಗ್ರಹಂ|
ಸರ್ವಭೂತ ದಯಾಪುಷ್ಪಂ ಸತ್ಯಪುಷ್ಪಂ ವಿಶೇಷತಃ||
ಜ್ಞಾನಪುಷ್ಪಂ ತಪಃಪುಷ್ಪಂ ಕ್ರಿಯಾಪುಷ್ಪಂ ತಥೈವಚ|
ಧ್ಯಾನಂ ಚೈವಾಷ್ಟಮಂ ಪುಷ್ಪಮೇಭಿಸ್ತುಷ್ಯತಿ ಶ್ರೀಹರಿಃ||೧||

ಹಿರಣ್ಯ——ಮೂರ್ಖಾ; ಸುಮ್ಮನಾಗು. ಬಹುಕಾಲದಿಂದ ರಾಜ್ಯ ಚಕ್ರ ತಿರುಗಿಸುತ್ತಿರುವ ಚಕ್ರವರ್ತಿಗೆ –ರಾಜವೃದ್ಧನಿಗೆ- ಬುದ್ಧಿಹೇಳುವ ಅಧಿಕಾರವು ಕ್ಷುಲ್ಲಕ ಬಾಲಕನಿಗಿರುವದೇ?

ನಾರದ——ಪ್ರಲ್ಹಾದನು ಬಾಲಕನಲ್ಲ. ಹಿಂದಾದ ಮಹಾತ್ಮರ ಮಹಾತ್ಮರಿಗೂ ಮುಂದಾಗುವ, ಮಹಾತ್ಮರ ಮಹಾತ್ಮರಿಗೂ ಕೂಡ ಗುರುವಾದ ವಿಶ್ವದ ಪ್ರಥಮಮಹಾತ್ಮನು. ಅಹಿಂಸಾವ್ರತಧಾರಿಯಾದ ಯೋಗಿರಾಜನು. ಜ್ಞಾನವೃದ್ಧನು ಆಗಿರುವನು. ಈಮಹಾತ್ಮನಿಗೆ ಸರ್ವಜಗತ್ತೇ ತಲೆಬಾಗುವದು.

ಬುದ್ಧಿಯಿಲ್ಲದ ಮುದಿಹದ್ದಿಗೆ ಮನೆಯಮುಂದಿನ ನಾಯಿಯು ಕೂಡ ಮಾನ ಕೊಡುವದಿಲ್ಲ .

ಪ್ರಲ್ಹಾದ—ತಾತಾ, ನನ್ನ ಶ್ರೀಹರಿಯು, ಈಗ ನನ್ನ ಹರಿ .

ಹಿರಣ್ಯ—ಏನು ಮಾಡುತ್ತಿರುವನೋ ನಿನ್ನ ಹರಿ. ನನಗೆ ಹೆದರಿ ಓಡಿಹೋಗಿ ಅಡಗಿಕೊಂಡ ಹರಿ.

ಪ್ರಲ್ಹಾದ—ನನ್ನ ಹೆದರದ ಅದರದ ಹರಿ.

೩೦ ಪದ ಧಾಟಿ ಗುರು ಗುರು

ಗುರುಗುರು ಶಬ್ದನುಡಿಯುವಾ |
ತೋರೈ ನಿನ್ನ ಶೌರ್ಯವಾ || ಪ ||
ಆಲಿಸಿ ಮೊರೆಯನು ಬಿಡುನೀದರ್ಪವ|
ಕೋಲ್ವನೈ ವುರ ಬಗೆಯುತಾ ತಾತನೆ|
ಗೆಲ್ವ ವಿಚಾರಾ ಕುವಿಚಾರಾ ||

ನನ್ನ ಮೋರೆಗೆ ಕರಗಿದ ಹರಿಯು ಇನ್ನೊಂದರಗಳಿಗೆಯಲ್ಲಿ ಬರುವನು.

ಹಿರಣ್ಯ—ಎಲ್ಲಿಂದ ಬರುವನು?

ಪ್ರಲ್ಹಾದ—ನಾನು ಹೇಳಿದಂತೆ ಸಭಾಸ್ತಂಭದಿಂದ ಬರುವನು. ನನ್ನ ಹರಿಯ ಗುಡುಗು ನಿನಗೆ ಕೇಳಬರುವದಿಲ್ಲವೇ?

ಹಿರಣ್ಯ—ಕೇಳಬರುವದು. ಪ್ರತಿಯೊಂದು ಸಭಾಸ್ತಂಭದಲ್ಲಿ, ಭೂಮಿಯಲ್ಲಿ, ಅಂತರಿಕ್ಷದಲ್ಲಿ, ಪಾತಾಳದಲ್ಲಿ, ಎಲ್ಲಕಡೆಯಲ್ಲಿ, ನನ್ನ ಹೃದಯದಲ್ಲ ಕೂಡ ಹರಿಯ ಕೂಗು ಕೇಳಬರುವದು. ಆ ಹರಿಯು ಎಲ್ಲಿದ್ದಾನೆಂಬುದೇ ತಿಳಿಯಲೊಲ್ಲದು.

೩೧ ಸಂಭಾಷಣಪದ

ಹಿರಣ್ಯ—ಮಾಧವ ಎಲ್ಲಿಹ ತನುಜಾತಾ|
ಪ್ರಲ್ಹಾದ—ಮಾಧವ ಸರ್ವ ವ್ಯಾಪ್ತನಾತಾ||

ಹಿರಣ್ಯ—ದೀನನೇನೊ ಆತಾ ಮಾಧವ |
ಪ್ರಲ್ಹಾದ—ದೀನರ ರಾಜನಿಹನು ತಾತಾ||
ಹಿರಣ್ಯ—ದಾಸನೇನೋ ಆತಾ ಮಾಧವ|
ಪ್ರಲ್ಹಾದ—ಈಶನ ಈಶನಿಹನು ತಾತಾ ||
ಹಿರಣ್ಯ—ಮಾಧವ ಮೀನನೇನೋ ಆತಾ|
ಪ್ರಲ್ಹಾದ—ವೇದವತಂದ ಹರಿಯೋ ತಾತಾ ||
ಹಿರಣ್ಯ—ಮಾಧವ ಆಮೆಯೇನೋ ಆತಾ |
ಪ್ರಲ್ಹಾದ—ಸುಧೆಯು ಸುರರಿಗುಣಿಸಿದಾತಾ ||
ಹಿರಣ್ಯ—ವರಾಹನೇನೋ ಆತಾ ಮಾಧವಾ |
ಪ್ರಲ್ಹಾದ—ಧರಣಿಯ ಮೇಲಕ್ಕೆ ತಂದಾತಾ ||
ಹಿರಣ್ಯ—ಸಿಂಹನೇನೋ ಆತಾ ಮಾಧವಾ |
ಪ್ರಲ್ಹಾದ—ಸಿಂಹನಲ್ಲ . ( ಕಂಭವು ಶೀಳಿ ಅಲ್ಲಿಂದ ಶ್ರೀ ನರಸಿಂಹದೇವರು ಬರಲು ) ಅದೋ........

## ರಾಗ ಜಿಂಜೋಟಿ ತಾಳ-ದಾದರಾ

ಬಂದ ಸಿಂಹಾ ನಾರಸಿಂಹ ಬಂದ ನೋಡ್ಯೆ |
ಇಂದಿರೇಶ ಕಂಬವಡದು ಬಂದ ನೋಡ್ಯೆ||ಪ||
ಎಲ್ಲಿ ನೋಡಿದಲ್ಲಿ ಇರ್ಪ ಸಿಂಹ ನೋಡ್ಯೆ |
ಎಲ್ಲರನ್ನು ಕಾವ ದೇವನಿವನೆ ನೋಡ್ಯೆ ||
ಎಲ್ಲರಲ್ಲಿ ಮೇಲು ಯೆಂಬ ಛಲವು ಬೇಡ್ಯೆ ||
ಎಲ್ಲವನ್ನು ನನ್ನ ಹರಿಗೆ ದಾನ ಮಾಡ್ಯೆ ||೧|| ಅದೋ........

ಹರಿಯು ಮೊರೆಗೆ ಕರಗಿ ಓಡಿಬಂದ ನೋಡ್ಯೆ |
ಧರಿಸಲಿಲ್ಲ ಪೂರ್ಣಸಿಂಹ ವೇಷ ನೋಡ್ಯೆ ||
ಹರಿಯು ಪದಕೆ ನಮಿಸಿ ದಯದ ಭಿಕ್ಷೆ ಬೇಡ್ಯೆ |
ಕರುಣ ಸುಧೆಯುಗರೆವ ವಿಮಲ ಚಂದ್ರನೋಡ್ಯೆ ||೨||ಅದೋ....

ಹಿರಣ್ಯ—ಇದೆಂಥ ವಿಚಿತ್ರವೇಷ! (ನಗುವನು)

ಶ್ರೀನರಸಿಂಹ—ವಿಚಿತ್ರವೇಷವಲ್ಲ. ನನ್ನ ಬಾಲಭಕ್ತನ ಅವಸರಕ್ಕೆ ಪೂರ್ಣಸಿಂಹನಾಗದೆ ಓಡಿಬಂದೆನು.

ಪ್ರಲ್ಹಾದ—ಮರಣವನ್ನು ಗೆದೆ, ನರಹರಿಯ ದಾಸನಾಗು.

ಹಿರಣ್ಯ—ಈ ಜಗದೀಶನು ದಾಸನಾಗುವದು ಶಕ್ಯವಿಲ್ಲ. ನರಹರಿಯ ನಾಶಮಾಡುವೆನು.

ಕಯಾಧು-ಪ್ರಲ್ಹಾದ—ದೇವ ದೇವನ ಮೇಲೆ ಕೈಯೆತ್ತಕೂಡದು. ಅಂಗಲಾಚಿ ಶಿರಗೊಡ್ಡಿ ಕೈಮುಗಿದು ಬೇಡಿಕೊಳ್ಳುವೆವು.

ಹಿರಣ್ಯ—(ಅವರೀರ್ವರನ್ನು ಒದ್ದು) ನಾನು ಯಾರ ಮಾತನ್ನೂ ಕೇಳ ತಕ್ಕವನಲ್ಲ. ಚಾಂಡಾಲರೆ, ಹಾಳಾಗಿ ಹೋಗಿರಿ. ಎಲವೋ, ವಿಚಿತ್ರ ಪ್ರಾಣೀ, ಶರಣಾಗತನಾಗುವಿಯೋ ಸಾಯುವಿಯೋ; (ಕಯಾಧುವು ಹೋಗು ವಳು)

ಶ್ರೀನರಸಿಂಹ—ಸಾಯುದವನು, ಕೊಲ್ಲಲು ಬಂದವನು ಶರಣಾಗತ ನಾಗುವದು ಎಂದಾದರೂ ಶಕ್ಯವದೆಯೇ? ದೈತ್ಯ ಕುಲಾಧಮಾ, ಜಗತ್ಕಂ ಟಕಾ ಹಿಂಸೆಗೆ ಮೂಲಬೀಜನಾದ ನಿನ್ನ ಹಿಂಸಾಮಯ ಶಕ್ತಿಯನ್ನು ನಾಶ ಮಾಡಿಯೇ ಅಹಿಂಸಾಮಯ ಶಾಂತತಾಮಯ ಧರ್ಮಸಾಮ್ರಾಜ್ಯ ಸ್ಥಾಪಿಸು ವೆನು. ಕತ್ತಲೆಯ ನಾಶವೇ ಬೆಳಕು, ಹಿಂಸೆಯ ನಾಶವೇ ಅಹಿಂಸೆ. ಬಾ. ಯುದ್ಧಕ್ಕೆ.

ಹಿರಣ್ಯ—ಬಂದೆ. ( ಈರ್ವರು ಕೆಲಕಾಲ ಗುದ್ದಾಡಿದಮೇಲೆ ಶ್ರೀನರ ಸಿಂಹನು ಹಿರಣ್ಯಕಶಿಪುವಿನನ್ನು ಹೊಸ್ತಿಲದವರೆಗೆ ಎಳೆದುಕೊಂಡುಹೋಗಿ, ಅಲ್ಲಿ ಕುಳಿತು ದೈತ್ಯನ ಹೊಟ್ಟೆಯನ್ನು ಹರಿಯುವನು. ದೈತ್ಯರಾಜನು ನಾರಾ ಯಣ ನಾರಾಯಣ ಎಂದು ಪ್ರಾಣಬಿಡುವನು. )

ನಾರದ—ದೇವದೇವಾ, ಹಿಂಸಾಮಯ ವಿಶ್ವಶಕ್ತಿಯ ನಾಶವಾಯಿತು: ಹೊಟ್ಟೆಯಲ್ಲಿ ಏನನ್ನು ಹುಡುಕುತ್ತಿರುವೆ?

ನರಸಿಂಹ—ಭಕ್ತಾಗ್ರಣಿಯಾದ ನನ್ನ ಪ್ರಲ್ಹಾದನಂಥ ಪುತ್ರರತ್ನರು ಈ ದೈತ್ಯನ ಹೊಟ್ಟೆಯಲ್ಲಿ ಇನ್ನೂ ಎಷ್ಟು ಜನರಿರುವರೆಂಬದನ್ನು ಹುಡುಕುತ್ತಿ ರುವೆನಲ್ಲದೆ, ಇವನಿಗೂ ನನಗೂ ಇದ್ದ ಪೂರ್ವಸ್ನೇಹದ ಕರುಳಿನ ಸಂಬ್ಮಂಥ

ಸ್ಮರಿಸಿಯೇ ಕರುಳುಮಾಲೆಗಳನ್ನು ಕೊರಳಿಗೆ ಸುತ್ತಿಕೊಂಡಿರುವೆನು. ನಾರದರೇ, ನನಗೆ ಭಕ್ತರಭ್ರಾಂತಿ.

ನಾರದ—ಭಕ್ತರಿಗೆ ನಿನ್ನ ಭ್ರಾಂತಿ. ದೇವದೇವಾ, ನಿನ್ನ ಭಕ್ತಿ ವಾತ್ಸಲ್ಯಕ್ಕೆ ಮೆಚ್ಚಿದೆನು. ನಿನ್ನ ವೀರಾವೇಶದ ಆರ್ಭಟಕ್ಕೆ ಬೆದರಿ, ನಿನ್ನೆದುರಿನಲ್ಲಿ ನಿಂತ ಅನಾಥ ಬಾಲಕನನ್ನು ಮುಂದಕ್ಕೆ ಕರೆ ಶಾಂತನಾಗು. ದೇವದೇವಾ, ಇಲ್ಲಿಯೇ ನಿನ್ನ ಬಾಲಭಕ್ತನು ಕೈಮುಗಿದುಕೊಂಡು, ನಿನ್ನ ಕಡೆಗೆ ದೈನ್ಯದಿಂದ ನೋಡುತ್ತ ನಿಂತುಕೊಂಡಿದ್ದಾನೆ. ಇನ್ನು ನೀನೇ ಇವನಿಗೆ ಸಮಾಧಾನ ಹೇಳತಕ್ಕ ತಂದೆಯು. ಪರದೇಶಿ ಹುಡುಗನಲ್ಲವೆ ಈತನು?

ಭೂದೇವಿ—ಮಗೂ, ನಿನಗಾಗಿ ಅವತಾರ ತಾಳಿದ ಪ್ರಭುವಿನ ಕ್ರೋಧಾಗ್ನಿಯನ್ನು ಶಾಂತಮಾಡು.

ಶ್ರೀನರಸಿಂಹ—ಭಕ್ತಾಗ್ರಣೀ, ಪ್ರಲ್ಹಾದಾ, ನಿನ್ನನ್ನು ನೋಡಿದೊಡನೆ, ನನ್ನ ಸಿಟ್ಟು ಶಾಂತವಾಯಿತು. ಬಾ, ಮಗೂ, ಬೇಗ ಬಾ.

ಪ್ರಲ್ಹಾದ—ಬಂದೆ, ತಂದೆ, ಬಂದೆ.

ಶ್ರೀ ನರಸಿಂಹ—ಹಡೆದ ತಂದೆಯು ಸತ್ತು ಹೋದನೆಂದು ದುಃಖಿಸಬೇಡ. ಇನ್ನುಮೇಲೆ ನಾನೇ ನಿನ್ನ ತಂದೆಯು, ನನಗೇನೇ ತಾತಾ ತಾತಾ, ಎಂದು ಕರೆ.

ಪ್ರಲ್ಹಾದ—ನೀನೇ ನನ್ನ ನಿಜವಾದ ತಾತನು. ( ಹೋಗಿ ನಮಸ್ಕಾರ ಮಾಡುವನು )

ಶ್ರೀ ನರಸಿಂಹ—( ದೈತ್ಯದೇಹವನ್ನು ಕೆಳಗಿಟ್ಟು ) ಮಗೂ, ನನ್ನ ತೊಡೆಯಮೇಲೆ ಕುಳಿತುಕೋ, ದೂರೇಕೆ, ಹತ್ತಿರಕ್ಕೆ ಬಾ.

ಪ್ರಲ್ಹಾದ—ತೊಡೆಯಮೇಲೆ ಕುಳಿತುಕೊಳ್ಳಲೇ ?

ಶ್ರೀನರಸಿಂಹ—ನಿರ್ಭಯದಿಂದ ನಿನ್ನ ತಂದೆಯ ತೊಡೆಯಮೇಲೆ ಕುಳಿತುಕೊಳ್ಳುವ ಜನ್ಮಸಿದ್ಧಹಕ್ಕು ನಿನಗೇನೇ ಇದೆ. ಕುಳಿತುಕೋ.

ಪ್ರಲ್ಹಾದ—ದೇವದೇವಾ, ನನ್ನ ಪ್ರತಿಯೊಂದು ಜನ್ಮದಲ್ಲಿಯೂ ನೀನೇ ನನ್ನ ತಂದೆಯಾಗು. ನಿನಗೇನೇ ನಾನು ತಾತಾ, ತಾತಾ, ಎಂದು ಎನ್ನುತ್ತ ಆನಂದಾಶ್ರುಗಳನ್ನು ಸುರಿಸುವೆನು. ಯಾರು ಕೈಬಿಟ್ಟರೂ, ನೀನು ಮಾತ್ರ ನನ್ನ ಕೈಬಿಡಬೇಡ. ನೀನು ಹೇಳಿದಂತೆ ನಿನ್ನ ತೊಡೆಯ

ಮೇಲೆ ಕುಳಿತುಕೊಳ್ಳುವೆನು . ( ತೊಡೆಯುಮೇಲೆ ಕುಳಿತು ) ಆನಂದ ಆನಂದ! ಮಹದಾನಂದ! ಅಪ್ಪಾ, ನಾನು ಹುಟ್ಟಿದ್ದಕ್ಕೆ ಸಾರ್ಥಕವಾಯಿತು .

ಶ್ರೀನರಸಿಂಹ--ನಾನೂ ಅವತಾರ ತಾಳಿದ್ದಕ್ಕೆ ಸಾರ್ಥಕವಾಯಿತು. ( ಪ್ರಲ್ಹಾದನ ಗದ್ದ ತುಟಿ ಹಿಡಿದು ಮುದ್ದುಕೊಟ್ಟು ) ಮಗೂ, ನಿನ್ನಮುದ್ದು ಬಲುಸವಿ, ಸುಧೆಯುಗಿಂತ ಸವಿ. ಪ್ರಲ್ಹಾದಾ, ನಿನ್ನನ್ನು ಎಷ್ಟುಸಲ ಮುದ್ದಿಸಿದರೂ ನನಗೆ ತೃಪ್ತಿಯೇ ಆಗುವದಿಲ್ಲ ನೋಡು . ( ಬಾಲಕನಕಡೆಗೆ ನೋಡಿ ನಗುವನು )

ನಾರದ--ಮೇಲಿಂದಮೇಲೆ ಮುದ್ದಿಸುವದೇಕೆ?

ಶ್ರೀನರಸಿಂಹ--ನಾರದಾ, ಬಾಲಭಕ್ತರ ಮುದ್ದು ಮುಖಕಮಲದಲ್ಲಿ ತುಂಬಿ ತುಳಕುತ್ತಿರುವ ಮಧುವಿನ ಸವಿಯನ್ನು ಸವಿದರೆ ಎಷ್ಟು ಆನಂದವಾಗುವದೆಂಬದನ್ನು ನಾನು ಬಲ್ಲಷ್ಟು ಬಾಲ ಬ್ರಹ್ಮಚಾರಿಯಾದ ನೀನೇನು ಬಲ್ಲೆ? ಮಗೂ, ನಿನಗೇನು ಬೇಕು ಬೇಡು. ಬೇಡಿದ್ದನ್ನು ಕೊಡುವೆನು; ಬೇಡು .

ಪ್ರಲ್ಹಾದ—ದೇವದೇವಾ, ನಿನ್ನ ಪರಮ ಪವಿತ್ರ ಪಾದಧೂಲಿಯೇ ನನ್ನ ಮಸ್ತಕಕ್ಕೆ ಅಮೌಲ್ಯ ಮುಕುಟವಾಗಲಿ. ( ಪಾದಧೂಳಿಯನ್ನು ಹಣೆಗೆ ಹಚ್ಚಿಕೊಳ್ಳುವನು ) ಇದೇ ನನ್ನ ಬೇಡಿಕೆ. ಮತ್ತಾವ ಬೇರೆ ಇಚ್ಛೆಯಿಲ್ಲ .

ಶ್ರೀನರಸಿಂಹ—ಮಗೂ ಪ್ರಲ್ಹಾದಾ, ನೀನುಧರೆಯ ಈಶನಾಗಿ ಸಿಂಹಾಸನದಲ್ಲಿ ಮೆರೆಯುವ ಸಮ್ರಾಟನಾಗಿ ಬಹುಕಾಲ ರಾಜ್ಯವಾಳಬೇಕೆಂಬುದೇ ನನ್ನ ಇಚ್ಛೆಯು .

ಪ್ರಲ್ಹಾದ—ಶ್ರೀ ಹರಿಯ ದಾಸನಾಗಿ, ಶ್ರೀ ಹರಿದಾಸರ ಪವಿತ್ರ ಪಾದಧೂಳಿಯಲ್ಲಿ ಹೊರಹೊರಳಿ ನಿನ್ನ ಗುಣಗಾನ ಮಾಡುತ್ತ ಆನಂದಾಶ್ರುಗಳನ್ನು ಸುರಿಸುತ್ತ ಹಿರಿ ಹಿರಿ ಹಿಗ್ಗ ಬೇಕೆಂಬುದೆ ನನ್ನ ಆಶೆ, ನನ್ನ ಹಿರಿದಾದ ಆಶೆಯಿದೆ. ದೇವದೇವಾ, ಸಾಮ್ರಾಜ್ಯ ಚಕ್ರವರ್ತಿಯಾಗುವದಿಲ್ಲ. ವೈರಾಗ್ಯ ಚಕ್ರವರ್ತಿಯಾಗುವೆನು . ಶ್ರೀ ಹರಿದಾಸರ ಹರಿಭಕ್ತಿಸುಧೆಯ ಸವಿಯು ಎಷ್ಟು ಸವಿಯಾಗಿದೆ ಎಂಬುದನ್ನು ಶ್ರೀ ಹರಿಭಕ್ತರೇ ಬಲ್ಲರು .

ಶ್ರೀನರಸಿಂಹ—ನಾರದಾ, ಈ ವಿಷಯವನ್ನು ನೀನೇ ಹೇಳು .

ನಾರದ—ಮಗೂ, ನೀನು ಈ ನಿನ್ನ ತಂದೆಯ ಇಚ್ಛೆಯಂತೆ ಸಮ್ರಾಟ ನಾಗಿ ಬಹುಕಾಲ ರಾಜ್ಯವನ್ನು ಧರ್ಮದಿಂದ ಆಳುತ್ತ ಆನಂದಬಡು. ಭಕ್ತರ ಆನಂದವೇ ಪ್ರಭುವಿನ ಆನಂದವು.

ಶ್ರೀನರಸಿಂಹ—ಸತ್ಯವಾದ ಮಾತು. ಸರ್ವವಿಶ್ವಗಳನ್ನು ನುಂಗುವ ನನ್ನನ್ನು ನನ್ನ ಭಕ್ತರು ನುಂಗುವರು. ಯಾರಗಂಟಲದಲ್ಲಿಯೂ ಇಳಿಯದ ನಾನು ಭಕ್ತರ ಗಂಟಲದಲ್ಲಿ ಮಾತ್ರ ಇಳಿಯುವೆನು.

ನಾರದ—ಭಕ್ತರು ನಿನ್ನನ್ನು ನುಂಗುವದು, ಅರಗಿಸಿಕೊಳ್ಳುವದಕ್ಕಲ್ಲ. ನಿನ್ನನ್ನು ತಮ್ಮ ಮನವೆಂಬ ಮನೆಯಲ್ಲಿ ಕಟ್ಟಿ ನಿಲ್ಲಿಸಿ, ಆ ಮನೆಯಲ್ಲಿ ನಿನ್ನನ್ನು ಕಣ್ತುಂಬ ನೋಡಿ ಆನಂದದಭರದಲ್ಲಿ ನಲಿನಲಿದು ಕುಣಿ ದಾಡಲಿಕ್ಕೆ ಇದೆ.

ಪ್ರಲ್ಹಾದ—ನಾನು ವೈರಾಗ್ಯ ಚಕ್ರವರ್ತಿಯಾಗುವದು ಆವಾಗ?

ನಾರದ—ಮಗೂ, ಕಲಿಯುಗದಲ್ಲಿ ಶ್ರೀ ವೆಂಕಟೇಶದೇವರ ಅವತಾರ ವಾದಾಗ, ನೀನು ಶ್ರೀ ವ್ಯಾಸರಾಯ ಹಾಗು ಶ್ರೀ ರಾಘವೇಂದ್ರರಾಯರೆಂಬ ಹೆಸರುಗಳಿಂದ ವೈರಾಗ್ಯ ಚಕ್ರವರ್ತಿಯ ಪದದಲ್ಲಿ ಈ ಮಹಾಮಹಿಮನ ಸೇವೆ ಮಾಡುತ್ತ ಆನಂದ ಬಡುವೆ. ಹೇಳುವಾಗ ಮತ್ತೊಂದು ಮುಖ್ಯ ವಿಷಯ ವನ್ನೇ ಮರೆತೆನು.

ಪ್ರಲ್ಹಾದ—ಅದಾವದು ಗುರುವರಾ?

ನಾರದ—ನೀನು ಶ್ರೀ ವ್ಯಾಸರಾಯರಾಗಿ ಮರೆತುಹೋದ ಸಾಮ್ರಾಜ್ಯ ವಲ್ಲ; ಎಂದೆಂದೂ ಮರೆಯದ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರ ದಲ್ಲಿ ಕನ್ನಡರಾಯನೆಂದರೆ ಕನ್ನಡಿಗರ ಶೌರ್ಯಧ್ವಜ ಧರ್ಮಧ್ವಜ ಇವೆ ರಡನ್ನೂ ಮೆರೆಯಿಸುತ್ತಿರುವ ಕೃಷ್ಣದೇವರಾಯನ ಆಳಿಕೆಯಲ್ಲಿ ನೀನು ಆ ರಾಜನ ಕುಯೋಗ ಕಳೆದು ರಾಜಗುರು ಆಗಿರುವಾಗ ನಾನು ಪುರಂದರ ದಾಸ ನಾಗಿ ನಿನ್ನ ಶಿಷ್ಯತ್ವವನ್ನು ವಹಿಸಿ, ನಿನ್ನ ಹರಿದಾಸರ ಕೀರ್ತಿಯು ಆಚಂ ದ್ರಾರ್ಕ ಮೆರೆಯುವಹಾಗೆ, ಕನ್ನಡ ಹರಿದಾಸರ ಸಾಹಿತ್ಯದ ಪ್ರವಾಹವು ಅವ್ಯಾಹತವಾಗಿ ಹರಿಯುವ ಹಾಗೆ ಮಾಡುವೆನು. ವಿಜಯ ನಗರದಲ್ಲಿ ನಾನೂ ನೀನೂ ಹರಿದಾಸರೊಡನೆ ಇರುವಾಗ ಹರಿದಾಸರ ವಿಜಯ ದುಂದು ಭಿಯ ನಾದವು ಎಲ್ಲಕಡೆಯಲ್ಲಿ ಕೇಳುವದು. ಆ ದುಂದುಭಿಯ ನಾದವು

ಜಗತ್ತು ಇರುವವರೆಗೂ ಕೇಳುತ್ತಲೇ ಇರುವದು.

ಪ್ರಲ್ಹಾದ—ಇದೆಲ್ಲವೂ ಒಳಿತಾಯಿತು. ಭಗವನ್, ತಾವು ನನ್ನ ಶಿಷ್ಯರಾಗುವದು ಬೇಡ. ನಾನೇ ತಮ್ಮ ಶಿಷ್ಯನಾಗುವೆನು. ತಾವು ನನ್ನ ಗುರುದೇವರಾಗಿಯೇ ಇರಬೇಕಾಗಿ ಬೇಡಿಕೊಳ್ಳುವೆನು.

ನಾರದ—ಮಗೂ, ಶ್ರೀ ಹರಿಯು ನುಡಿಸಿದಂತೆ ನುಡಿದಿರುವೆನು. ನೀನು ಸಾಮಾನ್ಯನಲ್ಲ. ಅಹಿಂಸಾವ್ರತದ ಮರ್ಮವನ್ನು ಬಲ್ಲ ಹಾಗು ನುಡಿಯಂತೆ ನಡೆದ ಪ್ರಥಮ ಮಹಾತ್ಮನಾಗಿರುವೆ. ನಿನ್ನನ್ನು ಸರಿಗಟ್ಟುವ ಮಹಾತ್ಮರು ಹಿಂದೆ ಹುಟ್ಟಿಲ್ಲ; ಮುಂದೆಯೂ ಹುಟ್ಟುವದಿಲ್ಲ. ಎಂದು ಈ ಪರಮಾತ್ಮನ ಎದುರಿಗೆ ಪ್ರಮಾಣಮಾಡಿ ಹೇಳುವೆನು. ಮಗೂ, ಮಹಾತ್ಮನಾದ ನೀನು ನನಗೆ ಗುರುವಾಗಲೇ ಬೇಕು. ಸತ್ಯಸಂಕಲ್ಪಕ್ಕೆ ಹಾನಿಯೇ ಇಲ್ಲ. ನಾನು ನಿನ್ನ ಶಿಷ್ಯನಾದಾಗ ನಿನ್ನಲ್ಲಿ ವಾಯುದೇವರ ಆವೇಶ ಇರುವದು. ಪ್ರಲ್ಹಾದಾ, ನಿನ್ನ ತಮ್ಮ ಸಲ್ಹಾದನಾದರೂ ಜಗನ್ನಾಥ ದಾಸರಾಗಿ ಶ್ರೀಹರಿ ಕಥಾಮೃತ ಸಾರದ ಝರಿಯು ಧರೆಯಲ್ಲಿ ಅಖಂಡ ಹರಿಯುವ ಹಾಗೆ ಮಾಡುವನು. ಭಗವದ್ಭಕ್ತರು ಆ ಝರಿಯಲ್ಲಿಯ ಅಮೃತವನ್ನು ಸವಿಸವಿದು ಆ ಆನಂದದಲ್ಲಿ ಮೈಮರೆಯುವರು. ದೇವ ದೇವಾ, ನೀನು ಆಗೇನು ಮಾಡುವೆ?

ಶ್ರೀನರಸಿಂಹ—ನನ್ನ ಪ್ರಿಯ ಭಕ್ತನಾದ ಪ್ರಲ್ಹಾದನು ಶ್ರೀ ರಾಘವೇಂದ್ರಯತಿವರನಾಗಿ ಮಂತ್ರಾಲಯದಲ್ಲಿ ವೃಂದಾವನಸ್ಥನಾಗಿರುವಾಗ,ರಾಮ, ನರಹರಿ,ಕೃಷ್ಣ, ಕೃಷ್ಣ ಈ ನಾಲ್ಕೂ ರೂಪಗಳಿಂದ ನಾನು ಈ ಮಗನ ವೃಂದಾವನದಲ್ಲಿಯೇ ವಾಸಮಾಡಿಕೊಂಡಿದ್ದು ಇವನು ತನ್ನ ಭಕ್ತರಿಗೆ ವರಪ್ರದಾನ ಮಾಡಿದ ಇಚ್ಛೆಗಳನ್ನೆಲ್ಲ ಪೂರ್ಣ ಮಾಡುತ್ತ, ಇವನ ಉತ್ಕರ್ಷ ನೋಡುತ್ತ ಅಲ್ಲಿಯೇ ಆನಂದದಿಂದ ಇರುವೆನು. ನನ್ನ ಭಕ್ತರಿರುವ ಸ್ಥಳವೇ ನನಗೆ ವೈಕುಂಠ. ಆ ಸ್ಥಳವು ವೈಕುಂಠಕ್ಕಿಂತಲೂ ಹೆಚ್ಚಿನದೆಂದು ತಿಳಿ. ಪ್ರಲ್ಹಾದಾ, ಆಗ ನಿನ್ನ ಕೀರ್ತಿಯ ಪರಿಮಳದ ಘಮ ಘಮ ವಾಸನೆಯು ಜಗತ್ತಿನ ತುಂಬೆಲ್ಲ ಇಡಗುವದು.

ಪ್ರಲ್ಹಾದ—ನನಗೆ ಕೀರ್ತಿಯು ಬೇಡವೇ ಬೇಡ. ದೇವ ದೇವಾ, ನಿನ್ನ ಪರಮ ಪವಿತ್ರ ಪಾದ ಧೂಳಿಯನ್ನು ಮೇಲಿಂದ ಮೇಲೆ ಹಚ್ಚಿಕೊ

ಳ್ಳುವ ಪರಮ ಸೌಭಾಗ್ಯವೇ ನನಗೆ ಯಾವಾಗಲೂ ಇರಲಿ. ತಾತಾ, ನನ್ನ ದೊಂದು ಇಚ್ಛೆಯಿಂದೆ.

ಶ್ರೀನರಸಿನಹ –ಅದಾವದು ಮಗೂ?

ಪ್ರಲ್ಹಾದ—ನನ್ನ ತಂದೆಯುವರ ಅಪರಾಧ ಕ್ಷಮಿಸಿ, ಅವರಿಗೆ ಮುಕ್ತಿಯನ್ನು ಕೊಡಬೇಕಾಗಿ ಬೇಡಿಕೊಳ್ಳುವೆನು.

ನಾರದ—ಬೇಡಿಕೊಳ್ಳುವ ಕಾರಣವೇ ಇಲ್ಲ. ಮರಣಕಾಲಕ್ಕೆ ನಾರಾಯಣ ನಾರಾಯಣ ಎಂದು ಪ್ರಾಣ ಬಿಟ್ಟವರ ಆತ್ಮವು ನರಕಕ್ಕೆ ಹೋಗುವದು ಶಕ್ಯವೇ ಇಲ್ಲ. ಪ್ರಲ್ಹಾದಾ, ನೀನು ಸಾಮಾನ್ಯ ಪುತ್ರನಲ್ಲ. ಜಗತ್ತಿನಲ್ಲಿಯ ಮಕ್ಕಳು ತಮ್ಮ ಹಿರಿಯರಪಿಂಡಗಳನ್ನು ಕಲ್ಲಿನಲ್ಲಿ ಮೂಡಿದ ಶ್ರೀವಿಷ್ಣು ಪಾದದ ಮೇಲೆ ಹಾಕಿ, ಅವರನ್ನು ಮುಕ್ತಿಗೆ ಕಳಿಸಿದರೆ, ನೀನು ನಿನ್ನ ಪ್ರತ್ಯಕ್ಷ ತಂದೆಯ ಪಿಂಡವನ್ನೇ ಪ್ರತ್ಯಕ್ಷ ಶ್ರೀ ವಿಷ್ಣು ಪಾದದ ಮೇಲೆ ಹಾಕಿ, ಅವನನ್ನು ವೈಕುಂಠಕ್ಕೆ ಕಳಿಸಿರುವೆ. ಹಿರಣ್ಯಕಶಿಪುವು ಆದರೂ ನಿನ್ನಂತೆಯೇ ಶ್ರೀವಿಷ್ಣು ಭಕ್ತನು. ತನ್ನ ಇಚ್ಛೆಯಂತೆ ಮರಣಹೊಂದಿದ್ದಾನೆ. ಪ್ರಲ್ಹಾದಾ, ನಿನ್ನ ತಂದೆಯೊಬ್ಬನೇ ಮುಕ್ತನಾಗಿಲ್ಲ. ಅವನ ಹಿಂದಿನ ೨೧ ಕುಲಗಳೂ ಮುಕ್ತವಾಗಿ ಹೋಗಿವೆ ಎಂದು ತಿಳಿ.

ಶ್ರೀನರಸಿಂಹ— ತ್ರಿಕಾಲ ಜ್ಞಾನಿಗಳಾದ ನಾರದರು ಸರಿಯಾದದ್ದನ್ನೆ ಹೇಳಿದ್ದಾರೆ. ಬ್ರಮ್ಹಾ, ಈ ನನ್ನ ಮುದ್ದು ಮಗನ ತಲೆಯ ಮೇಲೆ ಸಾಮ್ರಾಜ್ಯ ಚಕ್ರವರ್ತಿಯ ಮುಕುಟವನ್ನು ಇಡು.

ನಾರದ—ದೇವ ದೇವಾ, ಸಾಮ್ರಾಜ್ಯ ಚಕ್ರವರ್ತಿಯ ಮುಕುಟವನ್ನು ಇಡುವ ಮಂಗಲ ಕಾರ್ಯವನ್ನು ನಿನ್ನ ಪತ್ನಿ ಭೂದೇವಿಯುವರೇ ಮಾಡಲಿ. ಎಂದರೆ ತಂದೆ-ತಾಯಿಗಳೀರ್ವರಿಗೆ ಮುದ್ದು ಮಗನು ಸಾಮ್ರಾಜ್ಯಸಿಂಹಾಸನದಲ್ಲಿ ಮೆರೆಯುವ ಆನಂದಮಯ, ಮಂಗಲಮಯ ನೋಟ ನೋಡುವ ಸುಯೋಗವು ಬರುವದು.

ಶ್ರೀನರಸಿಂಹ— ಹಾಗೇ ಆಗಲಿ. ನನ್ನ ಭಕ್ತರ ಆನಂದವೇ ನನ್ನ ಆನಂದವು.

ನಾರದ—ದೇವಿಯುವರೇ, ತಾವೇ ತಮ್ಮ ಕೈಯಿಂದ ಸಾಮ್ರಾಜ್ಯ ಚಕ್ರವರ್ತಿಯ ಮುಕುಟವನ್ನು ತಮ್ಮ ಮಗನ ತಲೆಯ ಮೇಲೆ ಇಡಬೇಕಾಗಿ

ಬೇಡಿಕೊಳ್ಳುವೆನು.

ಭೂದೇವಿ—ಈ ಮಂಗಲ ಕಾರ್ಯವನ್ನು ಮನಃಪೂರ್ವಕ ಮಾಡುವೆನು. ( ಮುಕುಟವನ್ನು ಪ್ರಲ್ಹಾದನ ತಲೆಯ ಮೇಲೆ ಇಡುವಳು )

ಶ್ರೀನರಸಿಂಹ—ಎಲ್ಲರ ಇಚ್ಛೆಗಳು ಪೂರ್ಣವಾದವೇ ?

ನಾರದ—ಆದವು. ದೇವ ದೇವಾ, ಈ ಭಾರತದಲ್ಲಿ ಪ್ರಲ್ಹಾದನಂಥ ಮಹಾತ್ಮರು ಮೇಲಿಂದ ಮೇಲೆ ಹುಟ್ಟಿ, ಅಧರ್ಮದ ನಾಶಮಾಡಿ, ಧರ್ಮ ಸ್ಥಾಪನ ಮಾಡಲಿ. ದುಃಖಮಯ ಹಿಂಸೆಯ ನಾಶವಾಗಿ ಶಾಂತತಾಮಯ ಅಹಿಂಸೆಯ ರಾಜ್ಯವು ಎಲ್ಲ ಕಡೆಯಲ್ಲಿ ಇರಲಿ. ಸರ್ವರಿಗೂ ಸರ್ವ ಜಗತ್ತುಗಳಿಗೂ ಕಲ್ಯಾಣವಾಗಲಿ; ಇದೇ ನಮ್ಮೆಲ್ಲರ ಇಚ್ಛೆಯು.

ಶ್ರೀನರಸಿಂಹ—ಎಲ್ಲವೂ ನಿಮ್ಮೆಲ್ಲರ ಇಚ್ಛೆಯಂತೆಯೇ ಜರಗುವವು.

ನಾರದ—ಈ ಮಂಗಲ ಪ್ರಸಂಗದಲ್ಲಿ ಈ ಮಂಗಲಾತ್ಮನ ಸ್ತೋತ್ರ ಮಾಡಿ ಪಾವನರಾಗುವ.

### ೩೨ ಮಂಗಲ

ಸುರನರ ಧೊರೆ ನೃಹರೆ ಹರೆ |
ವೀರಾಧಿ ವೀರಾ ಶ್ರೀ ನಾಥಾ ||
ಧಾರಾತಲವ ಪೊರೆ ವಿನಾಶ ಗೊಳಿಸುತ ಖಲರ |
ಶರಣರ ಮೊರೆಯ ಕೇಳುತ ಹರಿಯೇ || ಪ ||

ಲೀಲೆಯಿಂದ ಖಲ ದೈತ್ಯ ರಾಜನನೆ |
ಶೀಳಿ ಲೋಕವನೆ ನೀ ಕಾಯ್ದೆ ||
ಬಲಯುತ ಹರಿಯೆ ನಮಿಪೆವು ಪದಕೆ |
ಇಳೆಯೊಳು ಹರಿಸೊ ಭಕ್ತಿಯ ಹೊಳೆಯ || ೧ ||

## — ಸಂಪೂರ್ಣ —

ಶ್ರೀ ಮಧ್ವೇಶಾರ್ಪಣಮಸ್ತು.

# ಶ್ರೀ ಗುರುರಾಜ ಗ್ರಂಥಮಾಲೆಯಲ್ಲಿ

ಇನ್ನುಮೇಲೆ ಅಚ್ಚಾಗುವ ಗ್ರಂಥಗಳ ಪಟ್ಟಿಯು .

**ಅಚ್ಯುತ ಕೃಷ್ಣರಾವ ಹೂಯಿಲಗೋಳ ಕೃತ .**

೨ ನೆಯ ಕುಸುಮ—ಪ್ರತಿಜ್ಞಾಭಂಗ ....ಅಥವಾ.... ಮಹಾರಥಿ ಭೀಷ್ಮ ( ನಾಟಕವು )—

೩ ನೆಯ ಕುಸುಮ—ಶ್ರೀ ಭಗವದ್ಗೀತೆಯು ( ಸಾಂಗತ್ಯದಲ್ಲಿ )—

೪ ನೆಯ ಕುಸುಮ—ಶ್ರೀ ಅಮರವೇದ ಕನ್ನಿಕೆಯು ....ಅಥವಾ........ ಶ್ರೀ ಭಗವದ್ಗೀತೆಯು (ಶ್ರೀಶ್ರೀ೧೦೮ ಸತ್ಯಧ್ಯಾನಗುರುವರ್ಯಕೃತ ಶ್ರೀ ಗೀತಾರ್ಥಪ್ರತಿಪದಾರ್ಥ ಚಂದ್ರಿಕೆಯನ್ನು ರಹಸ್ಯಗಳೊಡನೆ ತಿಳಿಗನ್ನಡದಲ್ಲಿ ಬರೆದದ್ದು.

೫ ನೆಯ ಕುಸುಮ—ಮಲತಾಯಿಯ ಪ್ರತಾಪ ....ಅಥವಾ.... ಸೊಸೆಯ ಆಹುತಿ [ ಸಾಮಾಜಿಕ ಕಾದಂಬರಿಯು . ]

೬ ನೆಯ ಕುಸುಮ—ಕನ್ನಡರಾಯ ( ವಿಜಯನಗರದ ಅಭ್ಯುದಯಕಾಲದ ಸುರಸ ಐತಿಹಾಸಿಕ ಕಾದಂಬರಿಯು )

೭ ನೆಯ ಕುಸುಮ—ಧರ್ಮವೀರ ಸಂಭಾಜಿಯ ಚರಿತ್ರೆಯು

**ಹಣಮಂತ ಅಚ್ಯುತರಾವ ಹೂಯಿಲಗೋಳ ಕೃತ**

೮ ನೆಯ ಕುಸುಮ—ಜಯಹಿಂದ ( ಹುಡುಗರ ಸಲುವಾಗಿ )

೯ ನೆಯ ಕುಸುಮ—ಬಗಾಟಬಗರಿ ( ಹುಡುಗರ ಸಲುವಾಗಿ )

**ಪುಸ್ತಕ ಸಿಕ್ಕುವ ವಿಳಾಸ—**

ಅಚ್ಯುತ ಕೃಷ್ಣರಾವ ಹೂಯಿಲಗೊಳ—

**ಗುರುರಾಜ ಗ್ರಂಥಮಾಲೆ ವಕೀಲಚಾಳ ಗದಗ**

ದಿ. ಗಳಗನಾಥರಿಂದ ಬರಿಯಲ್ಪಟ್ಟ

## ಈಗ ವಿಕ್ರಿಗೆ ತಯಾರಿದ್ದ ಪುಸ್ತಕಗಳು.

ಮರಾಟರ ಐತಿಹಾಸಿಕ ಹೊಸಪ್ರಿಂಟಿನ ಅಂದವಾದ ಹೊದಿಕೆಯುಳ್ಳ ಸುರಸ ಕಾದಂಬರಿಗಳು

| | | |
|---|---|---|
| ೧ ನೇ ಕಾದಂಬರಿ | ಈಶ್ವರೀಸೂತ್ರ | ೩—೦—೦ |
| ೨ ನೇ ಕಾದಂಬರಿ | ಮರಾಟರ ಅಭ್ಯುದಯ | ೩—೦—೦ |
| ೩ ನೇ ಕಾದಂಬರಿ | ಛತ್ರಪತಿ | ೩—೦—೦ |
| ೪ ನೇ ಕಾದಂಬರಿ | ಸ್ವರಾಜ್ಯಸುಗಂಧ | ೩—೦—೦ |
| ೫ ನೇ ಕಾದಂಬರಿ | ಕಮಲಕುಮಾರಿ | ೨—೮—೦ |
| ೬ ನೇ ಕಾದಂಬರಿ | ಗೃಹಕಲಹ | ೨—೧೦—೦ |
| ೭ ನೇ ಕಾದಂಬರಿ | ಶಿವಪ್ರಭುವಿನಪುಣ್ಯ | ೩—೦—೦ |
| ೮ ನೇ ಕಾದಂಬರಿ | ಕುರುಕ್ಷೇತ್ರ | ೨—೮—೦ |

### ಪೌರಾಣಿಕ ಗ್ರಂಥಗಳು.

| | | | |
|---|---|---|---|
| ೧ | ಮಹಾ ಭಾರತಾಮೃತ | ಆದಿಪರ್ವ | ೪—೦—೦ |
| ೨ | ಮಹಾ ಭಾರತಾಮೃತ | ಸಭಾಪರ್ವ | ೩—೮—೦ |

### ಇತರ ಪುಸ್ತಕಗಳು.

| | | |
|---|---|---|
| ೧ | ಗುರುಪ್ರಸಾದ | ೦—೧೨—೦ |
| ೨ | ಸದ್ಗುರೋತ್ತಮರು | ೦—೬—೦ |
| ೩ | ವೀರಪ್ರತಾಪ | ೦—೬—೦ |
| ೪ | ಸದ್ಗುಣಸಂಭ್ರಮ | ೦—೮—೦ |
| ೫ | ವೈಕುಂಠಕ್ಕೆ ಮುತ್ತಿಗೆ | ೧—೮—೦ |

**ಗಳಗನಾಥ ಸುರಸ ಗ್ರಂಥಮಾಲಾ ಧಾರವಾಡ.**